prajavani.net prajavani | ಸೋಮವಾರ, ಮಾರ್ಚ್ 30, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 88 | ಪುಟ 12 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

‘ಕೈ’ ಕೋಟೆ ವಶಕ್ಕೆ ಕೇಸರಿಪಡೆ ಪಣ 5
ಅಸ್ಸಾಂ: ಐದು ಗ್ಯಾರಂಟಿ ಘೋಷಿಸಿದ ‘ಕೈ’ 9

ವಾಣಿಜ್ಯ: ಪೂರೈಕೆ ಶೇ 68ಕ್ಕೆ

ಆದ್ಯತೆಗೆ ಅನುಗುಣವಾಗಿ ಹೆಚ್ಚುವರಿ ಸಿಲಿಂಡರ್ ಹಂಚಿಕೆ– ಸಚಿವ ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕಕ್ಕೆ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಪೂರೈಕೆ ಶೇ 68ಕ್ಕೆ ಹೆಚ್ಚಳವಾಗಿದೆ. ಅಗತ್ಯ ಹಾಗೂ ಆದ್ಯತೆಗೆ ತಕ್ಕಂತೆ ಭಾನುವಾರದಿಂದಲೇ (ಮಾರ್ಚ್ 29) ಈ ಹೆಚ್ಚುವರಿ ಸಿಲಿಂಡರ್‌ಗಳು ಲಭ್ಯವಾಗಲಿವೆ.

ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿ ಈ ವಿಷಯ ತಿಳಿಸಿದರು. ‘ರಾಜ್ಯದಾದ್ಯಂತ ಪ್ರತಿದಿನ ಸುಮಾರು 4 ಲಕ್ಷ ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳು ಹಾಗೂ ಸುಮಾರು 18 ಸಾವಿರ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ಪೂರೈಕೆ ಮಾಡಲಾಗುತ್ತಿದೆ’ ಎಂದರು.

‘ಗೃಹ ಬಳಕೆದಾರರಿಗೆ ಯಾವುದೇ ತೊಂದರೆ ಆಗದಂತೆ ಎಚ್ಚರಿಕೆ ವಹಿಸಲಾಗಿದೆ. ನಗರ ಪ್ರದೇಶಗಳ ಗೃಹ ಬಳಕೆದಾರರಿಗೆ ಪ್ರತಿ 25 ದಿನಗಳಿಗೊಮ್ಮೆ ಒಂದು ಸಿಲಿಂಡರ್ ವಿತರಿಸಲಾಗುತ್ತಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಪ್ರತಿ 45 ದಿನಗಳಿಗೊಮ್ಮೆ ಒಂದು ಸಿಲಿಂಡರ್ ಪೂರೈಸಲು ಕ್ರಮ ತೆಗೆದುಕೊಳ್ಳಲಾಗಿದೆ’ ಎಂದರು.

‘ಎಲ್‌ಪಿಜಿ ಸಿಲಿಂಡರ್ ಬಿಕ್ಕಟ್ಟು ಬಗೆಹರಿಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಪೆಟ್ರೋಲಿಯಂ ಸಚಿವರ ಜೊತೆ ಈಗಾಗಲೇ ಒಂದು ಸುತ್ತಿನ ಮಾತುಕತೆ ನಡೆದಿದೆ. ಇದೇ 31ರಂದು ಮತ್ತೊಂದು ಸುತ್ತಿನ ಸಭೆ ನಡೆಯಲಿದ್ದು, ವಾಣಿಜ್ಯ ಬಳಕೆಯ ಹೆಚ್ಚುವರಿ ಸಿಲಿಂಡರ್‌ಗಳ ಪೂರೈಕೆಯ ಬಗ್ಗೆ ಅಂತಿಮ ನಿರ್ಧಾರವನ್ನು ಅಂದು ಕೈಗೊಳ್ಳಲಾಗುವುದು’ ಎಂದು ಹೇಳಿದರು.

5

‘ಹಳ್ಳಿಗಳಲ್ಲಿ ಸೌದೆ ಒಲೆ ಬಳಸಿ’

‘ಸಂಕಷ್ಟ ಕಾಲದಲ್ಲಿ ಸಾರ್ವಜನಿಕರು ಸಹಕಾರ ನೀಡಬೇಕು. ಎಲ್‌ಪಿಜಿ ಮಿತಬಳಕೆ ಮಾಡಬೇಕು. ನಗರ ಭಾಗದಲ್ಲಿ ಎಲೆಕ್ಟ್ರಿಕ್ ಸ್ಟವ್ ಬಳಸಬೇಕು. ಹಳ್ಳಿ ಭಾಗದಲ್ಲಿ ಸೌದೆ ಒಲೆ ಮೂಲಕ ಅಡುಗೆ ಮಾಡಬೇಕು’ ಎಂದು ಮುನಿಯಪ್ಪ ಮನವಿ ಮಾಡಿದರು.

‘ಗ್ರಾಮೀಣ ಭಾಗದಲ್ಲಿ ಶತಮಾನಗಳಿಂದ ಸೌದೆ ಬಳಸಿ ಅಡುಗೆ ಮಾಡಿರುವುದನ್ನು ನೋಡಿದ್ದೇವೆ. ಸಿಲಿಂಡರ್ ಅಭಾವ ಇರುವುದರಿಂದ ಹಳ್ಳಿಯ ಜನ ಸೌದೆ ಒಲೆಗಳನ್ನು ಬಳಸಬೇಕು. ಬೆಂಗಳೂರು ಬಿಟ್ಟು 40 ಕಿ.ಮೀ. ಹೋದರೆ ಸೌದೆ ಸಿಗುತ್ತದೆ. ಅರಣ್ಯ ಪ್ರದೇಶ ಇರುವ ಕಡೆ ಹಸಿ ಮರ ಬಿಟ್ಟು ಒಣ ಸೌದೆ ಬಳಸಬಹುದು’ ಎಂದು ಅವರು ಸಲಹೆ ನೀಡಿದರು.

ಆದ್ಯತೆ ಮೇರೆಗೆ ಪ್ರತಿದಿನ ಯಾರಿಗೆ ಎಷ್ಟು ಸಿಲಿಂಡರ್?

ವಲಯ	ವರ್ಗ	ಸಂಖ್ಯೆ
1	ಶಿಕ್ಷಣ ಸಂಸ್ಥೆಗಳು, ವಸತಿ ನಿಲಯಗಳು, ಆಸ್ಪತ್ರೆ ಮತ್ತು ಇತರೆ ಅವಶ್ಯ ಸಂಸ್ಥೆಗಳು	4,200
2	ಸರ್ಕಾರ / ಪಿಎಸ್‌ಯು ಸಂಸ್ಥೆಗಳು, ವಿಮಾನ ನಿಲ್ದಾಣ, ರೈಲು, ಬಸ್ ನಿಲ್ದಾಣಗಳ ಕ್ಯಾಂಟೀನ್‌ಗಳು	1,200
3	ಹೋಟೆಲ್, ದಾಬಾ, ರೆಸ್ಟೋರೆಂಟ್, ಕಾರ್ಖಾನೆ, ಕೆಎಂಎಫ್, ಡೇರಿ, ಸಮುದಾಯ ಅಡುಗೆ ಕೇಂದ್ರಗಳು, ಪಿ.ಜಿ, ಕ್ಯಾಂಟೀನ್, ಕ್ರೀಡಾ ವಸತಿ ನಿಲಯಗಳು	17,500
4	ಬೀಜ ಸಂಸ್ಕರಣೆ, ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳು, ಔಷಧೋದ್ಯಮ, ಮೀನುಗಾರಿಕೆ, ಕೋಳಿ ಸಾಕಣೆ, ರೇಷ್ಮೆ ಹುಳು ಸಾಕಣೆ	6,000
5	ಇತರೆ ಅಗತ್ಯಗಳ ಆಧಾರದ ಮೇಲೆ	563
	ಒಟ್ಟು	29,463

* ಆಟೊ ಎಲ್‌ಪಿಜಿ, ಇತರೆ ವಲಯಗಳಿಗೆ ಹಿಂದಿನ ಹಂಚಿಕೆ ಆದೇಶದಂತೆ ಸಿಲಿಂಡರ್ ಪೂರೈಕೆ ಮುಂದುವರಿಯಲಿದೆ.

ಹೊರ್ಮುಜ್ ದಾಟಿದ 2 ಹಡಗು

ನವದೆಹಲಿ (ಪಿಟಿಐ): ಭಾರತದ ಧ್ವಜ ಹೊಂದಿದ್ದು, ಎಲ್‌ಪಿಜಿ ಹೊತ್ತಿರುವ ಎರಡು ಹಡಗುಗಳು ಸುರಕ್ಷಿತವಾಗಿ ಹೊರ್ಮುಜ್ ಜಲಸಂಧಿಯನ್ನು ದಾಟಿವೆ ಎಂದು ಅಧಿಕೃತ ಹೇಳಿಕೆ ತಿಳಿಸಿದೆ. ಬಿಡಬ್ಲ್ಯು ಟಿವೈಆರ್ ಮತ್ತು ಬಿಡಬ್ಲ್ಯು ಇಎಲ್‌ಎಂ ಹಡಗುಗಳು 94 ಸಾವಿರ ಟನ್ ದ್ರವೀಕೃತ ಪೆಟ್ರೋಲಿಯಂ ಅನಿಲವನ್ನು (ಎಲ್‌ಪಿಜಿ) ಹೊಂದಿವೆ.

5

‘ಭೂ ದಾಳಿಗೆ ಸಿದ್ಧತೆ’

ದುಬೈ/ಟೆಹರಾನ್ (ಎಪಿ/ಎಎಫ್‌ಪಿ): ‘ಅಮೆರಿಕ ಸೇನೆಯು ಇರಾನ್‌ನಲ್ಲಿ ಭೂ ದಾಳಿ ನಡೆಸಲು ಯೋಜನೆ ರೂಪಿಸಿದೆ’ ಎಂದು ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ. ಶತ್ರುಗಳು ಭೂದಾಳಿಗೆ ಮುಂದಾದರೆ ತಕ್ಕ ಪ್ರತ್ಯುತ್ತರ ನೀಡಲಾಗುವುದು ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ಎಚ್ಚರಿಸಿದ್ದಾರೆ.

3,500 ಯೋಧರನ್ನು ಹೊತ್ತಿರುವ ಅಮೆರಿಕದ ಯುದ್ಧ ನೌಕೆ ‘ಯುಎಸ್‌ಎಸ್ ಟ್ರಿಪೋಲಿ’ ಶುಕ್ರವಾರ ಪಶ್ಚಿಮ ಏಷ್ಯಾ ತಲುಪಿದೆ. ಭೂ ದಾಳಿ ನಡೆಸಲು ಈ ಯೋಧರನ್ನು ಪಶ್ಚಿಮ ಏಷ್ಯಾಕ್ಕೆ ಕರೆಸಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

‘ಹಲವು ದಿನ ನಡೆಯಲಿರುವ ಭೂ ದಾಳಿಗೆ ಅಮೆರಿಕ ಯೋಜನೆಗಳನ್ನು ಸಿದ್ಧಪಡಿಸುತ್ತಿದೆ. ಇರಾನ್‌ನ ಖಾರ್ಗ್ ದ್ವೀಪ ಮತ್ತು ಹೊರ್ಮುಜ್ ಜಲಸಂಧಿಯ ಸಮೀಪದ ಪ್ರದೇಶಗಳು ಈ ದಾಳಿಯಲ್ಲಿ ಸೇರಿರುವ ಸಾಧ್ಯತೆಯಿದೆ’ ಎಂದು ವಾಷಿಂಗ್ಟನ್ ಪೋಸ್ಟ್ ತನ್ನ ವರದಿಯಲ್ಲಿ ತಿಳಿಸಿದೆ. ಆದರೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭೂ ದಾಳಿ ನಡೆಸಲು ಸೇನೆಗೆ ಇನ್ನೂ ಒಪ್ಪಿಗೆ ನೀಡಿಲ್ಲ.

8

ದಿನದ ಬೆಳವಣಿಗೆ

- ದಕ್ಷಿಣ ಲೆಬನಾನ್ ಮೇಲೆ ಇಸ್ರೇಲ್ ಶನಿವಾರ ನಡೆಸಿದ ದಾಳಿಯಲ್ಲಿ ಮೂವರು ಪತ್ರಕರ್ತರು ಮೃತಪಟ್ಟಿದ್ದಾರೆ
- ಇರಾನ್‌ನ ಬಂದರು ನಗರ ಬಂದರ್ ಖಮಿರ್ ಮೇಲೆ ನಡೆದ ದಾಳಿಯಲ್ಲಿ ಐವರು ಮೃತಪಟ್ಟಿದ್ದಾರೆ ಎಂದು ಐಆರ್‌ಎನ್‌ಎ ಸುದ್ದಿ ಸಂಸ್ಥೆ ವರದಿ ಮಾಡಿದೆ.
- ಲೆಬನಾನ್‌ನಲ್ಲಿ ಮೃತಪಟ್ಟ ಇಸ್ರೇಲ್ ಸೈನಿಕರ ಸಂಖ್ಯೆ ಐದಕ್ಕೇರಿದೆ.
- ಇರಾನ್‌ನ ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ ಎಂದು ಕುವೈತ್ ಹೇಳಿದೆ.
- ಇಸ್ರೇಲ್‌ನತ್ತ ಎರಡು ಕ್ಷಿಪಣಿಗಳನ್ನು ಹಾರಿಸಲಾಗಿದೆ ಎಂದು ಯೆಮನ್‌ನ ಹೂಥಿ ಬಂಡುಕೋರರು ತಿಳಿಸಿದ್ದಾರೆ.
- ಪಶ್ಚಿಮ ಏಷ್ಯಾ ಸಂಘರ್ಷವನ್ನು ಖಂಡಿಸಿ ಟೆಲ್ ಅವೀವ್ ಸೇರಿದಂತೆ ಇಸ್ರೇಲ್‌ನ ಕೆಲವು ನಗರಗಳಲ್ಲಿ ಜನರು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ.

ವಿಟಿಯು ಕಡೆ ವಿದೇಶಿ ಕಾಲೇಜುಗಳ ನಡೆ

• ಎ.ಎಂ.ಸುರೇಶ

ಬೆಂಗಳೂರು: ದುಬೈ, ಸೌದಿ ಅರೇಬಿಯಾ, ದಕ್ಷಿಣ ಆಫ್ರಿಕಾ ದೇಶಗಳ ಸಂಸ್ಥೆಗಳು ಮಾನ್ಯತೆ ಕೋರಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ (ವಿಟಿಯು) ಎಡತಾಕಿವೆ. ಸರ್ಕಾರ ಒಪ್ಪಿಗೆ ಕೊಟ್ಟರೆ, ವಿಶ್ವವಿದ್ಯಾಲಯದ ವ್ಯಾಪ್ತಿ ಅಂತರರಾಷ್ಟ್ರೀಯ ಮಟ್ಟಕ್ಕೆ ಹಿಗ್ಗಲಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಒಳ್ಳೆಯ ಹೆಸರು ಪಡೆದಿರುವ ವಿಟಿಯು ಮಾನ್ಯತೆಯಡಿ ಕಾಲೇಜು ಆರಂಭಿಸಲು ವಿವಿಧ ದೇಶಗಳಿಂದ ಅರ್ಜಿಗಳು ಬಂದಿವೆ. ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಇದಕ್ಕೆ ಅವಕಾಶ ಮಾಡಿಕೊಟ್ಟಿದೆ. ರಾಜ್ಯ ಸರ್ಕಾರ ವಿಶ್ವವಿದ್ಯಾಲಯ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ವಿದೇಶಗಳಲ್ಲಿನ ಕಾಲೇಜುಗಳಿಗೂ ಮಾನ್ಯತೆ ನೀಡಲು ಅನುಮತಿ ನೀಡಬೇಕಾಗುತ್ತದೆ ಎಂದು ವಿಟಿಯು ಕುಲಪತಿ ಎಸ್.ವಿದ್ಯಾಶಂಕರ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಐಐಟಿಗಳು ಈಗ ವಿದೇಶಗಳಲ್ಲಿ ಶಾಖೆಗಳನ್ನು ತೆರೆಯುತ್ತಿವೆ. ಅದೇ ರೀತಿ ನಾವು ಕೂಡ ತೆರೆಯಬಹುದು. ಆದರೆ, ಅಷ್ಟೊಂದು ಆರ್ಥಿಕ ಸಾಮರ್ಥ್ಯವನ್ನು ನಾವು ಹೊಂದಿಲ್ಲ. ಹೀಗಾಗಿ ವಿದೇಶಗಳಲ್ಲಿನ ಕಾಲೇಜುಗಳಿಗೆ ಮಾನ್ಯತೆ ನೀಡಬಹುದು. ಅಲ್ಲದೆ ಶುಲ್ಕ ರೂಪದಲ್ಲಿ ಆರ್ಥಿಕ ಸಹಾಯವೂ ಆಗಲಿದೆ’ ಎಂದು ಅಭಿಪ್ರಾಯಪಟ್ಟರು.

3B

> **ವಿದೇಶದಿಂದಲೂ ಮಾನ್ಯತೆಗಾಗಿ ಮನವಿ ಬರುತ್ತಿದ್ದು, ಅನುಮತಿ ಕೋರಿ ಸರ್ಕಾರಕ್ಕೆ ಪತ್ರ ಬರೆಯಲಾಗುವುದು. ಇದಕ್ಕೆ ಅವಕಾಶ ಸಿಕ್ಕರೆ, ಅಂತರರಾಷ್ಟ್ರೀಯ ಮಟ್ಟದಲ್ಲೂ ವಿಶ್ವವಿದ್ಯಾಲಯವು ಹೆಚ್ಚು ಜನಪ್ರಿಯವಾಗಲಿದೆ**
> **ಎಸ್.ವಿದ್ಯಾಶಂಕರ್,** ಕುಲಪತಿ, ವಿಟಿಯು

‘1,500 ಲ್ಯಾಬ್ ಟೆಕ್ನೀಷಿಯನ್ ನೇಮಕಕ್ಕೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ 1500ಕ್ಕೂ ಹೆಚ್ಚು ವೈದ್ಯಕೀಯ ಪ್ರಯೋಗಾಲಯ ತಂತ್ರಜ್ಞರ (ಲ್ಯಾಬ್ ಟೆಕ್ನೀಷಿಯನ್) ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಕರ್ನಾಟಕ ರಾಜ್ಯ ಮೆಡಿಕಲ್ ಲ್ಯಾಬ್ ಟೆಕ್ನಾಲಜಿಸ್ಟ್ ಅಸೋಸಿಯೇಷನ್ ನಗರದ ಕುವೆಂಪು ಕಲಾಕ್ಷೇತ್ರದಲ್ಲಿ ಭಾನುವಾರ ಆಯೋಜಿಸಿದ್ದ ವೈದ್ಯಕೀಯ ಪ್ರಯೋಗಾಲಯ ತಂತ್ರಜ್ಞರ ರಾಜ್ಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ‘ಸರ್ಕಾರಿ ಆಸ್ಪತ್ರೆಗಳಲ್ಲಿ ರಕ್ತ, ಮೂತ್ರದ ಪರೀಕ್ಷೆಗಳ ಪ್ರಯೋಗಾಲಯಗಳಿದ್ದು, ಇಲ್ಲಿ ಹುದ್ದೆಗಳು ಖಾಲಿ ಇವೆ. ತಂತ್ರಜ್ಞರ ನೇಮಕಕ್ಕೆ ಗಮನ ನೀಡುತ್ತೇವೆ’ ಎಂದರು.

5

ಚಿನಕುರುಳಿ
ಪ್ರಕಾಶ್ ಶೆಟ್ಟಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ, ಅಲ್ಲಲ್ಲಿ ಗುಡುಗು ಸಹಿತ ಮಳೆ ಸಾಧ್ಯತೆ

ಸುದ್ದಿವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಸ್ವಚ್ಛತೆ ಜಾಗೃತಿಗೆ ಜಿಬಿಎ 'ಐಪಿಎಲ್' ಅಭಿಯಾನ

ಕಸ ಎಸೆಯುವ ಜಾಗ ಸ್ವಚ್ಛಗೊಳಿಸಿ ಸುಂದರಗೊಳಿಸುತ್ತದೆ ಆರ್‌ಸಿಬಿ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಲ್ ಹಾಗೂ ಆರ್‌ಸಿಬಿ ಹವಾ ಶುರುವಾಗಿರುವ ನಡುವೆಯೇ ಬೆಂಗಳೂರಿನಲ್ಲಿ ಸ್ವಚ್ಛತೆಗೂ ವಿಭಿನ್ನ ಐಪಿಎಲ್ ಆರಂಭಗೊಂಡಿದೆ. ಅದು ಇಂಡಿಯನ್ ಪ್ರೀಮಿಯರ್ ಲೀಗ್. ಆದರೆ, ಇದು ಇಂಡಿಯನ್ ಪೆಡಸ್ಟ್ರಿಯನ್ ಲೀಗ್. ರಸ್ತೆ ಕ್ಲೀನ್ ಅಪ್ ಬೆಂಗಳೂರು(ಆರ್‌ಸಿಬಿ) ಎನ್ನುವ ಹೆಸರನ್ನೂ ಇದಕ್ಕೆ ಇಡಲಾಗಿದೆ.

ನಗರದ ಪ್ರಮುಖ ರಸ್ತೆ ಹಾಗೂ ರಸ್ತೆ ಬದಿಯ ಜಾಗವನ್ನು ಸ್ವಚ್ಛವಾಗಿಡುವ, ಕಸ ಎಸೆದು ಪರಿಸರ ಹಾಳು ಮಾಡುವುದನ್ನು ತಪ್ಪಿಸಿ ಸ್ಥಳೀಯರಲ್ಲಿ ಜಾಗೃತಿ ಮೂಡಿಸುವ ಅಭಿಯಾನವಿದು.

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತವು ಸ್ವಚ್ಛ ಸರ್ವೇಕ್ಷಣ- 2026 ಅಡಿಯಲ್ಲಿ ಈಗಾಗಲೇ ಹಲವು ಚಟುವಟಿಕೆಗಳನ್ನು ಆರಂಭಿಸಿದೆ. ಇದರ ಭಾಗವಾಗಿ ಎರಡು ವಾರ ವಿಭಿನ್ನವಾಗಿ ಕಾರ್ಯಕ್ರಮ ರೂಪಿಸಲಾಗಿದೆ.

> **ಅರುಣ್ ಪೈ ಸಾಥ್**
>
> ಸ್ವಚ್ಛತಾ ರಾಯಭಾರಿಯಾಗಿ ಉತ್ತರ ನಗರ ಪಾಲಿಕೆಗೆ ಅರುಣ್ ಪೈ ಅವರನ್ನು ನೇಮಿಸಲಾಗಿದ್ದು, ಅವರು ಆರ್‌ಸಿಬಿ ಅಭಿಯಾನದಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದಾರೆ. ಅವರೊಂದಿಗೆ ಸ್ವಯಂ ಸೇವಕರೂ ಕೈ ಜೋಡಿಸಿದ್ದಾರೆ.
>
> ಆಯಾ ವಿಭಾಗ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಪೌರಕಾರ್ಮಿಕರು, ಆರೋಗ್ಯ ಶಾಖೆಯ ಅಧಿಕಾರಿ, ಸಿಬ್ಬಂದಿ ಈ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ನಗರದಲ್ಲಿ ಕಸ ಸಂಗ್ರಹಣೆ, ವಿಂಗಡಣೆ ಹಾಗೂ ನಿರ್ವಹಣೆ ಸವಾಲಿನ ಕೆಲಸ. ಈಗಾಗಲೇ ಪ್ರತಿನಿತ್ಯ ಸಾವಿರಾರು ಮಂದಿ ಪೌರಕಾರ್ಮಿಕರು, ಅಧಿಕಾರಿಗಳ ತಂಡದೊಂದಿಗೆ ಪ್ರತ್ಯೇಕ ಘಟಕ ಕಾರ್ಯನಿರತವಾಗಿದೆ.

ಹಲವು ಕಡೆ ಕಸ ಎಸೆಯುವುದನ್ನು ತಪ್ಪಿಸಿ, ಮನೆಯಿಂದ ಸಂಗ್ರಹಿಸುವ ಕಾರ್ಮಿಕರಿಗೆ ಕಸ ನೀಡುವಂತೆ ಜಾಗೃತಿ ಮೂಡಿಸಲಾಗುತ್ತಿದೆ. ಆದರೂ, ಒಂದು ಕಡೆ ವಾಹನ ನಿಲ್ಲಿಸಿದರೆ ಮತ್ತೊಂದು ಕಡೆ ಕಸ ಎಸೆದು ಹೋಗುವವರ ಸಂಖ್ಯೆಯೂ ಅಧಿಕವಾಗುತ್ತಿದೆ. ಈ ಕಾರಣದಿಂದಲೇ ಈಗ ಒಂದೂವರೆ ತಿಂಗಳು ಐಪಿಎಲ್ ಕ್ರಿಕೆಟ್ ಹವಾ ಇರುವುದರಿಂದ ಅದನ್ನೇ ಬಳಸಿಕೊಂಡು ನಗರದ ಹಲವೆಡೆ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದೆ.

ಶಾಂತಿನಗರ ವರ್ತುಲ ರಸ್ತೆ ಬಳಿ ಎಸೆದಿರುವ ಕಸ(ಎಡಚಿತ್ರ) ಅಭಿಯಾನದಡಿ ಸ್ವಚ್ಛತೆ ನಂತರ ಸುಂದರಗೊಂಡ ಸ್ಥಳ

ಜಿಬಿಎ ವ್ಯಾಪ್ತಿಯ 27 ವಿಧಾನಸಭಾ ಕ್ಷೇತ್ರಗಳ ಪ್ರಮುಖ ರಸ್ತೆಯಲ್ಲಿ ಕಸ ಎಸೆಯುವ ಎರಡು ಜಾಗಗಳನ್ನು ಗುರುತಿಸಿ ಅವುಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ. ಕಸ ತೆರವಿನ ನಂತರ ಇಡೀ ಪರಿಸರವನ್ನು ಸುಂದರಗೊಳಿಸಿ ಅಲ್ಲಿ ಕಸ ಹಾಕದಂತೆ ಮಾಡಲಾಗುತ್ತಿದೆ.

ನಿಲ್ಲದ ಕಸ ಎಸೆತ: ಶಾಂತಿನಗರದ ವರ್ತುಲ ರಸ್ತೆ, ಶಿವಾಜಿನಗರ ಬಸ್ ನಿಲ್ದಾಣ ಸಮೀಪ, ಕಂಟೋನ್ಮೆಂಟ್ ನಿಲ್ದಾಣ ಸೇರಿದಂತೆ ಹಲವು ಜಾಗಗಳನ್ನು ಗುರುತಿಸಿ ಕೇಂದ್ರ ನಗರಪಾಲಿಕೆಯಿಂದ ಸ್ವಚ್ಛತೆ ಅಭಿಯಾನ ಕೈಗೊಳ್ಳಲಾಗಿದೆ. ಸ್ಥಳೀಯ ಸ್ವಯಂ ಸೇವಾ ಸಂಘಟನೆಗಳು ಇದಕ್ಕೆ ಕೈ ಜೋಡಿಸಿವೆ.

ಶಾಂತಿನಗರ ವರ್ತುಲ ರಸ್ತೆ ಬಳಿ ಜನ ವಸತಿ ಕಡಿಮೆ. ಇದು ಮಿಲಿಟರಿ ಪ್ರದೇಶ ಆಗಿರುವುದರಿಂದ ಬೀದಿ ಬದಿ ವ್ಯಾಪಾರಿಗಳು ಕಸ ಎಸೆಯುವುದನ್ನು ನಗರ ಪಾಲಿಕೆ ಅಧಿಕಾರಿಗಳೇ ಪತ್ತೆ ಮಾಡಿದ್ದಾರೆ. ಹಲವು ಬಾರಿ ಸೂಚನೆ ನೀಡಿದ್ದರೂ ರಸ್ತೆ ದಾಟುವಾಗ ಎಸೆದು ಹೋಗುತ್ತಾರೆ.

ಅದೇ ರೀತಿ ಶಿವಾಜಿನಗರ ಭಾಗದಲ್ಲಿ ಕಸವನ್ನು ಜನರೇ ಎಸೆದು ಹೋಗುತ್ತಿದ್ದಾರೆ. ಬಹುತೇಕ ನಗರದ ಪ್ರಮುಖ ಬಡಾವಣೆಗಳ ಒಂದೊಂದು ಕಡೆ ಇಂತಹ ಸಮಸ್ಯೆ ಇದೆ.

'ಈಗಾಗಲೇ ಸಮಸ್ಯೆ ಇರುವ ಸ್ಥಳಗಳನ್ನು ಪಟ್ಟಿ ಮಾಡಿ ಅಲ್ಲಿ ಬೆಳಿಗ್ಗೆ 7 ರಿಂದ 11 ರವರೆಗೆ ಸ್ವಚ್ಛತೆ ಕೈಗೊಂಡಿದ್ದೇವೆ. ಶಾಂತಿನಗರದಲ್ಲಿಯೇ ಎರಡು ಟನ್ ಕಸ ಸಿಕ್ಕಿತು. ಅದನ್ನು ಸಾಗಿಸಿ ಅಲ್ಲಿ ಗೋಡೆ ನಿರ್ಮಿಸಿ ಹಸಿರು ಪಟ್ಟಿ ಹಾಕಿ ಸ್ವಚ್ಛವಾಗಿ ಮಾಡಿದ್ದೇವೆ. ಇದೇ ರೀತಿ ಇತರ ಕಡೆಯೂ ಚಟುವಟಿಕೆ ನಡೆದಿದೆ' ಎಂದು ಶಾಂತಿನಗರ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅಪ್ಪುರಾಜ್ ತಿಳಿಸಿದರು.

ಉಪಶಮನ ಆರೈಕೆ: ತಾಂತ್ರಿಕ ಸಲಹಾ ಸಮಿತಿ ರಚನೆ

ಬೆಂಗಳೂರು: ರೋಗಿಯ ಜೀವನ ಗುಣಮಟ್ಟ ಸುಧಾರಣೆಗೆ ಸಹಕಾರಿಯಾದ ಉಪಶಮನ ಆರೈಕೆಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯು ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿ ರಚಿಸಿದೆ.

ಗಂಭೀರ, ದೀರ್ಘಕಾಲೀನ ಹಾಗೂ ಮಾರಣಾಂತಿಕ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಕೇರಳ ಮಾದರಿಯಲ್ಲಿ ಗೃಹಾಧಾರಿತ ಉಪಶಮನ ಆರೈಕೆ ಒದಗಿಸಲು ಇಲಾಖೆ ಮುಂದಾಗಿದೆ. ಹೀಗಾಗಿ, ಉಪಶಮನ ಆರೈಕೆಗೆ ಸಂಬಂಧಿಸಿದಂತೆ ಯೋಜನೆ ರೂಪಿಸಲು, ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಹಾಗೂ ನಿಗಾ ವಹಿಸಲು ಸಮಿತಿ ರಚಿಸಲಾಗಿದ್ದು, ನಿವೃತ್ತ ಐಎಎಸ್ ಅಧಿಕಾರಿ ರಾಜ್ ಕುಮಾರ್ ಖತ್ರಿ ಸಮಿತಿ ಅಧ್ಯಕ್ಷರಾಗಿದ್ದಾರೆ.

ಆರೋಗ್ಯ ಇಲಾಖೆ ನಿರ್ದೇಶಕರು, ಸಾಂಕ್ರಾಮಿಕವಲ್ಲದ ರೋಗಗಳ ವಿಭಾಗದ ಉಪ ನಿರ್ದೇಶಕರು, ಮಾನಸಿಕ ಆರೋಗ್ಯ ವಿಭಾಗದ ಉಪ ನಿರ್ದೇಶಕರು ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಲಿದ್ದಾರೆ. ಉಪಶಮನ ಔಷಧ ತಜ್ಞರಾದ ಡಾ.ಅನುರಾಧಾ ಗಾಣಿಗರ, ಡಾ.ಯಧುರಾಜ್ ಗೌಡ, ಡಾ. ರಜನಿ ಸುರೇಂದ್ರ ಭಟ್ ಹಾಗೂ ಡಾ. ನಂದಿನಿ ವಲ್ಲತ್ ಅವರು ಸಮಿತಿಯಲ್ಲಿದ್ದು, ವಿಷಯ ತಜ್ಞರಾಗಿ ಅಗತ್ಯ ಸಲಹೆ ಸೂಚನೆ ನೀಡಲಿದ್ದಾರೆ.

ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು ಸಹ ಈ ಸಮಿತಿಯಲ್ಲಿ ಇರಲಿದ್ದಾರೆ. ಸಮಿತಿಯು ಉಪಶಮನ ಆರೈಕೆ ಸಂಬಂಧಿಸಿದಂತೆ ನೀತಿ ಮತ್ತು ಮಾರ್ಗಸೂಚಿಗಳನ್ನು ರೂಪಿಸುವ ಜತೆಗೆ, ಆರೈಕೆಗೆ ಸಂಬಂಧಿಸಿದಂತೆ ಪರಿಶೀಲನೆ, ಮಾರ್ಗದರ್ಶನ ಸೇರಿ ಉಪಶಮನ ಆರೈಕೆಯನ್ನು ಫಲಾನುಭವಿಗಳಿಗೆ ಪರಿಣಾಮಕಾರಿಯಾಗಿ ಒದಗಿಸಲು ಶ್ರಮಿಸಲಿದೆ.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in

ಟೆಂಡರು ಸೂಚನೆ ಸಂ.: ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಎಂಎಸ್/2025–26/98ಆರ್‌ಟಿ3 ದಿನಾಂಕ 28.03.2026

ಇ–ಟೆಂಡರ್: ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್ ಕೆಳಗಿನ ಕಾಮಗಾರಿಗಳಿಗಾಗಿ **ಎರಡು ಕವರ್ ವ್ಯವಸ್ಥೆಯಲ್ಲಿ** ಎಲೆಕ್ಟ್ರಾನಿಕ್ ಟೆಂಡರುಗಳನ್ನು ಆನ್‌ಲೈನ್ ವೆಬ್‌ಸೈಟ್ **http://www. ireps. gov.in (Works)** ಮೂಲಕ ಆಹ್ವಾನಿಸಿದ್ದಾರೆ.
ಟೆಂಡರು ಸಂ: ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಎಂಎಸ್/2025–26/98ಆರ್‌ಟಿ3 ದಿ. 28.03.2026 **ಕಾಮಗಾರಿ ಹೆಸರು:** ಫರ್ಮ್ ಆವರಣದಲ್ಲಿ 27557 ನಂ. ಎಲ್‌ಹೆಚ್‌ಬಿ ಆಕ್ಸೆಲ್‌ಗಳ ಮಶೀನಿಂಗ್ (ರಫ್ ಟರ್ನಿಂಗ್ / ಸೆಮಿ ಫಿನಿಶಿಂಗ್) ಹೊರಗುತ್ತಿಗೆ. **ಅಂದಾಜು ಮೌಲ್ಯ:** ರೂ. 30,40,36,381/–. **ಇಎಂಡಿ:** ರೂ. 16,70,200/–. **ಮುಕ್ತಾಯದ ಅವಧಿ:** 15 ತಿಂಗಳುಗಳು. **ಟೆಂಡರು ಕೊನೆಗೊಳ್ಳುವ ದಿನಾಂಕ:** 20.04.2026, 10:30 ಗಂಟೆಗೆ.
ಉಪ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್/ಎಪಿ

ಟೆಂಡರು ಸೂಚನೆ ಸಂ.: ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಎಂಎಸ್/2025–26/99ಆರ್‌ಟಿ3 ದಿನಾಂಕ 28.03.2026

ಇ–ಟೆಂಡರ್: ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್ ಕೆಳಗಿನ ಕಾಮಗಾರಿಗಳಿಗಾಗಿ ಎಲೆಕ್ಟ್ರಾನಿಕ್ ಟೆಂಡರುಗಳನ್ನು ಆನ್‌ಲೈನ್ ವೆಬ್‌ಸೈಟ್ **http://www.ireps. gov.in (Works)** ಮೂಲಕ ಆಹ್ವಾನಿಸಿದ್ದಾರೆ.
ಟೆಂಡರು ಸಂ: ಆರ್‌ಡಬ್ಲ್ಯೂಎಫ್/ಎಂ/ಓಟಿ/ಎಎಂಎಸ್/2025–26/ಆರ್‌ಟಿ3 ದಿ. 28.03.2026 **ಕಾಮಗಾರಿ ಹೆಸರು:** ಫರ್ಮ್ ಆವರಣದಲ್ಲಿ 8712 ನಂ. ಡಬ್ಲ್ಯೂಎಜಿ–9 ಆಕ್ಸೆಲ್‌ಗಳ ಮಶೀನಿಂಗ್ (ರಫ್ ಟರ್ನಿಂಗ್ / ಸೆಮಿ ಫಿನಿಶಿಂಗ್) ಹೊರಗುತ್ತಿಗೆ. **ಅಂದಾಜು ಮೌಲ್ಯ:** ರೂ. 6,66,11,952/–. **ಇಎಂಡಿ:** ರೂ. 4,83,100/–. **ಮುಕ್ತಾಯದ ಅವಧಿ:** 15 ತಿಂಗಳುಗಳು. **ಟೆಂಡರು ಕೊನೆಗೊಳ್ಳುವ ದಿನಾಂಕ:** 20.04.2026, 10:30 ಗಂಟೆಗೆ.
ಈ ಟೆಂಡರ್ ಪ್ರಕಟಣೆಯನ್ನು **www.rwf.indianrailways.gov.in** ರಲ್ಲಿ ನೋಡಬಹುದು.
ಉಪ ಮುಖ್ಯ ಮೆಕ್ಯಾನಿಕಲ್ ಇಂಜಿನಿಯರ್/ಎಪಿ

'ಬ್ರಿಟಿಷರ ವಿರುದ್ಧ ಧ್ವನಿ ಎತ್ತದ ಆರ್‌ಎಸ್‌ಎಸ್'

ಬೆಂಗಳೂರು: 'ಟಿಪ್ಪು ಸುಲ್ತಾನ್ ದೇಶದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಹೋರಾಡಿದ್ದರು. ಟಿಪ್ಪು ನಿಜವಾದ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಆರ್‌ಎಸ್‌ಎಸ್‌ನವರು ಬ್ರಿಟಿಷರ ವಿರುದ್ಧ ಸಣ್ಣ ಧ್ವನಿಯನ್ನೂ ಎತ್ತಲಿಲ್ಲ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು.

ನವಕರ್ನಾಟಕ ಪ್ರಕಾಶನ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ನವೀನ್ ಸೂರಿಂಜೆ ಅವರ ಕರಾವಳಿಯ ಚರಿತ್ರೆಯಲ್ಲಿ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್ ಪುಸ್ತಕ ಜನಾರ್ಪಣೆಗೊಳಿಸಿ ಅವರು ಮಾತನಾಡಿದರು.

'ಟಿಪ್ಪು ಸುಲ್ತಾನ್ ಸ್ವಾತಂತ್ರ್ಯ ಹೋರಾಟಗಾರರಲ್ಲ ಎಂದು ಬಿಜೆಪಿ ಮತ್ತು ಆರ್‌ಎಸ್‌ಎಸ್‌ನವರು ವಾದ ಮಾಡುತ್ತಾರೆ. ಆದರೆ, ಟಿಪ್ಪು ಬ್ರಿಟಿಷರ ವಿರುದ್ಧ ನಾಲ್ಕು ಆಂಗ್ಲೊ-ಮೈಸೂರು ಯುದ್ಧಗಳನ್ನು ಮಾಡಿದ್ದು ನಿಜವೊ, ಸುಳ್ಳೊ? ಬ್ರಿಟಿಷರ ವಿರುದ್ಧ ಹೋರಾಡಿದವರು ಸ್ವಾತಂತ್ರ್ಯ ಹೋರಾಟಗಾರರು ಅಲ್ಲವೇ' ಎಂದು ಪ್ರಶ್ನಿಸಿದರು.

'ಟಿಪ್ಪುಸುಲ್ತಾನ್ ತೋಟಗಾರಿಕೆಯ ಪಿತಾಮಹ ಆಗಿದ್ದಾರೆ. ಈ ಬಗ್ಗೆ ದಾಖಲೆಗಳಿವೆ. ಬೆಂಗಳೂರಿನ ಲಾಲ್‌ಬಾಗ್ ಅನ್ನು ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ್ ನಿರ್ಮಿಸಿದ್ದಾರೆ. ಆದರೆ, ಆ ಭಾಗದ ಸಂಸದರು ಟಿಪ್ಪು ವಿರೋಧಿಯಾಗಿದ್ದಾರೆ. ಹಾಗಾದರೆ ಲಾಲ್‌ಬಾಗ್ ಅನ್ನು ಸುಡುತ್ತೀರಾ' ಎಂದು ಪ್ರಶ್ನಿಸಿದರು.

'ಚಿಕ್ಕಮಗಳೂರಿಗೆ ಕಾಫಿ ಪರಿಚಯಿಸಿದವರು ಮುಸ್ಲಿಮರು, ಈಗ ಸಿ.ಟಿ. ರವಿ ಸೇರಿದಂತೆ ಆರ್‌ಎಸ್‌ಎಸ್ ಹಾಗೂ ಬಿಜೆಪಿ ಮುಖಂಡರು ಕಾಫಿ ಎಸ್ಟೇಟ್‌ಗಳ ಮಾಲೀಕರಾಗಿದ್ದಾರೆ. ಶೇಕಡ 80ರಷ್ಟು ಎಲ್‌ಪಿಜಿ, ಕಚ್ಚಾ ತೈಲವನ್ನು ಇಸ್ಲಾಮಿಕ್ ದೇಶಗಳಿಂದ ಆಮದು ಮಾಡಿಕೊಳ್ಳುತ್ತೇವೆ. ಮುಸ್ಲಿಮ್ ದೇಶಗಳು ಎಂಬ ಕಾರಣಕ್ಕೆ ಆಮದು ಮಾಡಿಕೊಳ್ಳುವುದನ್ನು ಕೈಬಿಡುತ್ತೇವೆಯೇ? ಬಿಜೆಪಿಯವರು ಈ ದ್ವಂದ್ವ ನೀತಿಯನ್ನು ಕೈಬಿಡಬೇಕು' ಎಂದು ಸಲಹೆ ಮಾಡಿದರು.

ಸಾಹಿತಿ ಬಂಜಗೆರೆ ಜಯಪ್ರಕಾಶ್, ಇತಿಹಾಸಕಾರ್ತಿ ರುಚಿಕಾ ಶರ್ಮ, ಚಿಂತಕ ಸಿದ್ದನಗೌಡ ಪಾಟೀಲ್, ಪತ್ರಕರ್ತ ಸುದೀಪ್ತೊ ಮೊಂಡಲ್, ಹೋರಾಟಗಾರ ಮುನೀರ್ ಕಾಟಿಪಳ್ಳ ಉಪಸ್ಥಿತರಿದ್ದರು.

> **ಇತಿಹಾಸವನ್ನು ಕೆದಕಲು ಹೋದರೆ ಎಲ್ಲರೂ ಸಿಕ್ಕಿಹಾಕಿಕೊಳ್ಳುತ್ತಾರೆ. ಯಾವುದೇ ಮಸೀದಿ ಕೆಡವಿದರೂ ದೇವಸ್ಥಾನ ಸಿಗಬಹುದು, ದೇವಸ್ಥಾನ ಕೆಡವಿದರೆ ಸ್ತೂಪ ಸಿಗಬಹುದು. ಸ್ತೂಪ ಕೆಡವಿದರೆ ಮತ್ತೇನೋ ಸಿಗಬಹುದು**
> **ಪ್ರಿಯಾಂಕ್ ಖರ್ಗೆ,** ಗ್ರಾಮೀಣಾಭಿವೃದ್ಧಿ ಸಚಿವ

CONNECT

ಅದ್ಧೂರಿ ಉದ್ಘಾಟನೆ
ನಮ್ಮ 3ನೇ ಮಳಿಗೆ
MYSORE SILKS ಸೀರೆ ಉತ್ಸವ By Sulakshmi Silks
Opening Offer 60% off
ON PURE MYSORE CREPE SILK SAREE

ಸೀರೆ ಉತ್ಸವ-3 ನಮ್ಮೊಂದಿಗೆ ಸೇರಿ ಆಚರಿಸಿ
ನಮ್ಮ ಹೊಸ ಮಳಿಗೆಯಲ್ಲಿ 16 ರಿಂದ 31ನೇ ಮಾರ್ಚ್ 2026 ರ ವರೆಗೆ
SULAKSHMI SILKS
ಕರ್ನಾಟಕದ ಅತಿದೊಡ್ಡ ಸೀರೆ ಉತ್ಸವ
ಸಂಪರ್ಕಿಸಿ: 99727 18898 | 93531 38343 | 9886306643 | 96631 27606
ಸ್ಥಳ: ನಂ.119/1, ಶ್ರೀನಿಧಿ ಕಾಂಪ್ಲೆಕ್ಸ್, 11ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

SCRAP SALE
TOYOTA BOSHOKU AUTOMOTIVE INDIA PVT LTD
Plant-1: #41,Bhimenahalli, MN Halli Post, Bidadi, Ramanagaram Taluk, Bangalore, Karnataka, Pin:562 109
Plant-2 : Gundukurki Road, Nallaganakothapalli Village, Hosur Taluk, Krishnagiri Dist, Tamil Nadu. Pin : 635 117

Sl No	MATERIAL	Quantity / Year (Ton)		
		Plant#1	Plant#2	Total
1	Incineration / Reprocessing cut pieces of Carpet, Fabric, PVC with Foam & PU chemical	365	20	385
2	Carton Box / Paper Board	220	20	240
3	Waste Airfilter Paper	35	-	35
4	MS Scrap	150	110	260
5	MS Headrest Pipes	-	80	80
6	MS Steel & Wood (Metal Box)	-	18	18
7	MS Rail with Plastic wheels	7	-	7
8	Empty Metal Barrels	140	-	140
9	Plastic & PVC (High Grade)	85	15	100
10	Plastics Painted & Nylon parts (Low Grade)	51	-	51
11	Wood scrap	70	30	100
12	PU Foam	20	-	20
13	Used Batteries	3	-	3
14	Others-Cut pieces of Felt, Cable/ Wire (Al) & Recyclable Glass	9	-	9

NOTE : **1.**State pollution control board approval for all above materials is mandatory. **2.**Interested parties can inspect the scrap in the above premises b/w 1st Apr'26 ~ 6th Apr'26 from 2.0 pm to 5.0 pm **3.**Quotation to be submitted on or Before 10/04/2026. **4.**Agreement period: 1st May 2026 to 30th April 2027. **5.** Interested parties can submit quote & contact below members for scrap inspection at plants.
e-mail: gy.narasimhamurthy@toyota-boshoku.com, M: 09663881794

I, VENKATARAVANA SETTY, Residing at #40, 1st main, Subbanna Garden, Vijayanagar, Bengaluru-40 have changed my name as N. VENKATARAMANA SETTY, vide affidavit dated 27/03/2026 before Notary H.S. Sakalesh Aradhya, Bengaluru

I SHEELA K W/O Pradeep Kumar G R/o Kariyappa Layout 4th Cross Channamumbapura Abbalagere Shimoga Karnataka 577225 have changed my name Sheela K to Sheela Pradeep Kumar.

JOB OPPORTUNITIES

Drivers

WANTED PERSONAL CAR DRIVER (KIA/MG HECTOR) with valid licence. Location: Bommanahalli OR Kadubeesanahalli Contact: 9980140661

Graphic Designers

REQUIRED GRAPHIC Designer- Photoshop/ Corel Draw/ Illustrator Experience 1 Year or above in around Rajajinagar. Contact: 9902891620/ 9845579620

HRD & Admin

WANTED Female Office Assistant Any Degree Knowing Tally, Fluent In English, Kannada, Hindi Around Rajajinagar Contact: 9902891620/ 9845579620

MATRIMONIAL

Grooms Wanted

Malayalam

PROPOSALS INVITED for my daughter 25 years, Malayali Hindu Thiya, M.Sc statistics, working MNC Bangalore, star Bharani, Cell-9746889952, E-mail: krishnakumarexe@gmail.com

PERSONAL

Change of Name

CHANGE OF NAME
I, **Sushrut Vaidya** S/o Satish Rudrappa, R/at C7, T-ZED Homes, R. Narayanapura, Behind Sigma Tech Park, Varthur Kodi, Whitefield, Bengaluru-560066, have changed my name to **SUSHRUT S VAIDYA** vide affidavit dated 28-03-2026 before notary Chandrakala, Bengaluru. Henceforth I shall be called **SUSHRUT S VAIDYA** only

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಜಿಎಸ್‌ಟಿ ತೆರಿಗೆದಾತರೇ ಗಮನಿಸಿ!

ಸರಾಸರಿ ವಾರ್ಷಿಕ ವಹಿವಾಟು# ನಿಗದಿತ ಮಿತಿಯೊಳಗೆ* ಇರುವ ತೆರಿಗೆದಾತರು, 31ನೇ ಮಾರ್ಚ್, 2026 ರೊಳಗೆ ತಮ್ಮ ಹ.ವ. 2026–2027ನೇ ಸಾಲಿಗೆ ಜಿಎಸ್‌ಟಿ ಕಂಪೋಸಿಷನ್ ಸ್ಕೀಮ್ ಆಯ್ಕೆ ಮಾಡಿಕೊಳ್ಳಬಹುದು

वित्त मंत्रालय MINISTRY OF FINANCE

ಜಿಎಸ್‌ಟಿ ಕಂಪೋಸಿಷನ್ ಸ್ಕೀಮ್

ಜಿಎಸ್‌ಟಿ ಕಂಪೋಸಿಷನ್ ಸ್ಕೀಮ್ ಪಡೆದುಕೊಳ್ಳಲು ಬಯಸುವ ಅರ್ಹ ತೆರಿಗೆದಾತರು, ಜಿಎಸ್‌ಟಿ ಪೋರ್ಟಲ್‌ನಲ್ಲಿ (www.gst.gov.in) ಕೆಳಕಂಡ ಹಂತಗಳನ್ನು ಅನುಸರಿಸಬೇಕು:

- ಟ್ಯಾಕ್ಸ್‌ಪೇಯರ್ಸ್ ಇಂಟರ್‌ಫೇಸ್‌ಗೆ ಲಾಗಿನ್ ಆಗಿರಿ
- ಕಂಪೋಸಿಷನ್ ಲೆವಿ ಪಡೆದುಕೊಳ್ಳಲು ಸರ್ವೀಸಸ್ > ರಿಜಿಸ್ಟ್ರೇಶನ್ > ಅಪ್ಲಿಕೇಶನ್ ಲಿಂಕ್ ತೆರೆಯಿರಿ
- ಜಿಎಸ್‌ಟಿ ಸಿಎಂಪಿ–02 ನಮೂನೆ ಭರ್ತಿ ಮಾಡಿರಿ ಮತ್ತು ಸಲ್ಲಿಸಿರಿ

ಈಗಾಗಲೇ ಕಂಪೋಸಿಷನ್ ಸ್ಕೀಮ್ ಆಯ್ಕೆ ಮಾಡಿಕೊಂಡಿರುವ ಅರ್ಹ ತೆರಿಗೆದಾತರು, ಒಂದು ವೇಳೆ ಅರ್ಹರಾಗಿದ್ದಲ್ಲಿ, ಅಂತಹವರು ಸಿಎಂಪಿ–02 ನಮೂನೆ ಭರ್ತಿ ಮಾಡುವ ಅವಶ್ಯಕತೆ ಇರುವುದಿಲ್ಲ.

- ಸುಲಭ ಮತ್ತು ಅನುಕೂಲಕರ ಅನುಸರಣೆ
- ಆಕರ್ಷಕ ತೆರಿಗೆ ದರಗಳು
- ಕನಿಷ್ಠ ಅನುಸರಣಾ ಅಗತ್ಯಗಳು
- ಸ್ವಯಂಚಾಲಿತ ಮುಂದುವರಿಕೆ/ ನವೀಕರಣ ಮತ್ತು ಆಯ್ಕೆ ಕೈಬಿಡಲು ಸುಲಭ
- ಸರಕುಗಳು ಮತ್ತು ಸೇವೆಗಳು ಎರಡನ್ನೂ ಪೂರೈಕೆ ಮಾಡುವವರಿಗೆ ಲಭ್ಯ
- ಅತಿ ಕಡಿಮೆ ಪುಸ್ತಕ ನಿರ್ವಹಣೆ

* ಪೂರೈಕೆದಾರರ ವಿಧ		# ಹ.ವ. 2025–26ರ ಅವಧಿಯಲ್ಲಿ ಸರಾಸರಿ ವಾರ್ಷಿಕ ವಹಿವಾಟು
ಸರಕುಗಳ ಪೂರೈಕೆದಾರರು	ನಿಗದಿತ 08 ರಾಜ್ಯಗಳಲ್ಲಿ ನೋಂದಾಯಿತ ತೆರಿಗೆದಾತರು	ರೂ.75 ಲಕ್ಷದವರೆಗೆ
	ಇನ್ನಿತರ ರಾಜ್ಯಗಳಲ್ಲಿ ನೋಂದಾಯಿತ ತೆರಿಗೆದಾತರು	ರೂ.150 ಲಕ್ಷದವರೆಗೆ
ಸೇವೆಗಳ ಪೂರೈಕೆದಾರರು		ರೂ.50 ಲಕ್ಷದವರೆಗೆ

ದಯವಿಟ್ಟು ಹೆಚ್ಚಿನ ವಿವರಗಳಿಗಾಗಿ, ಸಿಜಿಎಸ್‌ಟಿ ಆಕ್ಟ್‌ನ ಸೆಕ್ಷನ್ 10, ಸಿಜಿಎಸ್‌ಟಿ ರೂಲ್ಸ್‌ನ ರೂಲ್ 3–7 ಮತ್ತು ಸೆಂಟ್ರಲ್ ಟ್ಯಾಕ್ಸ್‌ನ ದಿನಾಂಕ 07.03.2019ರ ಅಧಿಸೂಚನೆ ಸಂ. 14/2019 ಪರಿಶೀಲಿಸಿರಿ

ಜಿಎಸ್‌ಟಿ ಕಂಪೋಸಿಷನ್: ಸಣ್ಣ ತೆರಿಗೆದಾತರಿಗೆ ಭಾರಿ ಲಾಭಗಳು

@cbicindia @cbic_india @cbicindia @CBICINDIA @CBIC india

CBC 15502/13/0052/2526

ಪ್ರಯೋಗಕ್ಕೆ ಸೀಮಿತವಾದ ಮಿಥೆನಾಲ್

3 ವರ್ಷದ ಹಿಂದೆ ಬಿಎಂಟಿಸಿ ಬಸ್‌ಗಳಲ್ಲಿ ಮಿಥೆನಾಲ್ ಮಿಶ್ರಿತ ಇಂಧನ ಪ್ರಯೋಗ

• ಬಾಲಕೃಷ್ಣ ಪಿ.ಎಚ್.

ಮುಖ್ಯಾಂಶಗಳು
- ದೇಶದಲ್ಲಿ ಮೊದಲ ಬಾರಿಗೆ ಬಿಎಂಟಿಸಿಯ 20 ಬಸ್‌ಗಳಲ್ಲಿ ಪ್ರಯೋಗ
- ನಾಲ್ಕು ತಿಂಗಳ ಕಾಲ ಮಿಥೆನಾಲ್ ಮಿಶ್ರಿತ ಇಂಧನದಲ್ಲಿ ಸಂಚಾರ

ಬೆಂಗಳೂರು: ಡೀಸೆಲ್ ಮೇಲಿನ ಅವಲಂಬನೆ ಕಡಿಮೆ ಮಾಡಲು, ವಾಯುಮಾಲಿನ್ಯ ತಡೆಯಲು ಮಿಥೆನಾಲ್ ಮಿಶ್ರಿತ ಇಂಧನ ಪ್ರಯೋಗವನ್ನು ಮೂರು ವರ್ಷಗಳ ಹಿಂದೆ ಬಿಎಂಟಿಸಿ ಬಸ್‌ಗಳಲ್ಲಿ ನಡೆಸಲಾಗಿತ್ತು. ಇದು ಪ್ರಯೋಗಕ್ಕೆ ಸೀಮಿತಗೊಂಡಿದ್ದು, ಬಿಎಂಟಿಸಿಯ ಯಾವುದೇ ಬಸ್‌ಗಳಲ್ಲಿ ಇದುವರೆಗೆ ಅಳವಡಿಕೆಯಾಗಿಲ್ಲ.

ಕೇಂದ್ರ ರಸ್ತೆ ಸಾರಿಗೆ ಸಚಿವಾಲಯದ ಸೂಚನೆಯಂತೆ 2016ರಲ್ಲಿ ನೀತಿ ಆಯೋಗವು ಮಿಥೆನಾಲ್ ಮಿಶ್ರಿತ ಇಂಧನ ಪ್ರಯೋಗ ಆರಂಭಿಸಿತ್ತು. ಸತತ 7 ವರ್ಷ ವಿವಿಧ ವಾಹನಗಳಲ್ಲಿ ಪ್ರಯೋಗ ನಡೆಸಿತ್ತು. ಸಕಾರಾತ್ಮಕ ಫಲಿತಾಂಶ ಬಂದ ಬಳಿಕ ಸಾರಿಗೆ ವಾಹನಗಳಲ್ಲಿ ಈ ಪ್ರಯೋಗ ನಡೆಸಲು ನಿರ್ಧರಿಸಿತ್ತು. 2023ರ ಮಾರ್ಚ್‌ನಲ್ಲಿ ದೇಶದಲ್ಲೇ ಪ್ರಥಮ ಬಾರಿಗೆ ಬಿಎಂಟಿಸಿಯ 20 ಬಸ್‌ಗಳಲ್ಲಿ ಪ್ರಯೋಗ ಆರಂಭಿಸಿತ್ತು. ನಾಲ್ಕು ತಿಂಗಳು ಈ ಬಸ್‌ಗಳು ಮಿಥೆನಾಲ್ ಮಿಶ್ರಿತ ಇಂಧನದಲ್ಲಿ ಸಂಚರಿಸಿದ್ದವು.

‘ಅಶೋಕ ಲೈಲ್ಯಾಂಡ್ ಕಂಪನಿಯು ತಯಾರಿಸಿದ ಬಸ್‌ಗಳನ್ನು ಪ್ರಯೋಗಕ್ಕೆ ಬಳಸಲಾಗಿತ್ತು. 3.2 ಲಕ್ಷ ಕಿ.ಮೀ. ಓಡಾಟ ನಡೆಸಿದ ಬಳಿಕ ಎರಡು ಬಸ್‌ಗಳ ಎಂಜಿನ್‌ಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಪ್ರಯೋಗಾಲಯದ ವರದಿ, ಸಂಚಾರದ ಸಮಯದ ಸ್ಥಿತಿಗತಿ ಎಲ್ಲ ಸೇರಿಸಿ ಸಾರಿಗೆ ಸಚಿವಾಲಯಕ್ಕೆ ವರದಿ ನೀಡಲಾಗಿದೆ’ ಎಂದು ಮಿಥೆನಾಲ್ ಕೋರ್ ಕಮಿಟಿ ಸದಸ್ಯ ಪ್ರಶಾಂತ್ ಶ್ರೀನಿವಾಸ್ ತಿಳಿಸಿದರು.

‘ಮಿಥೆನಾಲ್ ಮಿಶ್ರಿತ ಇಂಧನ ಪ್ರಯೋಗದ ಸಂದರ್ಭದಲ್ಲಿ ಪ್ರತಿ ಕಿಲೋಮೀಟರ್‌ಗೆ ಸುಮಾರು ₹10 ಉಳಿತಾಯವಾಗಿದೆ. ಡೀಸೆಲ್ ಎಂಜಿನ್ ವಾಹನಗಳನ್ನೇ ಇದಕ್ಕೆ ಬಳಸಲಾಗಿತ್ತು. ಸಣ್ಣ ಅವಧಿಯ ಪ್ರಯೋಗದ ಸಮಯದಲ್ಲಿ ದೊಡ್ಡ ಮಟ್ಟದ ಸಮಸ್ಯೆ ಕಾಣಿಸಿಕೊಂಡಿಲ್ಲ. ದೀರ್ಘ ಕಾಲ ಬಳಸಿದಾಗ ಪರಿಣಾಮ ಹೇಗಿರುತ್ತದೆ ಎಂಬುದು ಗೊತ್ತಾಗಿಲ್ಲ. ಡೀಸೆಲ್ ಎಂಜಿನ್‌ನ ವಾಹನದಲ್ಲಿ ಮಿಥೆನಾಲ್ ಮಿಶ್ರಿತ ಡೀಸೆಲ್ ಬಳಸಿದಾಗ ಎಂಜಿನ್ ತುಕ್ಕು ಹಿಡಿಯುವ ಸಾಧ್ಯತೆ ಇರುತ್ತದೆ. ಇಂಧನದಲ್ಲಿ ಉಳಿತಾಯ ಆಗಿದ್ದಕ್ಕಿಂತ ಹೆಚ್ಚು ಎಂಜಿನ್‌ಗೆ ವೆಚ್ಚವಾದರೆ ಕಷ್ಟ’ ಎಂದು ಬಿಎಂಟಿಸಿ ಎಂಜಿನಿಯರ್ ಒಬ್ಬರು ತಿಳಿಸಿದ್ದಾರೆ.

‘ಪ್ರಯೋಗಕ್ಕಾಗಿ ನಮ್ಮ ಬಸ್‌ಗಳನ್ನು ಕೇಳಿದ್ದರು. ಬಸ್ ಒದಗಿಸಲಾಗಿತ್ತು. ಆನಂತರ ಎಲ್ಲಿ ಅನುಷ್ಠಾನ ಮಾಡುತ್ತಾರೆ ಎಂಬುದೆಲ್ಲ ನಮಗೆ ಸಂಬಂಧಿಸಿದ್ದಲ್ಲ. ಈ ವಿಚಾರದಲ್ಲಿ ನಾವು ಪ್ರತಿಕ್ರಿಯಿಸುವಂತೆಯೂ ಇಲ್ಲ’ ಎಂದು ಬಿಎಂಟಿಸಿ ಅಧಿಕಾರಿಗಳು ಹೇಳಿದರು.

‘ಯುದ್ಧದ ಕರಿನೆರಳು ಪೆಟ್ರೋಲ್, ಡೀಸೆಲ್ ಮೇಲೂ ಬೀಳುತ್ತಿರುವುದರಿಂದ ಮಿಥೆನಾಲ್ ಬಳಕೆ ಮಾಡಿದ್ದರೆ ಡೀಸೆಲ್ ಮೇಲಿನ ಅವಲಂಬನೆ ಕಡಿಮೆ ಮಾಡಬಹುದಿತ್ತು. ಮಿಥೆನಾಲ್ ಬೆಲೆ ₹25ರಿಂದ ₹27 ಇರುವುದರಿಂದ ವೆಚ್ಚ ಕಡಿಮೆಯಾಗುತ್ತಿತ್ತು’ ಎಂದು ಚಾಲಕರೊಬ್ಬರು ತಿಳಿಸಿದರು.

ಬಿಎಂಟಿಸಿ ಬಸ್‌ಗಳಲ್ಲಿ ಮಿಥೆನಾಲ್ ಮಿಶ್ರಿತ ಇಂಧನ ಪ್ರಯೋಗಕ್ಕೆ 2023ರ ಮಾರ್ಚ್‌ನಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಚಾಲನೆ ನೀಡಿದ್ದರು (ಸಂಗ್ರಹ ಚಿತ್ರ)

ಪ್ರಯೋಗವೇನು?

ಶೇ 15ರಷ್ಟು ಮಿಥೆನಾಲ್, ಶೇ 12ರಷ್ಟು ಕಪ್ಲರ್ಸ್, ಶೇ 2ರಷ್ಟು ಸಿಟೇನ್ ಇಂಪ್ರುವರ್ ಹಾಗೂ ಶೇ 71 ಭಾಗ ಡೀಸೆಲ್ ಮಿಶ್ರಣ ಮಾಡಿ ಬಳಸಲಾಗುತ್ತದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ ಮಿಥೆನಾಲ್ ಮಿಶ್ರಣ ಮಾಡಿ ಇಂಧನ ಒದಗಿಸಿತ್ತು. 80 ಸಾವಿರ ಲೀಟರ್ ಮಿಥೆನಾಲ್ ಮಿಶ್ರಣ ಇಂಧನ ಬಳಕೆ ಮಾಡಲಾಗಿತ್ತು.

ಶಾಂತಿನಗರದ ಮುಖ್ಯರಸ್ತೆಯಲ್ಲಿ ಭಾನುವಾರ ಮಳೆಯಲ್ಲಿಯೇ ವಾಹನಗಳು ಸಂಚರಿಸಿದವು ಪ್ರಜಾವಾಣಿ ಚಿತ್ರ: ರಂಜು ಪಿ.

ಬಿಸಿಲ ಝಳ: ಮಳೆ ಸಿಂಚನ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಭಾನುವಾರ ಸಂಜೆಯಿಂದ ರಾತ್ರಿಯವರೆಗೆ ಉತ್ತಮ ಮಳೆಯಾಯಿತು. ಬಿಸಿಲಿನಿಂದ ಬಳಲಿದ್ದ ಜನರಿಗೆ ತಂಪೆರೆಯಿತು.

ಬಿಸಿಲ ಝಳದಿಂದ ತತ್ತರಿಸಿದ್ದ ನಗರದ ಉಷ್ಣಾಂಶ, ಭಾನುವಾರ ಸಂಜೆ ವೇಳೆಗೆ ಐದಾರು ಡಿಗ್ರಿ ಸೆಲ್ಸಿಯಸ್ ಕಡಿಮೆಯಾಯಿತು. ನಗರದ ಹಲವು ಪ್ರದೇಶಗಳಲ್ಲಿ ಸಂಜೆಯಿಂದ ರಾತ್ರಿಯವರೆಗೂ ಗುಡುಗು–ಗಾಳಿ ಸಹಿತ ಸಾಧಾರಣ ಮಳೆಯಾಯಿತು. ರಸ್ತೆಗಳು ಜಲಾವೃತವಾಗಿದ್ದರಿಂದ ವಾಹನ ದಟ್ಟಣೆ ಉಂಟಾಗಿತ್ತು.

ವರ್ತೂರು ರಸ್ತೆಯಲ್ಲಿ ಮಳೆ ನೀರು ನಿಂತು ಗುಂಜೂರು ಕಡೆಗೆ ವಾಹನಗಳ ಸಂಚಾರ ನಿಧಾನಗತಿಯಲ್ಲಿತ್ತು. ಕಸ್ತೂರಿನಗರ, ಹಳೆ ಮದ್ರಾಸ್ ರಸ್ತೆ, ವಿಜಯನಗರ, ಮಹಾತ್ಮ ಗಾಂಧಿ ರಸ್ತೆ, ದೀಪಾಂಜಲಿನಗರ, ಮಲ್ಲೇಶ್ವರ, ಮೆಜೆಸ್ಟಿಕ್, ಹೈಗ್ರೌಂಡ್ಸ್, ಸ್ವಾತಂತ್ರ್ಯ ಉದ್ಯಾನ, ವಸಂತನಗರ, ಶಿವಾಜಿನಗರ, ರೇಸ್‌ಕೋರ್ಸ್ ರಸ್ತೆ, ಕೆ.ಆರ್. ಮಾರುಕಟ್ಟೆ, ಶಾಂತಿನಗರ, ವೈಟ್‌ಫೀಲ್ಡ್ ಸೇರಿದಂತೆ ನಗರದ ಹಲವು ಕಡೆಗಳಲ್ಲಿ ಗುಡುಗು ಸಹಿತ ಧಾರಾಕಾರ ಮಳೆ ಸುರಿದಿದೆ.

ವಿದ್ಯುತ್ ವ್ಯತ್ಯಯ: ಮಳೆಯಿಂದಾಗಿ ಎಂ.ಜಿ.ರಸ್ತೆ, ಚರ್ಚ್ ಸ್ಟ್ರೀಟ್ ಸೇರಿದಂತೆ ನಗರದ ಹಲವು ಭಾಗಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿತ್ತು.

ಭುವನೇಶ್ವರಿ ನಗರದಲ್ಲಿ ಗಾಳಿ, ಮಳೆಗೆ ಬಿದ್ದ ಬೃಹತ್ ಗಾತ್ರದ ಮರ

ಉರುಳಿ ಬಿದ್ದ ಬೃಹತ್ ಮರ (ಪೀಣ್ಯ ದಾಸರಹಳ್ಳಿ ವರದಿ): ಭುವನೇಶ್ವರಿ ನಗರದ ಎಸ್‌ಬಿಐ ಬ್ಯಾಂಕ್ ಎದುರು ಭಾನುವಾರ ಸುರಿದ ಜೋರು ಮಳೆ ಮತ್ತು ಗಾಳಿಯಿಂದಾಗಿ ಬೃಹತ್ ಗಾತ್ರದ ಮರವೊಂದು ವಿದ್ಯುತ್ ಕಂಬಗಳ ಲೈನ್ ಮೇಲೆ ಬಿದ್ದಿದ್ದು ಮೂರು ಕಂಬಗಳು ಮುರಿದಿವೆ.

ಬೆಳಗಿನ ಜಾವವಾಗಿದ್ದರಿಂದ ಯಾರೂ ಓಡಾಡುತ್ತಿರಲಿಲ್ಲ. ಒಂದೆರಡು ಅಂಗಡಿ ತೆರೆದಿದ್ದರೂ ಅನಾಹುತ ಆಗಿಲ್ಲ.

‘ಎಂದಿನಂತೆ ಬೆಳಗಿನ ಜಾವ ಹಾಲು ಬರುವುದರಿಂದ ಅಂಗಡಿ ತೆರೆದಿದ್ದೆ. ಜೋರು ಗಾಳಿ, ಮಳೆಯಿಂದ ಮರ ಬಿದ್ದಿತು. ವಿದ್ಯುತ್‌ಲೈನ್ ಇಲ್ಲದಿದ್ದರೆ ನಮ್ಮ ಅಂಗಡಿ ಮೇಲೂ ಬೀಳುತ್ತಿತ್ತು. ಕರೆ ಮಾಡಿದ ತಕ್ಷಣವೇ ಬೆಸ್ಕಾಂ ಸಿಬ್ಬಂದಿ ಬಂದು ವಿದ್ಯುತ್ ಸಂಪರ್ಕ ಕಡಿತಗೊಳಿಸಿದರು. ಇಲ್ಲದಿದ್ದರೆ ಅನಾಹುತ ಆಗುವ ಸಂಭವವಿತ್ತು' ಎಂದು ಅಂಗಡಿ ಮಾಲೀಕ ಬಸವರಾಜು ತಿಳಿಸಿದರು.

ಸ್ಥಳೀಯ ನಿವಾಸಿ ಬಿ.ಎಂ. ಮಂಜುನಾಥ್ ಮಾತನಾಡಿ, ‘ಹಲವು ವರ್ಷಗಳಿಂದ ಕಂಬಗಳು ಮತ್ತು ಟ್ರಾನ್ಸ್‌ಫಾರ್ಮರ್ ರಸ್ತೆ ಕಡೆಗೆ ವಾಲಿದೆ. ಚಿಕ್ಕದಾದ ರಸ್ತೆಯಾಗಿರುವುದರಿಂದ ವಾಹನಗಳಿಗೆ ಅಡ್ಡಿಯಾಗುತ್ತಿದೆ. ಬೆಸ್ಕಾಂ ನಿರ್ಲಕ್ಷ್ಯವೇ ಇದಕ್ಕೆ ಕಾರಣ ಎಂದರು.

ಬೆಸ್ಕಾಂ ಸಹಾಯಕ ಎಂಜಿನಿಯರ್ ಮಹೇಂದ್ರ ಮಾತನಾಡಿ,' ಹಾನಿಯಾಗಿದ್ದ ಕಂಬಗಳ ತೆರವು ಕಾರ್ಯ ಮಾಡಲಾಗಿದೆ. ವಿದ್ಯುತ್ ಸಂಪರ್ಕ ಪುನರಾರಂಭಕ್ಕೆ ಕ್ರಮ ವಹಿಸಲಾಗಿದೆ’ ಎಂದು ತಿಳಿಸಿದರು.

ವಲಯ ಅರಣ್ಯ ಅಧಿಕಾರಿ ಕೆ.ಎನ್. ರಾಜಪ್ಪ ಮಾತನಾಡಿ, ‘ಗಾಳಿಯ ರಭಸಕ್ಕೆ ಮರ ಉರುಳಿ ಬಿದ್ದಿದೆ. ಮರದ ಬುಡಕ್ಕೆ ಸಾರ್ವಜನಿಕರು ಹಾನಿ ಮಾಡಿದ್ದಾರೆ. ಜೆಸಿಬಿ ಬಳಸಿ ಮರ ತೆರವುಗೊಳಿಸುವ ಕಾರ್ಯ ಕೈಗೊಳ್ಳಲಾಯಿತು’ ಎಂದರು.

ಕರ್ನಾಟಕ ರಾಜ್ಯ ಮೆಡಿಕಲ್ ಲ್ಯಾಬ್ ಟೆಕ್ನಾಲಜಿಸ್ಟ್ ಅಸೋಸಿಯೇಷನ್ ಆಗ್ರಹ

‘ಆನ್‌ಲೈನ್‌ನಲ್ಲಿ ಮಾದರಿ ಸಂಗ್ರಹ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವೈದ್ಯಕೀಯೇತರ ವ್ಯಕ್ತಿಗಳು ಪ್ರಯೋಗಾಲಯ ತಂತ್ರಜ್ಞರ(ಲ್ಯಾಬ್ ಟೆಕ್ನಿಷಿಯನ್) ಘಟಕ ನಡೆಸಲು ಅವಕಾಶ ನೀಡಬಾರದು. ಆನ್‌ಲೈನ್ ಮೂಲಕ ಮನೆಯಿಂದಲೇ ಮಾದರಿ ಸಂಗ್ರಹಿಸುವ ಕಂಪನಿಗಳ ಆರಂಭಕ್ಕೆ ಅನುಮತಿ ಕೊಡಬಾರದು’ ಎಂದು ಕರ್ನಾಟಕ ರಾಜ್ಯ ಮೆಡಿಕಲ್ ಲ್ಯಾಬ್ ಟೆಕ್ನಾಲಜಿಸ್ಟ್ ಅಸೋಸಿಯೇಷನ್ ಆಗ್ರಹಿಸಿದೆ.

ನಗರದ ಕುವೆಂಪು ಕಲಾಕ್ಷೇತ್ರದಲ್ಲಿ ಭಾನುವಾರ ಆಯೋಜಿಸಿದ್ದ ವೈದ್ಯಕೀಯ ಪ್ರಯೋಗಾಲಯ ತಂತ್ರಜ್ಞರ ರಾಜ್ಯ ಸಮ್ಮೇಳನದಲ್ಲಿ ಅಸೋಸಿಯೇಷನ್‌ನ ರಾಜ್ಯ ಘಟಕದ ಅಧ್ಯಕ್ಷ ವಿ.ವೆಂಕಟಸ್ವಾಮಿ ಅವರು ಬೇಡಿಕೆಗಳ ಮನವಿ ಪತ್ರವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಸಲ್ಲಿಸಿದರು.

ವೈದ್ಯಕೀಯ ಕ್ಷೇತ್ರದ ಅನುಭವ ಇಲ್ಲವೇ ಶಿಕ್ಷಣ ಪಡೆಯದವರು ಈ ಕ್ಷೇತ್ರಕ್ಕೆ ಪ್ರವೇಶ ಮಾಡುತ್ತಿದ್ದಾರೆ. ಇಂತವರು ಪ್ರಯೋಗಾಲಯ ತೆರೆಯಲು ಇಲ್ಲವೇ ಚಟುವಟಿಕೆ ನಡೆಸಲು ಅವಕಾಶವನ್ನು ಸರ್ಕಾರ ನೀಡಬಾರದು. ಇದಕ್ಕೆ ನಿಗದಿತ ಶಿಕ್ಷಣವನ್ನು ಮಾನದಂಡವಾಗಿ ನಿಗದಿಮಾಡಬೇಕು ಎಂದು ಒತ್ತಾಯಿಸಿದರು.

ಮೂರು ಹಂತದ ಪ್ರಯೋಗಾಲಯಗಳಲ್ಲಿ ಏಕ ರೂಪದ ದರವನ್ನು ಪರೀಕ್ಷೆಗಳಿಗೆ ನಿಗದಿ ಮಾಡಬೇಕು. ಆ ದರಗಳನ್ನು ಕಡ್ಡಾಯವಾಗಿ ಪ್ರದರ್ಶಿಸುವಂತೆ ಸೂಚನೆ ನೀಡಬೇಕು ಎಂದು ಆಗ್ರಹಿಸಿದರು.

ವೈದ್ಯರು ಹಾಗೂ ಔಷಧೀಯ ಮಾರಾಟಗಾರರಿಗೆ ನೀಡಿರುವಂತೆ ಪ್ರಯೋಗಾಲಯ ತಂತ್ರಜ್ಞರಿಗೂ ಪ್ರತ್ಯೇಕ ಚಿಹ್ನೆಯನ್ನು ನೀಡಬೇಕು. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ರಾಷ್ಟ್ರೀಯ ಪ್ರಯೋಗಾಲಯ ತಂತ್ರಜ್ಞರ ದಿನವನ್ನು ಘೋಷಣೆ ಮಾಡಬೇಕು. ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಖಾಲಿ ಇರುವ ತಂತ್ರಜ್ಞರ ಹುದ್ದೆ ಭರ್ತಿ ಮಾಡಬೇಕು ಎಂದು ಆಗ್ರಹಿಸಿದರು.

ಲ್ಯಾಬ್ ಟೆಕ್ನಿಷಿಯನ್ ವಿಷಯದಲ್ಲಿ ಎಂಎಸ್ಸಿ ಹಾಗೂ ಪಿಎಚ್‌ಡಿ ಪದವಿ ಪಡೆದವರಿಗೆ ವೈದ್ಯಕೀಯ ಕಾಲೇಜುಗಳಲ್ಲಿ ಉಪನ್ಯಾಸಕರು ಇಲ್ಲವೇ ಸೂಕ್ಷ್ಮಜೀವಿ ಶಾಸ್ತ್ರಜ್ಞರು, ಜೀವರಸಾಯನಶಾಸ್ತ್ರಜ್ಞರು, ಜೀವಕೋಶ ತಜ್ಞರು ಎನ್ನುವ ಹುದ್ದೆ ನೀಡಬೇಕು ಎಂದು ಒತ್ತಾಯಿಸಿದರು.

ಅಸೋಸಿಯೇಷನ್ ರಾಷ್ಟ್ರೀಯ ಅಧ್ಯಕ್ಷ ಡಾ.ಸಂತೋಷ್ ಕುಮಾರ್, ರಾಜ್ಯ ಉಪಾಧ್ಯಕ್ಷ ಪಿ.ಶಿವಶಂಕರ್, ಕಾರ್ಯದರ್ಶಿ ಎ.ವಿ.ನಾರಾಯಣಸ್ವಾಮಿ, ಖಜಾಂಚಿ ಸುರೇಶ್, ಜಂಟಿ ಕಾರ್ಯದರ್ಶಿ ಎಂ.ಎನ್.ಸತೀಶ್ ಕುಮಾರ್, ಕರ್ನಾಟಕ ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಸುಜ್ಞಾನ ಮೂರ್ತಿ, ಕನಕಪುರ ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಎಸ್. ಧನಂಜಯ, ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯ ಅಧ್ಯಕ್ಷ ಸದಾಶಿವ ನಾಯಕ್ ಉಪಸ್ಥಿತರಿದ್ದರು.

ನಗರದಲ್ಲಿ ಭಾನುವಾರ ಆಯೋಜಿಸಿದ್ದ ವೈದ್ಯಕೀಯ ಪ್ರಯೋಗಾಲಯ ತಂತ್ರಜ್ಞರ ರಾಜ್ಯ ಸಮ್ಮೇಳನಕ್ಕೆ ಆಗಮಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರನ್ನು ಸ್ವಾಗತಿಸಲಾಯಿತು. ಕರ್ನಾಟಕ ರಾಜ್ಯ ಮೆಡಿಕಲ್ ಲ್ಯಾಬ್ ಟೆಕ್ನಾಲಜಿಸ್ಟ್ ಅಸೋಸಿಯೇಷನ್‌ನ ರಾಜ್ಯ ಉಪಾಧ್ಯಕ್ಷ ಶಿವಶಂಕರ್ ಪಿ , ಅಧ್ಯಕ್ಷ ವಿ ವೆಂಕಟಸ್ವಾಮಿ, ರಾಷ್ಟ್ರೀಯ ಅಧ್ಯಕ್ಷ ಡಾ. ಸಂತೋಷ್ ಕುಮಾರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಅಂಜಲಿ ದೇವಿ ವಿರುದ್ಧದ ವಿಚಾರಣೆಗೆ ತಡೆ

ಬೆಂಗಳೂರು: ಪಾಸ್‌ಪೋರ್ಟ್ ದಾಖಲೆಗಳಲ್ಲಿ ಸಹಿ ನಕಲು ಮತ್ತು ಕಚೇರಿಯ ಅಧಿಕೃತ ಮೊಹರು ದುರ್ಬಳಕೆ ಮಾಡಿದ ಆರೋಪದ ಪ್ರಕರಣದಲ್ಲಿ, ಕರ್ನಾಟಕ ರಾಜ್ಯ ಪ್ರಾಸಿಕ್ಯೂಷನ್ ಇಲಾಖೆಯ ನಿರ್ದೇಶಕಿ ಅಂಜಲಿ ದೇವಿ ವಿರುದ್ಧ ದಾಖಲಿಸಲಾಗಿರುವ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

‘ಹಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ನನ್ನ ವಿರುದ್ಧ ದಾಖಲಾಗಿರುವ ದೂರಿಗೆ ಸಂಬಂಧಿಸಿದಂತೆ 6ನೇ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿರುವ ವಿಚಾರಣೆ ರದ್ದುಪಡಿಸಬೇಕು’ ಎಂದು ಕೋರಿ ಅಂಜಲಿ ದೇವಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾ.ಎಂ. ನಾಗಪ್ರಸನ್ನ ಅವರಿದ್ದ ಏಕ ಸದಸ್ಯ ಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್ ಅವರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ರಾಜ್ಯ ಪ್ರಾಸಿಕ್ಯೂಷನ್ ಮತ್ತು ದೂರುದಾರರಾದ ಅಂಜನಾ ಚೌಹಾಣ್ ಅವರಿಗೆ ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿ ವಿಚಾರಣೆಯನ್ನು ಏಪ್ರಿಲ್ 22ಕ್ಕೆ ಮುಂದೂಡಿದೆ.

ಶಿವಕುಮಾರ ಸ್ವಾಮೀಜಿ ಜಯಂತಿಗೆ ಸಿದ್ಧತೆ

ತುಮಕೂರು: ಸಿದ್ಧಗಂಗಾ ಮಠದಲ್ಲಿ ಶಿವಕುಮಾರ ಸ್ವಾಮೀಜಿ 119ನೇ ಜಯಂತಿ ಕಾರ್ಯಕ್ರಮ ಏ.1ರಂದು ನಡೆಯಲಿದ್ದು, ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಗವಹಿಸಲಿದ್ದಾರೆ. ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಭಾನುವಾರ ಇಲ್ಲಿ ಹೇಳಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿದ್ದು, ಮಕ್ಕಳಿಗೆ ತೊಂದರೆಯಾಗದಂತೆ ಸಂಜೆ ಯಾವುದೇ ಕಾರ್ಯಕ್ರಮ ಆಯೋಜಿಸಿಲ್ಲ. ವೇದಿಕೆ ಕಾರ್ಯಕ್ರಮದ ಬಳಿಕ ವೀಣಾವಾದನ ಹಾಗೂ 119 ಮಹಿಳೆಯರಿಂದ ವಚನ ಗಾಯನ ನಡೆಯಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಬೆಳಗ್ಗೆ 11ರಿಂದ ಮ.12.30ರವರೆಗೆ ಕಾರ್ಯಕ್ರಮ ನಡೆಯಲಿದೆ. ಎಪಿಎಂಸಿ ಕಡೆಯಿಂದ ಬರುವ ಭಕ್ತರಿಗೆ ಬಂಡೆಪಾಳ್ಯ ಮೂಲಕ ಬರಲು ಅವಕಾಶ ಕಲ್ಪಿಸಿದೆ. ದನಗಳ ಜಾತ್ರೆಯ ಜಾಗದಲ್ಲಿ ವಾಹನ ನಿಲುಗಡೆ ಮಾಡಬಹುದು ಎಂದರು.

ವಿದ್ಯಾರ್ಥಿಗಳಿಗೆ ಶಿಕ್ಷೆ ಆರೋಪ: ಪ್ರಕರಣಕ್ಕೆ ತಡೆ

ಬೆಂಗಳೂರು: ವಿದ್ಯಾರ್ಥಿಗಳು ಶಾಲೆಗೆ ತಡವಾಗಿ ಬಂದಿದ್ದಾರೆ ಎಂಬ ಕಾರಣಕ್ಕೆ ಬಸ್ಕಿ ಹೊಡೆಸುವ, ಶಾಲೆಯ ಆವರಣ ಸುತ್ತು ಹಾಕುವ ಶಿಕ್ಷೆ ನೀಡಿದ ಆರೋಪದಡಿ ಶಾಲೆಯ ಪ್ರಾಂಶುಪಾಲರು ಮತ್ತು ಇತರೆ ಮೂವರ ವಿರುದ್ಧ ದಾಖಲಾಗಿದ್ದ ಪ್ರಕರಣಕ್ಕೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಯಲಹಂಕದ ಚೈತನ್ಯ ಟೆಕ್ನೋ ಶಾಲೆಯ ಪ್ರಾಂಶುಪಾಲರಾದ ಮೀನಾಕ್ಷಿ ವಿನೋದಿನಿ, ಶಿಕ್ಷಕರಾದ ನರೇಶ್, ಕೆ.ಭರತ್ ಕುಮಾರ್ ಮತ್ತು ಎಸ್.ಶ್ರೀನಿವಾಸ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, ತಡೆ ನೀಡಿದೆ.

‘ಸವಿತಾ ಸಮಾಜ ಮಠಕ್ಕೆ ₹10 ಲಕ್ಷ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ಸವಿತಾ ಸಮಾಜ ಸಮಾಜಮುಖಿ ಸೇವೆಯಲ್ಲಿ ತೊಡಗಿಸಿಕೊಂಡು ನಿರಂತರವಾಗಿ ಸೇವೆ ಮಾಡುತ್ತಿದ್ದು, ಸಮಾಜದ ಮಠದ ಅಭಿವೃದ್ಧಿಗೆ ₹10 ಲಕ್ಷ ನೀಡುತ್ತೇನೆ’ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

ಕರ್ನಾಟಕ ಸವಿತಾ ಸಮಾಜದ ವತಿಯಿಂದ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಸವಿತೋತ್ಸವ, ವಧು-ವರರ ಸಮಾವೇಶ ಮತ್ತು ಉದ್ಯೋಗ ಮೇಳದಲ್ಲಿ ಮಾತನಾಡಿ, ‘ಕೀಳರಿಮೆ, ಜಾತಿ ವ್ಯವಸ್ಥೆಯಿಂದ ಹೊರಬಂದು ಸಮಸಮಾಜ ನಿರ್ಮಾಣವಾಗಬೇಕು’ ಎಂದರು.

ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ ಮಾತನಾಡಿ, ‘ಶುಭ ಕಾರ್ಯದ ಜತೆಗೆ ಸುಂದರವಾಗಿ ನಾವೆಲ್ಲರೂ ಜೀವನ ನಡೆಸಬೇಕಾದರೆ ಈ ಸಮುದಾಯದ ಸೇವೆ ಮಹತ್ವದ್ದು. ವೃತ್ತಿ ಜ್ಞಾನದ ಜತೆಯಲ್ಲಿ ಮಕ್ಕಳಿಗೆ ಉನ್ನತ ಶಿಕ್ಷಣ ನೀಡಬೇಕಾಗಿದೆ’ ಎಂದು ಅವರು ಹೇಳಿದರು.

ಕುಂಚೂರು ಪೀಠದ ಸವಿತಾ ಸಮಾಜದ ಪೀಠಾಧ್ಯಕ್ಷ ಶ್ರೀಧರಾನಂದ ನಾಥ ಸ್ವಾಮಿ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಸಿ.ವೇಣುಗೋಪಾಲ್, ಸವಿತಾ ಸಮಾಜ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್.ಮುತ್ತುರಾಜ್, ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ, ಸಮಾಜದ ಮುಖಂಡರಾದ ಬಿ.ವಿ.ಮುನಿರಾಜ್, ನಾಗರಾಜ್, ಎಂ.ಬಿ.ಶಿವಕುಮಾರ್, ಎನ್,ಆರ್.ನಾಗೇಶ್, ಹಿಂದುಳಿದ ವಿಭಾಗದ ಕಾಂಗ್ರೆಸ್ ಅಧ್ಯಕ್ಷ ನಾಗರಾಜ್, ಕೃಷ್ಣಮೂರ್ತಿ. ಆರ್.ಮಂಜುನಾಥ್ ಮಾತನಾಡಿದರು.

ಎಸ್ಸಿಗೆ ಸೇರಿಸಲು ಕ್ರಮ: ಡಿಕೆಶಿ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಅನುಪಸ್ಥಿತಿಯಲ್ಲಿ ಸಂದೇಶ ಓದಲಾಯಿತು.

‘ಸವಿತಾ ಸಮಾಜವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗುವುದು. ಹಡಪದ ಅಪ್ಪಣ್ಣ ಜಯಂತಿ, ಸವಿತಾ ಮಹರ್ಷಿ ಜಯಂತಿ ಘೋಷಿಸಿದ್ದು, ಕಾಂಗ್ರೆಸ್ ಸರ್ಕಾರ ಸಮುದಾಯದ ಅಭಿವೃದ್ಧಿಗೆ ₹ 18ಕೋಟಿಯನ್ನು ಸರ್ಕಾರ ನೀಡಿದೆ’ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಎನ್‌ಪಿಎಸ್ ಶಾಲೆಯಿಂದ ಕಿರಿಕಿರಿ ಆರೋಪ: ನೋಟಿಸ್

ಬೆಂಗಳೂರು: ‘ರಾಜಾಜಿನಗರದ ಐದನೇ ಬ್ಲಾಕ್‌ನಲ್ಲಿರುವ ನ್ಯಾಷನಲ್ ಪಬ್ಲಿಕ್ ಶಾಲೆಯಿಂದ (ಎನ್‌ಪಿಎಸ್) ನೆರೆಹೊರೆಯವರಿಗೆ ತೀವ್ರ ತೊಂದರೆಯಾಗುತ್ತಿದೆ’ ಎಂದು ಆಕ್ಷೇಪಿಸಿ ಸ್ಥಳೀಯ ನಿವಾಸಿಗಳು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಸಂಬಂಧ ರಾಜಾಜಿನಗರ 5ನೇ ಬ್ಲಾಕ್ ನಿವಾಸಿಗಳ ಕಲ್ಯಾಣ ಸಂಘ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ಪ್ರತಿವಾದಿ ಜಿಬಿಎ (ಗ್ರೇಟರ್ ಬೆಂಗಳೂರು ಪ್ರಾಧಿಕಾರ) ಮತ್ತು ಸಕ್ಷಮ ಪೊಲೀಸರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಜುಲೈ 2ಕ್ಕೆ ಮುಂದೂಡಿತು.

ಅರ್ಜಿಯಲ್ಲಿ ಏನಿದೆ?: ‘ಶಾಲೆಯು ದಿನವಿಡೀ ಧ್ವನಿವರ್ಧಕ ವ್ಯವಸ್ಥೆಯನ್ನು ಬಳಸುತ್ತದೆ. ಇದು ಸ್ಥಳೀಯರಿಗೆ, ವಿಶೇಷವಾಗಿ ಶಾಲೆಯ ಅಕ್ಕಪಕ್ಕದ ಮನೆಗಳಲ್ಲಿ ವಾಸ ಮಾಡುವ ಮತ್ತು ಮನೆಯಿಂದಲೇ ಕಚೇರಿಯ ಕರ್ತವ್ಯ ನಿರ್ವಹಿಸುವವರಿಗೆ ತೀವ್ರ ತೊಂದರೆ ಉಂಟು ಮಾಡುತ್ತಿದೆ’ ಎಂದು ಅರ್ಜಿಯಲ್ಲಿ ದೂರಲಾಗಿದೆ.

‘ಶಾಲೆಯ ಪ್ರವೇಶದಲ್ಲಿ ನಿಯಮಾನುಸಾರ ಈ ಪ್ರದೇಶದಲ್ಲಿ ವಾಸಿಸುವ ಮಕ್ಕಳಿಗೇ ಕಡ್ಡಾಯವಾಗಿ ಆದ್ಯತಾ ಅಂಶವನ್ನು ಸಂಪೂರ್ಣ ಗಾಳಿಗೆ ತೂರಲಾಗಿದೆ’ ಎಂದು ಆರೋಪಿಸಲಾಗಿದೆ. ‘ಶಾಲೆಯು ತನ್ನ ಬಸ್‌ಗಳನ್ನು ಕ್ಯಾಂಪಸ್ ಹೊರಗೆ ನಿಲ್ಲಿಸುವುದರಿಂದ ರಸ್ತೆಯುದ್ದಕ್ಕೂ ದಟ್ಟಣೆ ಉಂಟಾಗುತ್ತದೆ. ನೆರೆಹೊರೆಯವರಿಗೆ ತಿಳಿಸದೆ ಶಾಲಾ ಅಧಿಕಾರಿಗಳು ಪದೇ ಪದೇ ಕಾರ್ಯಕ್ರಮಗಳು ಮತ್ತು ಪೋಷಕ-ಶಿಕ್ಷಕರ ಸಭೆಗಳನ್ನು (ಪಿಟಿಎಂ) ಆಯೋಜಿಸುತ್ತಿರುತ್ತಾರೆ. ಇದರಿಂದ ವಾಹನ ದಟ್ಟಣೆ ಇನ್ನಷ್ಟು ಹೆಚ್ಚಾಗಿ ಸ್ಥಳೀಯರಿಗೆ ಇನ್ನಿಲ್ಲದ ತೊಂದರೆಗಳಾಗುತ್ತಿವೆ’ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

‘ನ್ಯಾಷನಲ್ ಪಬ್ಲಿಕ್ ಶಾಲೆಯ ನಡವಳಿಕೆಯಿಂದಾಗಿ ನಾವು ಎದುರಿಸಿದ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಸಲ್ಲಿಸಲಾದ ಮನವಿಗಳನ್ನು ಪರಿಗಣಿಸಲು ಸರ್ಕಾರ ಮತ್ತು ಸಂಬಂಧಿಸಿದವರಿಗೆ ನಿರ್ದೇಶನಗಳನ್ನು ನೀಡಬೇಕು’ ಎಂದು ಕೋರಲಾಗಿದೆ.

ಬೆಂಗಳೂರು ಹಸಿ ಕರಗ ಇಂದು

ಬೆಂಗಳೂರು: ಐತಿಹಾಸಿಕ ಬೆಂಗಳೂರು ಕರಗ ಮಹೋತ್ಸವದ ಧಾರ್ಮಿಕ ಚಟುವಟಿಕೆಗಳು ಈಗಾಗಲೇ ಆರಂಭವಾಗಿದ್ದು, ಸೋಮವಾರ ಹಸಿ ಕರಗ ಕಾರ್ಯಕ್ರಮ ನಡೆಯಲಿದೆ.

ತಿಗಳರ ಪೇಟೆಯ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಕರಗ ಮಹೋತ್ಸವದ ಆರನೇ ದಿನವಾದ ಭಾನುವಾರ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಸಂಜೆ ಆರತಿ ಕಾರ್ಯಕ್ರಮ ನಡೆಯಿತು.

ಹಸಿ ಕರಗಕ್ಕಾಗಿಯೇ ಸಾಂಪ್ರದಾಯಿಕವಾಗಿ ನಾನಾ ಪೂಜಾ ವಿಧಾನಗಳನ್ನು ಕೈಗೊಳ್ಳಲಾಗುತ್ತದೆ. ಹಸಿ ಕರಗವು ಸಂಪಂಗಿ ಕೆರೆಯ ಶಕ್ತಿ ಪೀಠದಲ್ಲಿ ಆರಂಭವಾಗಲಿದೆ. ನಂತರ ರಾತ್ರಿಯಿಡೀ ಹಸಿ ಕರಗ ಮೆರವಣಿಗೆ ನಡೆಯಲಿದ್ದು ಬಳಿಕ ಧರ್ಮರಾಯಸ್ವಾಮಿ ದೇವಸ್ಥಾನ ತಲುಪಲಿದೆ.

’ಸಂಪ್ರದಾಯಂತೆಯೇ ಧಾರ್ಮಿಕ ಆಚರಣೆಗಳನ್ನು ಸಂಪಂಗಿ ಕೆರೆಯಲ್ಲಿರುವ ಶಕ್ತಿ ಪೀಠದಲ್ಲಿ ಆರಂಭಿಸಲಾಗುತ್ತದೆ. ಅಲ್ಲಿ ಸೋಮವಾರ ಬೆಳಿಗ್ಗೆಯಿಂದಲೇ ಸಿದ್ದತೆಗಳು ಆರಂಭಗೊಳ್ಳಲಿದ್ದು ಸಂಜೆ ಹೊತ್ತಿಗೆ ವೀರಕುಮಾರರು ಆಗಮಿಸಲಿದ್ದಾರೆ. ವಿಶೇಷ ಪೂಜೆಗಳ ನಂತರ ಹಸಿ ಕರಗವನ್ನು ಅಣಿಗೊಳಿಸಲಾಗುತ್ತದೆ.

‘ವಿಶೇಷ ಹೂವಿನ ಅಲಂಕಾರ, ವೇಷಭೂಷಣಗಳೊಂದಿಗೆ ಅರ್ಚಕ ಎ. ಜ್ಞಾನೇಶ್ ಕುಮಾರ್ ಅವರು ಒಂದು ಕೈಯಲ್ಲಿ ಕತ್ತಿ, ಮತ್ತೊಂದು ಕೈಯಲ್ಲಿ ಹಸಿ ಕರಗವನ್ನು ಹಿಡಿದು ಸಂಪಂಗಿ ಕೆರೆಯಿಂದ ಜಿಬಿಎ ಆವರಣದಲ್ಲಿರುವ ಆದಿಶಕ್ತಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಲಾಗುತ್ತದೆ. ಆ ನಂತರ ಧರ್ಮರಾಮಸ್ವಾಮಿ ದೇವಸ್ಥಾನದತ್ತ ತೆರಳಿ ಅಲ್ಲಿ ಸಂಪನ್ನಗೊಳ್ಳಲಿದೆ’ ಎಂದು ಧರ್ಮರಾಯಸ್ವಾಮಿ ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಚಲಕರಿ ನಾರಾಯಣಸ್ವಾಮಿ ತಿಳಿಸಿದ್ದಾರೆ.

ಮಂಗಳವಾರ ಪೊಂಗಲ್ ಸೇವೆ, ಬುಧವಾರ ಕರಗ ಶಕ್ತ್ಯೋತ್ಸವ ಮತ್ತು ಧರ್ಮರಾಯಸ್ವಾಮಿ ಮಹಾರಥೋತ್ಸವ ನಡೆಯಲಿದೆ.

ಮೂವರು ಜೈಲು ಸಿಬ್ಬಂದಿ ಅಮಾನತು

ಶೌಚಗುಂಡಿ ಕೊಳವೆಯಲ್ಲಿ ಮೊಬೈಲ್: ಅಧಿಕಾರಿಗಳ ವಿರುದ್ಧ ವಿಡಿಯೊ ಹರಿಬಿಟ್ಟ ಕೇಂದ್ರ ಕಾರಾಗೃಹದ ಕೈದಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೈಲಿನ ಒಳಗೆ ಮೊಬೈಲ್, ಟಿ.ವಿ ಹಾಗೂ ನೆಟ್‌ಫ್ಲಿಕ್ಸ್ ವೀಕ್ಷಣೆಗೆ ಅವಕಾಶ ಸೇರಿದಂತೆ ಐಷಾರಾಮಿ ಸೌಲಭ್ಯ ಕಲ್ಪಿಸಲಾಗಿದೆ' ಎಂದು ಬಿಂಬಿಸುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ ಬೆನ್ನಲ್ಲೇ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೂವರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

ಕರ್ತವ್ಯ ಲೋಪದ ಆರೋಪದ ಮೇಲೆ ಜೈಲಿನ ವಾರ್ಡರ್‌ಗಳಾದ ಶಿವಾನಂದ ಕರ್ಲಬಟ್ಟಿ, ನಿರಂಜನ್ ಕಾಮತ್ ಹಾಗೂ ಹನುಮಂತಪ್ಪ ಹಡಪದ ಅವರನ್ನು ಕರ್ತವ್ಯದಿಂದ ಅಮಾನತುಗೊಳಿಸಿ ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆ ಡಿಜಿಪಿ ಅಲೋಕ್ ಕುಮಾರ್ ಆದೇಶ ಹೊರಡಿಸಿದ್ದಾರೆ.

'ನಾಳೆ ಐಪಿಎಲ್ ಪಂದ್ಯವಿದೆ, ಈ ಸಲ ಕಪ್ ನಮ್ದೇ. ಜೈಲಿನಲ್ಲಿ ಕೈದಿಗಳಿಗೆ ಮೊಬೈಲ್, ಟಿ.ವಿ ಹಾಗೂ ನೆಟ್‌ಫ್ಲಿಕ್ಸ್ ವೀಕ್ಷಿಸುವ ಸೌಲಭ್ಯಗಳಿವೆ. ಹಿರಿಯ ಅಧಿಕಾರಿಗಳೇ ಮೊಬೈಲ್ ಒದಗಿಸಿದ್ದಾರೆ. ಕಾಸು ಕೊಟ್ಟರೆ ಎಲ್ಲವೂ ಸಿಗುತ್ತದೆ' ಎಂದು ಸ್ವತಃ ವಿಚಾರಣಾ ಕೈದಿಗಳೇ ಈ ವಿಡಿಯೊ ಚಿತ್ರೀಕರಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದರು.

ಬ್ಯಾರಕ್‌ನ ಶೌಚಗುಂಡಿ ಕೊಳವೆಯಲ್ಲಿ ಬಚ್ಚಿಟ್ಟಿದ್ದ ಮೊಬೈಲ್ ಅನ್ನು ತೆಗೆದ ಕೈದಿ (ಎಡ ಚಿತ್ರ). ಮೊಬೈಲ್ ತೆಗೆಯುತ್ತಿರುವ ದೃಶ್ಯ

ಜಾಲತಾಣದಲ್ಲಿ ವಿಡಿಯೊ ಹರಿದಾಡುತ್ತಿದ್ದಂತೆ ಎಚ್ಚೆತ್ತ ಜೈಲಿನ ಅಧಿಕಾರಿಗಳು, ಆರೋಪಿಗಳನ್ನು ಇರಿಸಲಾಗಿದ್ದ 9 ಮತ್ತು 6ನೇ ಬ್ಯಾರಕ್ ಅನ್ನು ತೀವ್ರ ತಪಾಸಣೆಗೊಳ ಪಡಿಸಿದರು. ಅಧಿಕಾರಿಗಳ ಕಣ್ತಪ್ಪಿಸಿ ಪ್ಲಾಸ್ಟಿಕ್ ಕವರ್‌ಗಳಲ್ಲಿ ಸುತ್ತಿ ಶೌಚಗುಂಡಿಯ ಕೊಳವೆಯಲ್ಲಿ ಮೊಬೈಲ್ ಫೋನ್‌ಗಳು ಬಚ್ಚಿಡಲಾಗಿತ್ತು. ಎಲ್ಲ ಮೊಬೈಲ್ ಫೋನ್‌ಗಳನ್ನು ಜಪ್ತಿ ಮಾಡಲಾಗಿದ್ದು, ಈ ಸಂಬಂಧ ಜೈಲು ಅಧಿಕಾರಿಗಳು ಪ್ರಕರಣ ದಾಖಲಿಸಿ, ತನಿಖೆ ಮುಂದುವರೆಸಿದ್ದಾರೆ.

ಜೈಲಿನಲ್ಲಿ ಕೈದಿಗಳಿಗೆ ರಾಜಾತಿಥ್ಯದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ರುವ ಡಿಜಿಪಿ, ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಜರುಗಿಸಿದ್ದಾರೆ. ಕೈದಿಗಳಿದ್ದ ಬ್ಯಾರಕ್ ನೋಡಿಕೊಳ್ಳುತ್ತಿದ್ದ ವಾರ್ಡರ್‌ಗಳನ್ನು ಅಮಾನತು ಮಾಡಿದ್ದಾರೆ. ದರ್ಶನ್, ಅಭಿ ಎಂಬ ವಿಚಾರಣಾಧೀನ ಕೈದಿಗಳು ಈ ಕೃತ್ಯದಲ್ಲಿ ಭಾಗಿ ಯಾಗಿರುವುದು ತನಿಖೆ ವೇಳೆ ಗೊತ್ತಾಗಿದೆ. ವಿಡಿಯೊ ತುಣುಕಿನಲ್ಲಿರುವ ಧ್ವನಿ ಜಿಪ್ಸಿನ್ ಡೇನಿಯಲ್‌ದ್ದು ಎಂದು ಗುರುತಿಸಲಾಗಿದೆ. ದರ್ಶನ್ ಮತ್ತು ಅಭಿ ಎರಡೂವರೆ ವರ್ಷದ ಹಿಂದೆ ಹೆಣ್ಣೂರು ಬಂಡೆಯಲ್ಲಿ ನಡೆದಿದ್ದ ಕೊಲೆ ಪ್ರಕರಣದ ಆರೋಪಿಗಳು. ಈ ಮೂವರು ಸುಂಕದಕಟ್ಟೆ ರಕ್ಷಿತ್ ಗ್ಯಾಂಗ್ ಸದಸ್ಯರು.

'ಮಾರ್ಚ್ 27ರಂದು ದರ್ಶನ್‌ನನ್ನು ಬೇರೆ ಬ್ಯಾರಕ್‌ಗೆ ಸ್ಥಳಾಂತರಿಸಲಾಗಿತ್ತು. ಜೈಲಿನಲ್ಲಿ ಕೈದಿಗಳಿಗೆ ರಾಜಾತಿಥ್ಯಕ್ಕೆ ಸಂಬಂಧಪಟ್ಟಂತೆ ದುರುದ್ದೇಶಪೂರ್ವಕವಾಗಿ ಡಿಜಿಪಿ ಅಲೋಕ್ ಕುಮಾರ್ ಹೆಸರನ್ನು ಎಳೆದು ತಂದಿದ್ದಾರೆ ಎಂದು ಪ್ರಾಥಮಿಕ ತನಿಖೆಯಲ್ಲಿ ಗೊತ್ತಾಗಿದೆ. ಈ ಮೂವರ ವಿರುದ್ಧ ಪ್ರಕರಣ ದಾಖಲಿಸಿ, ಜೈಲಿನ ಕ್ವಾರಂಟೈನ್ ಸೆಲ್‌ಗೆ ಸ್ಥಳಾಂತರಿಸಲಾಗಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ವಿಡಿಯೊದ ಸತ್ಯಾಸತ್ಯತೆಯ ತನಿಖೆ: ವಿಡಿಯೊವನ್ನು ಜೈಲಿನ ಒಳ ಭಾಗದಲ್ಲಿ ಚಿತ್ರೀಕರಿಸಲಾಗಿದೆಯೇ ಅಥವಾ ತಂತ್ರಜ್ಞಾನದ ನೆರವಿನಿಂದ ನಕಲಿ ವಿಡಿಯೊ ಸೃಷ್ಟಿಸಲಾಗಿದೆಯೇ ಎಂಬ ಅನುಮಾನ ವ್ಯಕ್ತವಾಗಿದೆ. ವಿಡಿಯೊದಲ್ಲಿರುವ ವಿಚಾರಣಾ ಕೈದಿಗಳು ಜೈಲಿನಲ್ಲಿ ಮೊಬೈಲ್ ಬಳಸುತ್ತಾ ಐಷಾರಾಮಿ ಜೀವನ ನಡೆಸುತ್ತಿರುವಂತೆ ಬಿಂಬಿಸಲಾಗಿದ್ದು, ಜೈಲಿನೊಳಗೆ ಇಷ್ಟೆಲ್ಲಾ ಸೌಲಭ್ಯಗಳು ದೊರೆಯುತ್ತಿರುವುದು ಹೇಗೆ ಎಂಬ ಚರ್ಚೆ ಶುರುವಾಗಿದೆ. ವಿಡಿಯೊದ ಸತ್ಯಾಸತ್ಯತೆ ಬಗ್ಗೆ ಸಮಗ್ರ ತನಿಖೆ ನಡೆಸಲಾಗುತ್ತಿದೆ ಎಂದು ಕಾರಾಗೃಹದ ಅಧಿಕಾರಿಗಳು ತಿಳಿಸಿದ್ದಾರೆ.

ಜೈಲರ್ ವಿರುದ್ಧವೂ ಕ್ರಮ: ಡಿಜಿಪಿ

'ಕೈದಿಗಳನ್ನು ಬೇರೆ ಬೇರೆ ಬ್ಯಾರಕ್‌ಗಳಿಗೆ ಸ್ಥಳಾಂತರ ಮಾಡುವ ಪ್ರಕ್ರಿಯೆ ನಡೆಯುತ್ತಿದ್ದು, ಅದೇ ರೀತಿ ದರ್ಶನ್ ನನ್ನು ಬೇರೆ ಬ್ಯಾರಕ್‌ಗೆ ಸ್ಥಳಾಂತರ ಮಾಡಲಾಗಿತ್ತು. ವಿಚಾರಣಾ ಕೈದಿಗಳು ಶೌಚಗುಂಡಿಯ ಕೊಳವೆಯಲ್ಲಿ ಅಡಗಿಸಿಟ್ಟಿದ್ದ ಮೊಬೈಲ್‌ಗಳನ್ನು ಜಪ್ತಿ ಮಾಡಿ, ಪ್ರಕರಣ ದಾಖಲಿಸಲಾಗಿದೆ. ಮೂವರು ಸಿಬ್ಬಂದಿ ಅಮಾನತು ಮಾಡಲಾಗಿದ್ದು, ಜೈಲರ್ ಅವರ ವಿಚಾರಣೆ ನಡೆಸಿ, ಅವರ ವಿರುದ್ಧವೂ ಶಿಸ್ತು ಕ್ರಮ ಕೈಗೊಳ್ಳಲಾಗುವುದು' ಎಂದು ಡಿಜಿಪಿ ಅಲೋಕ್ ಕುಮಾರ್ ತಿಳಿಸಿದರು.

'ಜೈಲಿನ ಕೆಲವು ಭಾಗಗಳಲ್ಲಿ ಇನ್ನೂ ಏರ್‌ಟೆಲ್ ಸಿಗ್ನಲ್ ಇರುವುದನ್ನು ಪತ್ತೆ ಹಚ್ಚಲಾಗಿದೆ. ಸಮಸ್ಯೆಯನ್ನು ಸರಿಪಡಿಸುವಂತೆ ಸಂಬಂಧಪಟ್ಟವರಿಗೆ ಸೂಚಿಸಲಾಗಿದೆ. ಕೈದಿಗಳು ಉದ್ದೇಶಪೂರ್ವಕವಾಗಿ ಮಾಧ್ಯಮಗಳಿಗೆ ವಿಡಿಯೊ ನೀಡಿ, ಅಧಿಕಾರಿಗಳ ಮನೋಬಲವನ್ನು ಕುಗ್ಗಿಸಲು ಪ್ರಯತ್ನಿಸುತ್ತಿದ್ದಾರೆ. ಇದಕ್ಕೆ ಅವಕಾಶ ನೀಡುವುದಿಲ್ಲ' ಎಂದು ಎಚ್ಚರಿಸಿದ್ದಾರೆ.

ಮೊಬೈಲ್, ಸಿಮ್ ಕಾರ್ಡ್

ಬ್ಯಾರಕ್‌ಗಳ ತಪಾಸಣೆ ವೇಳೆ 9 ಮೊಬೈಲ್‌ಗಳು ಮತ್ತು 6 ಸಿಮ್ ಕಾರ್ಡ್‌ಗಳು, ಇಯರ್ ಫೋನ್, ಇಯರ್ ಬಡ್ಸ್, ಚಾರ್ಜರ್‌ಗಳನ್ನು ವಶಕ್ಕೆ ಪಡೆಯಲಾಗಿದೆ.

ಅಲೋಕ್ ಕುಮಾರ್ ಅವರು ಕಾರಾಗೃಹ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡ ನಂತರ ಜೈಲುಗಳಲ್ಲಿ ನಡೆಯುತ್ತಿದ್ದ ಎಲ್ಲಾ ಅಕ್ರಮಗಳಿಗೆ ಕಡಿವಾಣ ಹಾಕಿದ್ದರು. ಅವರ ಈ ಕಟ್ಟುನಿಟ್ಟಿನ ಕ್ರಮದಿಂದಾಗಿ ಕೆಲ ವಿಚಾರಣಾಧೀನ ಕೈದಿಗಳು ಹಾಗೂ ಸಜಾ ಕೈದಿಗಳು ಅಧಿಕಾರಿ ವಿರುದ್ಧ ಷಡ್ಯಂತ್ರ ರೂಪಿಸುತ್ತಿದ್ದರು.

ಈ ಬೆನ್ನಲ್ಲೇ ಅದಕ್ಕೆ ಪ್ರತಿಕಾರ ತೀರಿಸಿಕೊಳ್ಳುವ ಉದ್ದೇಶದಿಂದ ದುಷ್ಕರ್ಮಿಗಳು ಅಲೋಕ್ ಕುಮಾರ್ ಅವರ ಹೆಸರನ್ನು ದುರ್ಬಳಕೆ ಮಾಡಿಕೊಂಡು ಈ ವಿಡಿಯೊ ಮಾಡಿ ಹರಿಬಿಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಮಚ್ಚು ಹಿಡಿದು ನೃತ್ಯ: ರೌಡಿಶೀಟರ್ ಸೇರಿ ಇಬ್ಬರ ಬಂಧನ

ಬೆಂಗಳೂರು: ಬ್ಯಾಟರಾಯನಪುರದಲ್ಲಿ ಮಚ್ಚು ಹಿಡಿದು ನೃತ್ಯ ಮಾಡಿದ ವಿಡಿಯೊ ಜಾಲತಾಣದಲ್ಲಿ ಹರಿದಾಡಿದ ಪ್ರಕರಣ ಸಂಬಂಧ ರೌಡಿಶೀಟರ್ ಸೇರಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ರೌಡಿಶೀಟರ್ ರಂಜಿತ್ ಅಲಿಯಾಸ್ ರಂಜು ಮತ್ತು ಆತನ ಸ್ನೇಹಿತ ನಂದೀಶ್ ಬಂಧಿತರು. ಕರಗದ ಸಂದರ್ಭದಲ್ಲಿ ಬಳಸುವ ದೇವಿಯ ಹಾಡಿಗೆ ಮಚ್ಚು ಹಿಡಿದು ಮೂವರು ನೃತ್ಯ ಮಾಡಿರುವ ದೃಶ್ಯ ವಿಡಿಯೊದಲ್ಲಿದೆ. ಇದರಲ್ಲಿ ರಂಜಿತ್ ಮತ್ತು ನಂದೀಶ್ ಮಚ್ಚು ಹಿಡಿದಿದ್ದಾರೆ. ಈ ವಿಡಿಯೊ ತುಣುಕು ಜಾಲತಾಣದಲ್ಲಿ ಹರಿದಾಡುತ್ತಿದ್ದಂತೆ ಬ್ಯಾಟರಾಯನಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆರೋಪಿಗಳನ್ನು ಬಂಧಿಸಿ, ಜೈಲಿಗೆ ಕಳುಹಿಸಿದ್ದಾರೆ. ರಾಜರಾಜೇಶ್ವರಿ ಪೊಲೀಸ್ ಠಾಣೆಯ ರೌಡಿಶೀಟರ್ ಆಗಿರುವ ರಂಜಿತ್ ವಿರುದ್ಧ ಕೊಲೆ ಸೇರಿ ಹಲವು ಪ್ರಕರಣಗಳು ದಾಖಲಾಗಿವೆ. ನಂದೀಶ್ ವಿರುದ್ಧ ಕೆ.ಪಿ.ಅಗ್ರಹಾರ ಠಾಣೆಯಲ್ಲಿ ಕೊಲೆ ಪ್ರಕರಣ ಹಾಗೂ ಬ್ಯಾಟರಾಯನಪುರ ಠಾಣೆಯಲ್ಲಿ ಹಲ್ಲೆ ಪ್ರಕರಣ ದಾಖಲಾಗಿದೆ.

'ಎರಡು ವರ್ಷದ ಹಿಂದಿನ ವಿಡಿಯೊ ಇದಾಗಿದ್ದು, ಉದ್ದೇಶಪೂರ್ವಕವಾಗಿ ಈಗ ಬಿಡುಗಡೆ ಮಾಡಲಾಗಿದೆ' ಎಂದು ಆರೋಪಿಗಳು ಹೇಳಿದ್ದಾರೆ. ಯಾವಾಗ ಈ ದೃಶ್ಯವನ್ನು ಚಿತ್ರೀಕರಿಸಲಾಗಿತ್ತು? ಯಾರ ಮನೆ ಎಂಬುದರ ಬಗ್ಗೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಲಾಂಗ್‌ನಿಂದ ಬೆದರಿಸಿ ಸುಲಿಗೆ

ಬೆಂಗಳೂರು: ರಸ್ತೆ ಬದಿ ಖಾಲಿ ನಿವೇಶನದಲ್ಲಿ ಕುಳಿತು ಮೊಬೈಲ್‌ನಲ್ಲಿ ಕ್ರಿಕೆಟ್ ನೋಡುತ್ತಿದ್ದ ಕಾರ್ಮಿಕರೊಬ್ಬರಿಗೆ ಲಾಂಗ್ ತೋರಿಸಿ, ಬೆದರಿಸಿ ಮೂರು ಸಾವಿರ ರೂಪಾಯಿ ಸುಲಿಗೆ ಮಾಡಿ ಪರಾರಿಯಾಗಿರುವ ಘಟನೆ ಪುಟ್ಟೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಕೊತ್ತನೂರು ದಿಣ್ಣೆ ಮುಖ್ಯರಸ್ತೆ ತುಂಗಾನಗರದ ಖಾಲಿ ನಿವೇಶನದಲ್ಲಿ ಶಿವು ಎಂಬುವರು ಶೆಡ್‌ನಲ್ಲಿ ವಾಸವಿದ್ದಾರೆ. ರಾತ್ರಿ ಊಟದ ಬಳಿಕ ಶಿವು ಶೆಡ್ ಮುಂಭಾಗದ ರಸ್ತೆ ಬದಿ ಕುಳಿತು ಮೊಬೈಲ್‌ನಲ್ಲಿ ಕ್ರಿಕೆಟ್ ನೋಡುತ್ತಿದ್ದರು. ಬೈಕ್‌ನಲ್ಲಿ ಬಂದ ಅಪರಿಚಿತ ವ್ಯಕ್ತಿ, ಲಾಂಗ್ ತೋರಿಸಿ ₹3 ಸಾವಿರ ನಗದು ಸುಲಿಗೆ ಮಾಡಿ ಪರಾರಿಯಾಗಿದ್ದಾನೆ.

ವಕ್ಫ್ ಬೋರ್ಡ್ ಕಚೇರಿ ಬಳಿ ಘಟನೆ • ಮದ್ಯ ಕುಡಿದು ಚಾಲನೆ, ಚಾಲಕ ಬಂಧನ

ಕಾರು ಡಿಕ್ಕಿ: ಬಾಲಕ ಸೇರಿ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಕುಡಿದು ರಸ್ತೆಯಲ್ಲಿ ವಿರುದ್ಧ ದಿಕ್ಕಿನಲ್ಲಿ ಅತಿ ವೇಗವಾಗಿ ಬಂದು ಕಾರು, ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಬಾಲಕ ಸೇರಿ ಇಬ್ಬರು ಸ್ಥಳದಲ್ಲೇ ಮೃತಪಟ್ಟ ಘಟನೆ ತಡರಾತ್ರಿ ನಗರದ ವಕ್ಫ್ ಬೋರ್ಡ್ ಕಚೇರಿ ಸಮೀಪ ಸಂಭವಿಸಿದೆ.

ಸದರ್‌ಪೌನ್ ನಿವಾಸಿ ಜುಬೇರ್ ಅಹಮದ್ (42), ಅಬ್ದುಲ್ ಮುನೀರ್ ಪಾಷಾ (16) ಮೃತರು. ಕಾರು ವಶಕ್ಕೆ ಪಡೆದು, ಚಾಲಕ ಎ.ಸಿ.ಅಯ್ಯಪ್ಪ (29) ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಅಯ್ಯಪ್ಪ ಕಾಫಿ ವ್ಯಾಪಾರಕ್ಕೆಂದು ನಗರಕ್ಕೆ ಕೊಡಗಿನಿಂದ ಶನಿವಾರ ಬಂದಿದ್ದರು. ಈ ವೇಳೆ ತಡರಾತ್ರಿ 2 ಗಂಟೆ ಸುಮಾರಿಗೆ ನಗರದ ವಕ್ಫ್ ಬೋರ್ಡ್ ಕಚೇರಿ ಸಮೀಪದ ಏಕಮುಖ ಸಂಚಾರ ಮಾರ್ಗದಲ್ಲಿ ವಿರುದ್ಧ ದಿಕ್ಕಿನಿಂದ ಕಾರು ಚಾಲನೆ ಮಾಡಿಕೊಂಡು ಬಂದಿದ್ದಾರೆ.

ಅಬ್ದುಲ್ ಮುನೀರ್

ಜುಬೇರ್ ಅಹಮದ್

ವರ್ಕ್‌ಶಾಪ್‌ನಲ್ಲಿ ತಡರಾತ್ರಿ ಕೆಲಸ ಮುಗಿಸಿಕೊಂಡು ಜುಬೇರ್ ಅವರು ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಅಬ್ದುಲ್ ಮುನೀರ್ ಪಾಷಾ ಅವರೊಂದಿಗೆ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ವೇಳೆ ಕಾರು ಡಿಕ್ಕಿ ಹೊಡೆದಿದೆ. ತೀವ್ರ ಗಾಯಗೊಂಡ ಇಬ್ಬರೂ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸ್ಥಳಕ್ಕೆ ಹೈಗ್ರೌಂಡ್ಸ್ ಸಂಚಾರ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಮೃತ ದೇಹಗಳನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಅಪಘಾತ ಎಸಗಿದ್ದ ಕಾರು ಚಾಲಕನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಮದ್ಯ ಕುಡಿದಿರುವುದು ದೃಢಪಟ್ಟಿದೆ. ಆರೋಪಿ ವಿರುದ್ಧ ನಿರ್ಲಕ್ಷ್ಯ ದಿಂದ ವಾಹನ ಚಾಲನೆ ಮತ್ತು ಮದ್ಯಪಾನ ಮಾಡಿ ಜೀವಹಾನಿ ಉಂಟು ಮಾಡಿದ ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ನಾಪತ್ತೆಯಾಗಿದ್ದ ಬಾಲಕಿ ಶವ ಪತ್ತೆ

ಬೆಂಗಳೂರು: ಆರು ವರ್ಷದ ಬಾಲಕಿಯನ್ನು ಅಪಹರಿಸಿ ಕೊಲೆ ಮಾಡಿ ನೀಲಗಿರಿ ತೋಪಿನಲ್ಲಿ ಮೃತದೇಹ ಎಸೆದು ಹೋಗಿರುವ ಘಟನೆ ಎಲೆಕ್ಟ್ರಾನಿಕ್ ಸಿಟಿ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ವರ್ಷದ ಹಿಂದೆ ಉದ್ಯೋಗ ಅರಸಿ ನಗರಕ್ಕೆ ಬಂದಿದ್ದ ಅಸ್ಸಾಂ ದಂಪತಿ, ಪುತ್ರಿ ರುಮಿಯಾ ಜತೆ ವಿಟ್ಟಸಂದ್ರದ ಬಳಿ ವಾಸವಿದ್ದರು. ತಂದೆ ಚಿಂದಿ ಆಯುವ ಕೆಲಸ ಮಾಡಿಕೊಂಡಿದ್ದರೆ, ತಾಯಿ ಅಪಾರ್ಟ್‌ಮೆಂಟ್‌ನಲ್ಲಿ ಮನೆ ಕೆಲಸಕ್ಕೆ ಹೋಗುತ್ತಿದ್ದರು. ಗುರುವಾರ ಸಂಜೆ ಮನೆ ಬಳಿ ಆಟವಾಡುತ್ತಿದ್ದ ರುಮಿಯಾ ಕಾಣೆಯಾಗಿದ್ದಳು.

ಮಗಳು ನಾಪತ್ತೆಯಾಗಿರುವುದು ಗೊತ್ತಾಗುತ್ತಿದ್ದಂತೆ ತಂದೆ ಅಕ್ಕಪಕ್ಕದ ಮನೆಗಳಲ್ಲಿ ಹುಡುಕಾಡಿದ್ದರೂ ಸಿಕ್ಕಿರಲಿಲ್ಲ. ಬಳಿಕ ಪೊಲೀಸರಿಗೆ ದೂರು ನೀಡಿದರು. ಪೊಲೀಸರು ಹುಡುಕಾಟ ನಡೆಸಿದಾಗ, ವಿಟ್ಟಸಂದ್ರದ ನೀಲಗಿರಿ ತೋಪಿನಲ್ಲಿ ಬಾಲಕಿ ಮೃತದೇಹ ಪತ್ತೆಯಾಗಿತ್ತು. ಕತ್ತು ಹಿಸುಕಿ ಕೊಲೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಪರಿಚಯಸ್ಥರೇ ಕೊಲೆ ಮಾಡಿರುವ ಶಂಕೆ ಇದೆ. ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

₹ 50 ಲಕ್ಷ ಮೌಲ್ಯದ ನಕಲಿ ಸಿಗರೇಟ್ ವಶ: ಐವರ ಸೆರೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ವಿದೇಶಗಳಿಂದ ಅಕ್ರಮವಾಗಿ ನಕಲಿ ಸಿಗರೇಟ್ ಸಾಗಾಣಿಕೆ ಮಾಡುತ್ತಿದ್ದ ಜಾಲವನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಠಾಣೆ ಪೊಲೀಸರು ಪತ್ತೆಹಚ್ಚಿ ತಂದೆ, ಮಗ ಸೇರಿ ಐವರನ್ನು ಬಂಧಿಸಿದ್ದಾರೆ.

ಆರೋಪಿಗಳಿಂದ ಸುಮಾರು ₹50 ಲಕ್ಷ ಮೌಲ್ಯದ 20 ಕಾರ್ಟನ್ ನಕಲಿ ಸಿಗರೇಟ್ ವಶಪಡಿಸಿಕೊಂಡಿದ್ದಾರೆ. ಐಟಿಸಿ ಮತ್ತು ಇತರ ಪ್ರಸಿದ್ಧ ಕಂಪನಿ ಗಳ ಬ್ರ್ಯಾಂಡ್ ನಕಲಿ ಮಾಡಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತಿತ್ತು ಎಂದು ತನಿಖೆಯಿಂದ ಬಹಿರಂಗವಾಗಿದೆ.

ಬೆಂಗಳೂರಿನ ಅಬ್ದುಲ್ ಬಷೀದ್, ಇವರ ಪುತ್ರ ಮೊಹಮ್ಮದ್ ಆಶೀಕ್, ಮಹಮ್ಮದ್ ಅನ್ವರ್, ಮಹಮ್ಮದ್ ಅನ್ಸಾರಿ ಹಾಗೂ ಗುಲಾಮ್ ಹುಸೇನ್ ಖಾನ್ ಬಂಧಿತರು. ಅಕ್ರಮ ದಂಧೆಯನ್ನು ತಂದೆ, ಮಗನೇ ನಡೆಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಕಾಂಬೋಡಿಯಾದಲ್ಲಿ ಕಡಿಮೆ ದರದಲ್ಲಿ ಖರೀದಿಸಿದ ನಕಲಿ ಬ್ರಾಂಡ್‌ನ ಸಿಗರೇಟ್‌ಗಳನ್ನ ಹಾಂಗ್‌ಕಾಂಗ್, ಕ್ವಾಲಾಲಂಪುರ ಹಾಗೂ ಸಿಂಗಪುರದಿಂದ ಅಕ್ರಮವಾಗಿ ಬೆಂಗಳೂರಿಗೆ ತರಲಾಗುತ್ತಿತ್ತು. ಆರೋಪಿಗಳು ಇಲ್ಲಿ ಹೆಚ್ಚಿನ ಬೆಲೆಗೆ ನಕಲಿ ಸಿಗರೇಟ್ ಮಾರಾಟ ಮಾಡಿ ಲಾಭ ಗಳಿಸುತ್ತಿದ್ದರು ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ.

ಖಾಸಗಿ ಸಂಸ್ಥೆ ನೀಡಿದ ದೂರಿನ ಮೇರೆಗೆ ಪೊಲೀಸರು ತನಿಖೆ ಆರಂಭಿಸಿದ್ದರು. ಖಚಿತ ಮಾಹಿತಿಯ ಆಧಾರದ ಮೇಲೆ ಆರೋಪಿಗಳನ್ನು ವಶಕ್ಕೆ ಪಡೆದು ಪರಿಶೀಲಿಸಿದಾಗ ಜಾಲ ಬಯಲಾಯಿತು.

ಕೆಂಪೇಗೌಡ ವಿಮಾನ ನಿಲ್ದಾಣದ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಪೊಲೀಸರು ಇನ್ನಷ್ಟು ಮಾಹಿತಿ ಸಂಗ್ರಹಿಸುತ್ತಿದ್ದು, ಜಾಲದ ವ್ಯಾಪ್ತಿ ಕುರಿತು ತನಿಖೆ ಮುಂದುವರಿದಿದೆ.

ಮುಂಬೈ ರೇಸ್

ಯುವರ್ ಅನ್‌ಫರ್ಗೆಟಬಲ್ ಗೆಲ್ಲುವ ನಿರೀಕ್ಷೆ

ಕರ್‌ಸೆಟ್ಜಿ ಧುಂಜಿಶಾ ಸಲ್ವಾರ್ ಸೋಮವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಯುವರ್ ಅನ್‌ಫರ್ಗೆಟಬಲ್ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 4.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಮೈಟಿ ಹೀರೊ 4, ಮಾ ಚೆರಿ 12, ಫ್ಲಾಷ್ ಮಾಬ್ 5
2ನೇ ರೇಸ್: ಯುವರಿಮ್ಯಾನೊರ್‌ಬೋರ್ನ್ 6, ಲುಕಿಂಗ್ ಲೈಟ್ ಎ ವಾವ್ 2, ಬ್ಲ್ಯಾಕ್ ಥಂಡರ್ 4
3ನೇ ರೇಸ್: ಕ್ವೀನ್ ಕೆರೊಲೈನ್ 7, ಲಕ್ಕಿ ಡೈಮಂಡ್ 3, ಡ್ರೀಮ್ಸ್ ಕಮ್ ಟ್ರೂ 5
4ನೇ ರೇಸ್: ಇಂಕ್ರೆಡಿಬಲ್ ಲಕ್ 4, ಸ್ಪೆಕ್ಟ್ರ 9, ಶಾಂದಾರ್ 5
5ನೇ ರೇಸ್: ಯುವರ್ ಅನ್‌ಫರ್ಗೆಟಬಲ್ 2, ಅರ್ಡಕನ್ 3, ರಾಂಬ್ಲರ್ 8
6ನೇ ರೇಸ್: ಎನ್‌ಸ್ಕಿ 1, ಅಮೆರಿಕನ್ ಈಗಲ್ 2, ಕೀ ವೆಸ್ಟ್ 6
7ನೇ ರೇಸ್: ನ್ಯೂಟ್ರಲಿಸ್ಟ್ 3, ಅಕಿಟಾನಿಯಾ 6, ಸ್ಟಾರ್ಮ್ ಕ್ಲೌಡ್ 1

ಉತ್ತಮ ಬೆಟ್: ನ್ಯೂಟ್ರಲಿಸ್ಟ್

ಜಾಕ್‌ಪಾಟ್‌ಗೆ	ಟ್ರಿಬಲ್
3,4,5,6,7	4,5,6

ಐಪಿಎಲ್ ಕ್ರಿಕೆಟ್ ಪಂದ್ಯ: 20ಕ್ಕೂ ಹೆಚ್ಚು ಮೊಬೈಲ್ ಕಳವು

ಬೆಂಗಳೂರು: ಆರ್‌ಸಿಬಿ ಮತ್ತು ಎಸ್‌ಆರ್‌ಎಚ್ ತಂಡಗಳ ನಡುವೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದ ವೇಳೆ 20ಕ್ಕೂ ಹೆಚ್ಚು ಮೊಬೈಲ್ ಕಳ್ಳತನವಾಗಿದೆ. ಈ ಸಂಬಂಧ ಕಬ್ಬನ್ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಲಾಗಿದೆ.

ಪಂದ್ಯ ಮುಗಿದ ಬಳಿಕ ಕ್ರಿಕೆಟ್ ಪ್ರೇಮಿಗಳು ಹೊರಗೆ ಬರುವ ವೇಳೆ ಕಳ್ಳರು ಮೊಬೈಲ್ ಹಾಗೂ ಪರ್ಸ್‌ಗಳನ್ನು ಕಳವು ಮಾಡಿದ್ದಾರೆ.

ಮೊಬೈಲ್ ಕಳೆದುಕೊಂಡ ಕೆಲವರು ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದಾರೆ. ಮತ್ತೆ ಕೆಲವರು ಇ-ಲಾಸ್ಟ್ ಮೂಲಕ ದೂರು ಸಲ್ಲಿಸಿದ್ದಾರೆ.

ಗೇಟ್ ನಂ 1, 2 ಮತ್ತು 3 ರಲ್ಲಿ ಅತಿ ಹೆಚ್ಚು ಕಳ್ಳತನವಾಗಿದೆ. ಠಾಣೆಯಲ್ಲಿ 8 ಮಂದಿ ದೂರು ಸಲ್ಲಿಸಿದ್ದು, ಇ-ಲಾಸ್ಟ್‌ನಲ್ಲಿ 12ಕ್ಕೂ ಹೆಚ್ಚು ದೂರು ಸಲ್ಲಿಕೆಯಾಗಿದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲನೆ ಮಾಡುತ್ತಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಪಿಎಲ್ ಪಂದ್ಯದ ವೇಳೆ ಯಾವುದೇ ಗೊಂದಲಕ್ಕೆ ಅವಕಾಶ ನೀಡದ ನಗರ ಪೊಲೀಸರಿಗೆ ಸಾರ್ವಜನಿಕರು ಸಾಮಾಜಿಕ ಜಾಲತಾಣಗಳ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕಾಲ್ತುಳಿತ ಘಟನೆ ನಡೆದ ಬಳಿಕ ಎಚ್ಚೆತ್ತುಕೊಂಡಿರುವ ಪೊಲೀಸರು, ಯಾವುದೇ ಅಹಿತಕರ ಘಟನೆ ನಡೆಯದಂತೆ ಕ್ರೀಡಾಂಗಣ ಸುತ್ತ ಮುತ್ತ ಸುಮಾರು 2 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ನಿಯೋಜಿಸಿ ಬಿಗಿ ಭದ್ರತೆ ಒದಗಿಸಿದ್ದರು. ಹೀಗಾಗಿ ಕ್ರೀಡಾಂಗಣದ ಪ್ರವೇಶ ಹಾಗೂ ನಿರ್ಗಮನದ ವೇಳೆ ನೂಕು ನುಗ್ಗಲು ಆಗದ ರೀತಿ ವ್ಯವಸ್ಥೆ ಮಾಡಿದ್ದರು.

ತಾಯಿ, ಅಕ್ಕನ ಕತ್ತು ಕೊಯ್ದ ಯುವಕ

ಸಾಲಬಾಧೆಯಿಂದ ಕೃತ್ಯ: ಬದುಕುಳಿದ ಅಕ್ಕನ ಮಗ, ಯುವಕ ಕೋಮಾದಲ್ಲಿ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಬಿದರಗುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೆಳ್ಳೇನಹಳ್ಳಿಯಲ್ಲಿ ಚೀಟಿ ವ್ಯವಹಾರದಲ್ಲಿ ಕೋಟ್ಯಂತರ ರೂಪಾಯಿ ನಷ್ಟ ಅನುಭವಿಸಿದ ಯುವಕನೊಬ್ಬ ತನ್ನ ತಾಯಿ, ಅಕ್ಕ ಮತ್ತು ಅಕ್ಕನ ಮಗನ ಕತ್ತು ಕೊಯ್ದು ತಾನೂ ಆತ್ಮಹತ್ಯೆಗೆ ಶನಿವಾರ ರಾತ್ರಿ ಯತ್ನಿಸಿದ್ದಾನೆ.

ಘಟನೆಯಲ್ಲಿ ತಾಯಿ ಆಶಾ(50) ಮತ್ತು ಅಕ್ಕ ವರ್ಷಿತಾ(35) ತೀವ್ರ ರಕ್ತಸ್ರಾವದಿಂದ ಮನೆಯಲ್ಲಿಯೇ ಮೃತಪಟ್ಟಿದ್ದಾರೆ. ವರ್ಷಿತಾ ಅವರ ಪುತ್ರ ಮಾಯನ್ ಗೌಡ(11) ಬದುಕುಳಿದ್ದಾನೆ. ಮೂವರ ಕತ್ತು ಕೊಯ್ದ ನಂತರ ಆರೋಪಿ ಮೋಹನ್ ಗೌಡ(27) ನಂತರ ತಾನೂ ಚಾಕುವಿನಿಂದ ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾನೆ.

ಚೀರಾಟದ ಸದ್ದು ಕೇಳಿ ಅಕ್ಕಪಕ್ಕದ ಮನೆಯವರು ಬಂದು ನೋಡಿ ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದ ಇಬ್ಬರನ್ನೂ ಆಸ್ಪತ್ರೆಗೆ ಸೇರಿಸಿದರು. ಸದ್ಯ ಮಾಯನ್ ಗೌಡ ಮತ್ತು ಮೋಹನ್ ಗೌಡ ಕೋಮಾದಲ್ಲಿದ್ದು, ನಾರಾಯಣ ಹೃದಯಾಲಯದ ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರೆದಿದೆ.

ಚೀಟಿ ವ್ಯವಹಾರದಲ್ಲಿ ನಷ್ಟ ಅನುಭವಿಸಿದ್ದ ಮೋಹನ್ ಗೌಡ ಮತ್ತು ಕುಟುಂಬದವರು ಕೋಟ್ಯಂತರ ಸಾಲ ಮಾಡಿಕೊಂಡಿದ್ದರು ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ. ಸಾಲಗಾರರ ಉಪಟಳ ಹೆಚ್ಚಾಗಿದ್ದರಿಂದ ಮನನೊಂದು ಈ ರೀತಿ ಮಾಡಿಕೊಂಡಿರುವ ಅನುಮಾನವಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಅತ್ತಿಬೆಲೆ ಪೊಲೀಸ್ ಠಾಣೆಯಲ್ಲಿ ಮೋಹನ್ ಗೌಡ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ ಎಂದು ಡಿವೈಎಸ್ಪಿ ಮೋಹನ್ ಕುಮಾರ್ ತಿಳಿಸಿದರು.

ಸರಣಿ ಅಪಘಾತ: ಹೊತ್ತಿ ಉರಿದ ಕಾರು

ಹಲಸಹಳ್ಳಿ ಗೇಟ್ ಸಮೀಪ ನಡೆದ ಅಪಘಾತದಲ್ಲಿ ಕಂಟೇನರ್, ಕಾರು ಹೊತ್ತಿ ಉರಿದವು

ಹೊಸಕೋಟೆ: ನಗರದ ಸಮೀಪ ಹಲಸಹಳ್ಳಿ ಗೇಟ್ ಸಮೀಪ ಹೊಸಕೋಟೆ ಮತ್ತು ಕೋಲಾರ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಶನಿವಾರ ಮಧ್ಯರಾತ್ರಿ ಲಾರಿ, ಕಂಟೇನರ್ ಮತ್ತು ಕಾರು ನಡುವೆ ಅಪಘಾತ ಸಂಭವಿಸಿ ಕಾರು ಹೊತ್ತಿ ಉರಿದಿದ್ದು ಮೂವರಿಗೆ ಸುಟ್ಟ ಗಾಯಗಳಾಗಿವೆ.

ಕಾರಿನಲ್ಲಿದ್ದ ಕೋಲಾರದ ಶಯನ್, ಶ್ರೀನಿವಾಸ್ ಮತ್ತು ಮಹಮದ್ ಸಾಹೇಬ್ ಗಾಯಗೊಂಡಿದ್ದಾರೆ. ಎಲ್ಲರೂ ಬೆಂಗಳೂರಿನ ಅವಲಹಳ್ಳಿ ಸಮೀಪ ಕಿತ್ತಗಾನಹಳ್ಳಿಯಲ್ಲಿ ಕೆಲಸ ಮಾಡುತ್ತಿದ್ದರು. ಹೆದ್ದಾರಿಯಲ್ಲಿ ಯೂ-ಟರ್ನ್ ತೆಗೆದುಕೊಳ್ಳುತ್ತಿದ್ದ ಕಂಟೇನರ್‌ಗೆ ಹಿಂದಿನಿಂದ ಬಂದ ಕಾರು ಡಿಕ್ಕಿ ಹೊಡೆದಿದೆ. ತಕ್ಷಣ ಎರಡೂ ವಾಹನಗಳು ಹೊತ್ತಿ ಉರಿದಿವೆ.

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

'ರಸ್ತೆ ಗುಂಡಿ ಮುಚ್ಚಿ'

ಕೋಣನಕುಂಟೆಯ ಶ್ರೀನಿಧಿ ಬಡಾವಣೆಯ ಮೂರನೇ ಮುಖ್ಯರಸ್ತೆಯಲ್ಲಿ ಗುಂಡಿ ಬಿದ್ದಿದ್ದು, ವಾಹನ ಸಂಚಾರಕ್ಕೆ ಸಮಸ್ಯೆ ಆಗಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಗುಂಡಿ ಬಿದ್ದಿರುವ ಕಾರಣ ಸಂಚಾರ ದಟ್ಟಣೆ ಆಗುತ್ತಿದೆ. ದ್ವಿಚಕ್ರ ವಾಹನ ಸವಾರರು ಈ ಗುಂಡಿಗೆ ಬಿದ್ದು ಕೈಕಾಲುಗಳನ್ನು ಮುರಿದುಕೊಂಡಿದ್ದಾರೆ. ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ರಸ್ತೆ ಗುಂಡಿ ಮುಚ್ಚಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಅರಣ್ ಗೌಡ, ವಾಹನ ಸವಾರ

'ಹೆದ್ದಾರಿಯ ಅಂಚಿನಲ್ಲಿ ಕಸದ ರಾಶಿ'

ಪೂರ್ವ ನಗರ ಪಾಲಿಕೆ ವ್ಯಾಪ್ತಿಯ ಬಸವನಪುರ ವಾರ್ಡ್‌ನ ಮೇಡಹಳ್ಳಿ ಬಡಾವಣೆಯ ರಾಷ್ಟ್ರೀಯ ಹೆದ್ದಾರಿ ಸರ್ವೀಸ್ ರಸ್ತೆಯ ಅಂಚಿನಲ್ಲಿ ಕಸದ ರಾಶಿ ಹಾಕಲಾಗಿದೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಬೀದಿ ನಾಯಿಗಳು ಹಾಗೂ ಬೀಡಾಡಿ ದನಗಳು ಕಸ ಎಳೆದು ರಸ್ತೆಗೆ ತರುತ್ತಿದ್ದು, ಸಂಚಾರ ದಟ್ಟಣೆ ಆಗುತ್ತಿದೆ. ಪಾಲಿಕೆ ಸಿಬ್ಬಂದಿ ಕೂಡಲೇ ಈ ಕಸದ ರಾಶಿಯನ್ನು ವಿಲೇವಾರಿ ಮಾಡಬೇಕು.

ಕಿರಣ್ ಕುಮಾರ್ ಜೆ., ಮೇಡಹಳ್ಳಿ

'ರಾಜಕಾಲುವೆ: ಹೂಳು ತೆಗೆಯಿರಿ'

ಗಾಂಧಿನಗರ ವಿಧಾನಸಭಾ ಕ್ಷೇತ್ರದ ಶೇಷಾದ್ರಿಪುರದ ಸಿರೂರ್ ಪಾರ್ಕ್ ರಸ್ತೆಯ ಬಳಿ ಇರುವ ರಾಜಕಾಲುವೆ ಗಬ್ಬೆದ್ದು ನಾರುತ್ತಿದೆ. ಹೂಳು ತುಂಬಿಕೊಂಡಿರುವ ಪರಿಣಾಮ ನೀರು ಮುಂದೆ ಹೋಗದೇ ಇಡೀ ಪ್ರದೇಶಕ್ಕೆ ದುರ್ನಾತ ಆವರಿಸಿಕೊಂಡಿದೆ. ಸಾರ್ವಜನಿಕರು ಮೂಗು ಮುಚ್ಚಿಕೊಂಡು ಓಡಾಡುತ್ತಿದ್ದಾರೆ. ಇದರ ಜೊತೆ ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಇದು ಸ್ಥಳೀಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಸಂಬಂಧಪಟ್ಟ ಪಾಲಿಕೆ ಸಿಬ್ಬಂದಿ ಕೂಡಲೇ ಹೂಳು ತೆಗೆಯುವ ಕಾರ್ಯಕ್ಕೆ ಮುಂದಾಗಬೇಕು.

ಶೇಷಾದ್ರಿಪುರದ ಸಾರ್ವಜನಿಕರು

'ಅಗೆದ ರಸ್ತೆ ದುರಸ್ತಿಗೊಳಿಸಿ'

ಶ್ರೀರಾಮಪುರ ಮೆಟ್ರೊ ನಿಲ್ದಾಣದ ಕೆಳಭಾಗದ ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ಈ ರಸ್ತೆಯಲ್ಲಿ ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ರಸ್ತೆಯನ್ನು ಅಗೆದಿರುವ ಪರಿಣಾಮ ಸಂಚಾರ ದಟ್ಟಣೆ ಆಗುತ್ತಿದೆ. ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ. ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಅಗೆದಿರುವ ರಸ್ತೆಯನ್ನು ದುರಸ್ತಿಗೊಳಿಸಬೇಕು.

ರಮೇಶ್, ಶ್ರೀರಾಮಪುರ

ನಗರದಲ್ಲಿ ಇಂದು

ಕರಗ ಶಕ್ತ್ಯೋತ್ಸವ: ಮಧ್ಯಾಹ್ನ 12.30ಕ್ಕೆ ಕರಗದ ಕುಂಟೆ (ಕಬ್ಬನ್ ಉದ್ಯಾನ), ಮಧ್ಯಾಹ್ನ 3ಕ್ಕೆ ಹಸಿಕರಗ (ಸಂಪಂಗಿಕೆರೆ ಅಂಗಳದ ಪೀಠದಲ್ಲಿ) ಆಯೋಜನೆ ಮತ್ತು ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ ಆವರಣ, ತಿಗಳರಪೇಟೆ.

ವಿಶ್ವ ರಂಗಭೂಮಿ ದಿನಾಚರಣೆ: ಅತಿಥಿಗಳು: ಅನಂತರಾಜು, ಪ್ರಸನ್ನಕುಮಾರ್, 'ಶಿವ ಮಹಿಮೆ' ನಾಟಕ ಪ್ರದರ್ಶನ: ನಿರ್ದೇಶನ: ವಿ.ಎಂ. ಮೋಹನ್, ಆಯೋಜನೆ: ಕುಶಲ ಕಲಾವೃಂದ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರದ ಆವರಣ, ಜೆ.ಸಿ. ರಸ್ತೆ, ಸಂಜೆ 4

ವಿಶ್ವ ರಂಗಭೂಮಿ ದಿನಾಚರಣೆ, ಪರಂಪರಾ ರಂಗ ಪುರಸ್ಕಾರ ಪ್ರದಾನ: ಅತಿಥಿಗಳು: ನಾ. ದಾಮೋದರ ಶೆಟ್ಟಿ, ಅಶೋಕ ಎನ್. ಚಲವಾದಿ, ಪ್ರಶಸ್ತಿ ಸ್ವೀಕರಿಸುವವರು: ಎಚ್.ಎಸ್. ಶ್ರೀರಾಮಕೃಷ್ಣ, ರತ್ನಾ ಸಕಲೇಶಪುರ, 'ಪಂಚವರ್ಣೆ' ಏಕವ್ಯಕ್ತಿ ನಾಟಕ ಪ್ರದರ್ಶನ: ಅಭಿನಯ: ಎಚ್.ಎನ್. ಮೀರಾ, ನಿರ್ದೇಶನ: ಬೇಲೂರು ರಘುನಂದನ್, ಆಯೋಜನೆ: ಪರಂಪರಾ ಕಲ್ಚರಲ್ ಫೌಂಡೇಷನ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ: ಅತಿಥಿಗಳು: ಹಂ.ಪ. ನಾಗರಾಜಯ್ಯ, ಎಸ್. ನಿರ್ಮಲಾ, ಪಲ್ಲವಿ ಹೊನ್ನಾಪುರ, ಪದ್ಮಾ ರವೀಂದ್ರ, ಶಿವಾನಂದ ತಗಡೂರು, ತಾರೀಹಳ್ಳಿ ಹನುಮಂತಪ್ಪ, ವಿಶ್ವನಾಥ್ ಕೆ.ಆರ್., ಕೆ.ಎಸ್. ನಿಖಿಲ್, ಕೆ.ವಿ. ಸರಸ್ವತಿ, ಮಹೇಂದ್ರ ಮುನ್ನೋತ್, ಆಯೋಜನೆ: ಕಲಾಬಂಧು ಫೌಂಡೇಷನ್, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5



ಹಂ.ಪ. ನಾಗರಾಜಯ್ಯ

ಭಗವಾನ್ ಮಹಾವೀರ ಜನ್ಮ ಕಲ್ಯಾಣ ಮಹೋತ್ಸವ: **ಸಾನ್ನಿಧ್ಯ:** ಭುವನ ಕೀರ್ತಿ ಭಟ್ಟಾರಕ ಸ್ವಾಮೀಜಿ, ಬಿ.ಆರ್. ದಿವ್ಯಕುಮಾರ್, ಉಪಸ್ಥಿತಿ: ಡಿ. ಸುಧಾಕರ್, ಉದ್ಘಾಟನೆ: ಮನೋಜ್ ಜೈನ್, ಅಧ್ಯಕ್ಷತೆ: ಎಸ್. ಜಿತೇಂದ್ರ ಕುಮಾರ್, ಉಪನ್ಯಾಸ: ಮುನಿರಾಜ ರೆಂಜಾಳ, ಪ್ರಶಸ್ತಿ ಪ್ರದಾನ: ಹಂ.ಪ. ನಾಗರಾಜಯ್ಯ, ಪ್ರಶಸ್ತಿ ಸ್ವೀಕರಿಸುವವರು: ಎಂ.ಜೆ. ಇಂದ್ರಕುಮಾರ್, ರಾಜಕೀರ್ತಿ, ವೈ.ಎಸ್. ರಾಜೇಂದ್ರ ಕುಮಾರ್, ಆಯೋಜನೆ: ಕರ್ನಾಟಕ ಜೈನ್ ಅಸೋಸಿಯೇಷನ್, ಸ್ಥಳ: ರಾಜರ್ಷಿ ಡಿ.ವೀರೇಂದ್ರ ಹೆಗ್ಗಡೆ ಸಭಾ ಭವನ, ಕರ್ನಾಟಕ ಜೈನ ಭವನ, ಕೆ.ಆರ್. ರಸ್ತೆ, ಮಧ್ಯಾಹ್ನ 2.30

ಮಹಾವೀರ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ಭುವನ ಕೀರ್ತಿ ಭಟ್ಟಾರಕ ಸ್ವಾಮೀಜಿ, ಸುಯಶ್ ನಿಧಿ ಜಿ., ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ಎಸ್. ತಂಗಡಗಿ, ಅತಿಥಿಗಳು: ಡಿ. ಸುಧಾಕರ್, ಲೆಹರ್‌ಸಿಂಗ್ ಸಿರೋಯಾ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6



ಎಂಟನೇ ವರ್ಷದ ವಾರ್ಷಿಕೋತ್ಸವ, ಗೀತ ಗಾಯನ: ಪಿ. ರುದ್ರಪ್ಪ ಮತ್ತು ತಂಡ, 'ಪೋಸ್ಟ್‌ಮ್ಯಾನ್ ಪಜೀತಿ' ನಾಟಕ ಪ್ರದರ್ಶನ: ರಚನೆ: ಟಿ.ಎನ್. ಬಾಲಕೃಷ್ಣ, ನಿರ್ದೇಶನ: ಫೋಟೊ ವೆಂಕಿ, ಆಯೋಜನೆ: ಸಂಧ್ಯಾ ಜನ ಸಂಸ್ಕೃತಿ ಟ್ರಸ್ಟ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಸೂರ್ಯ ಕಲೋತ್ಸವ, ವಿಶ್ವ ರಂಗಭೂಮಿ ದಿನಾಚರಣೆ: ಅತಿಥಿಗಳು: ಶೋಭಾ ಕರಂದ್ಲಾಜೆ, ಎಸ್.ಟಿ. ಸೋಮಶೇಖರ್, ವಿನಯಾ ಪ್ರಸಾದ್, ಬಿ.ಆರ್. ಲಕ್ಷ್ಮಣರಾವ್, 'ಸೂರ್ಯ ಪ್ರಶಸ್ತಿ' ಸ್ವೀಕರಿಸುವವರು: ಸಿಹಿಕಹಿ ಚಂದ್ರು, ಆಯೋಜನೆ: ಸೂರ್ಯ ಕಲಾವಿದರು, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

88ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಇಶಾನ್ ಕೆ ಭಾರದ್ವಾಜ್ ಮತ್ತು ತಂಡ, ಕರ್ನಾಟಕ ಸಂಗೀತ ಕಛೇರಿ: ರಾಮಕೃಷ್ಣನ್ ಮೂರ್ತಿ, ಎಚ್.ಕೆ. ವೆಂಕಟ್‌ರಾಮ್, ದಿಲ್ಲಿ ಸಾಯಿರಾಮ್, ಜಿ. ಗುರುಪ್ರಸನ್ನ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5ರಿಂದ

33ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಸಂಪಗೋಡು ವಿಘ್ನರಾಜ, ಪಿಟೀಲು: ಎಂ.ಎ. ಕೃಷ್ಣಸ್ವಾಮಿ, ಮೃದಂಗ: ಅನಿರುದ್ಧ ಭಟ್, ಮೋರ್ಸಿಂಗ್: ಬಿ. ರಾಜಶೇಖರ್, ಆಯೋಜನೆ ಮತ್ತು ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30

ಮುತ್ಯಾಲಮ್ಮ ದೇವಿ ರಥೋತ್ಸವ: ಹೂವಿನ ಪಲ್ಲಕ್ಕಿ ಉತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ದೇವಸ್ಥಾನ ಟ್ರಸ್ಟ್, ಮುತ್ಯಾಲಮ್ಮ ಕೆ. ಸ್ಟ್ರೀಟ್, ಶಿವಾಜಿನಗರ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಖಾಸಗಿ ಕಾಲೇಜುಗಳಿಗೆ ₹146 ಕೋಟಿ ಅನುದಾನ: ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನತ ಶಿಕ್ಷಣ ಇಲಾಖೆಯು 2018–19ನೇ ಸಾಲಿನಿಂದ 2022–23ನೇ ಸಾಲಿನವರೆಗೆ, ರಾಜ್ಯದ ಎರಡು ಖಾಸಗಿ ಕಾಲೇಜುಗಳಿಗೆ ನಿಯಮ ಬಾಹಿರವಾಗಿ ₹146.23 ಕೋಟಿ ಅನುದಾನ ಬಿಡುಗಡೆ ಮಾಡಿದೆ.

ವಿಧಾನಸಭೆಯಲ್ಲಿ ಮಂಡಿಸಲಾದ 'ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ–ಮಾರ್ಚ್ 2024' (ಸಿಎಜಿ) ವರದಿಯಲ್ಲಿ ಈ ಮಾಹಿತಿ ಇದೆ.

'ರಾಜ್ಯದಲ್ಲಿ ತಾಂತ್ರಿಕ, ಆರೋಗ್ಯ, ನಿರ್ವಹಣೆ ಮತ್ತಿತರ ಕ್ಷೇತ್ರಗಳಲ್ಲಿ ಅನ್ವಯಿಕ ವಿಶ್ವವಿದ್ಯಾಲಯಗಳ ಶಿಕ್ಷಣವನ್ನು ಉತ್ತೇಜಿಸಲು ರಾಜ್ಯ ಸರ್ಕಾರವು 2013ರಲ್ಲಿ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅನುಕೂಲವಾಗುವಂತೆ ಖಾಸಗಿ ವಿಶ್ವವಿದ್ಯಾಲಯಗಳ ಕಾಯ್ದೆಯನ್ನು ರೂಪಿಸಿತು. ಅದರಂತೆ, ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ಮತ್ತು ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿತ್ತು. ಖಾಸಗಿ ವಿಶ್ವವಿದ್ಯಾಲಯಗಳು ತಮ್ಮದೇ ಹಣಕಾಸು ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಕಾಯ್ದೆಯ 5ನೇ ಸೆಕ್ಷನ್‌ನಲ್ಲಿ ಷರತ್ತು ಹಾಕಲಾಗಿತ್ತು' ಎಂದು ಸಿಎಜಿ ವರದಿಯಲ್ಲಿ ಹೇಳಿದೆ.

'ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತರಿಂದ, ಅವರ ವ್ಯಾಪ್ತಿಯಲ್ಲಿದ್ದ ಮೈಸೂರಿನ ಜಯಚಾಮರಾಜೇಂದ್ರ ಎಂಜಿನಿಯರಿಂಗ್ ಕಾಲೇಜು (ಎಸ್‌ಜೆಸಿಇ) ಮತ್ತು ಹುಬ್ಬಳ್ಳಿಯ ಬಿ.ವಿ.ಭೂಮರೆಡ್ಡಿ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಕಾಲೇಜಿಗೆ (ಬಿವಿಬಿಸಿಇಟಿ), ಸರ್ಕಾರದಿಂದ ಅನುದಾನ ಬಿಡುಗಡೆ ಆಗುತ್ತಿತ್ತು. ಆದರೆ 2018–19ನೇ ಸಾಲಿನಿಂದ ಈ ಎರಡೂ ಕಾಲೇಜುಗಳು ಕ್ರಮವಾಗಿ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯ ಹಾಗೂ ಕೆಎಲ್‌ಇ ತಾಂತ್ರಿಕ ವಿಶ್ವವಿದ್ಯಾಲಯದ ಭಾಗವಾದವು. ಕಾಯ್ದೆಯ ಪ್ರಕಾರ ಈ ಕಾಲೇಜುಗಳಿಗೆ ಉನ್ನತ ಶಿಕ್ಷಣ ಇಲಾಖೆಯು ಅನುದಾನ ನಿಲ್ಲಿಬೇಕಿತ್ತು' ಎಂದು ಸಿಎಜಿ ವಿವರಿಸಿದೆ.

'ಅದಾದ ಬಳಿಕವೂ ಎರಡೂ ಕಾಲೇಜುಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಅವಧಿಯಲ್ಲಿ ಎಸ್‌ಜೆಸಿಇಗೆ ಒಟ್ಟು ₹95.93 ಕೋಟಿ, ಬಿವಿಬಿಸಿಇಟಿಗೆ ಒಟ್ಟು ₹50.30 ಕೋಟಿ ಬಿಡುಗಡೆ ಮಾಡಲಾಗಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ₹146.23 ಕೋಟಿ ನಷ್ಟವಾಗಿದೆ' ಎಂದಿದೆ.

ಈ ಬಗ್ಗೆ ಸ್ಪಷ್ಟನೆ ಕೇಳಿದಾಗ ಉನ್ನತ ಶಿಕ್ಷಣ ಇಲಾಖೆ, '2022–23ನೇ ಸಾಲಿನ ಬ್ಯಾಚಿನ ವಿದ್ಯಾರ್ಥಿಗಳ ಕೋರ್ಸ್ ಮುಗಿಯುವವರೆಗೂ ಅನುದಾನ ಮುಂದುವರೆಸುತ್ತೇವೆ' ಎಂದು ತಿಳಿಸಿರುತ್ತದೆ. ಆದರೆ ಇದನ್ನು ಒಪ್ಪಿಕೊಳ್ಳಲಾಗದು. ಸರ್ಕಾರದ ಉತ್ತರ ಸ್ವೀಕಾರಾರ್ಹವಲ್ಲ. ಖಾಸಗಿ ವಿಶ್ವವಿದ್ಯಾಲಯಗಳ ಭಾಗವಾದ ಕಾಲೇಜುಗಳಿಗೆ ಸರ್ಕಾರ ಅನುದಾನ ನೀಡಬಾರದು' ಎಂದು ಸಿಎಜಿ ಹೇಳಿದೆ.

ವಾರ್ಷಿಕ ಅನುದಾನ ವಿವರ (₹ಕೋಟಿಗಳಲ್ಲಿ)



ಚಿಟಿಕೆ ಸುದ್ದಿ

ಕೃಷಿಹೊಂಡದಲ್ಲಿ ಮುಳುಗಿ ನಾಲ್ವರು ಮಕ್ಕಳು ಸಾವು

ಕೆಂಭಾವಿ (ಯಾದಗಿರಿ ಜಿಲ್ಲೆ): ಇಲ್ಲಿಗೆ ಸಮೀಪದ ನಗನೂರ ಗ್ರಾಮದ ಹೊಲದಲ್ಲಿ ನಿರ್ಮಿಸಿದ ಕೃಷಿ ಹೊಂಡದಲ್ಲಿ ಮುಳುಗಿ ನಾಲ್ವರು ಮಕ್ಕಳು ಭಾನುವಾರ ಮೃತಪಟ್ಟಿದ್ದಾರೆ.

ನಗನೂರ ಗ್ರಾಮದ ಸುರಪುರ ರಸ್ತೆಯ ಜಮೀನೊಂದರಲ್ಲಿ ಈ ದುರ್ಘಟನೆ ನಡೆದಿದ್ದು, ಗ್ರಾಮದ ರಾಜೀವ್ ಬಾಲಪ್ಪ ಎಂಬುವವರ ಮಕ್ಕಳಾದ ಹನುಮೇಶ್ (7), ಶರತ್ (6), ಮಲ್ಲಪ್ಪ ಬಾಲಪ್ಪ ಪುತ್ರ ಕಿರಣ್ (6) ಹಾಗೂ ರಾಜೀವ್ ಸಹೋದರಿ ಗುಬ್ಬಮ್ಮ ಬಸಪ್ಪ ಎಂಬುವವರ ಪುತ್ರಿ ಬಸಮ್ಮ (11) ಮೃತರು.

ಶಾಲೆಗೆ ಬೇಸಿಗೆ ರಜೆ ಇದ್ದುದರಿಂದ ಗುಬ್ಬಮ್ಮ ಅವರು ಮಗಳನ್ನು ಕರೆದುಕೊಂಡು ತವರು ಮನೆಗೆ ಬಂದಿದ್ದರು. ಭಾನುವಾರ ಬೆಳಿಗ್ಗೆ ನಾಲ್ವರು ಮಕ್ಕಳು ಗ್ರಾಮದ ಸಮೀಪದ ಜಮೀನಿಗೆ ತೆರಳಿದ್ದರು. ನಾಲ್ವರೂ ಕೃಷಿ ಹೊಂಡದಲ್ಲಿನ ನೀರಿಗೆ ಒಬ್ಬರಾದ ಬಳಿಕ ಒಬ್ಬರು ಇಳಿದರು. ಈಜಲು ಬಾರದೆ ಹೂಳು ತುಂಬಿದ ಹೊಂಡದ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರಬಹುದು ಎಂದು ಸ್ಥಳೀಯರು ಹೇಳಿದ್ದಾರೆ.

'ಮೋದಿ ಸರೆಂಡರ್ ಅಲ್ಲ, ದುರಂಧರ್'

ಕಲಬುರಗಿ: 'ಪ್ರಧಾನಿ ನರೇಂದ್ರ ಮೋದಿ ಯಾರಿಗೂ ತಲೆ ಬಗ್ಗಿಸಿಲ್ಲ. ಅವರದ್ದು ಶರಣಾಗತಿಯಲ್ಲ; ಅವರು ಸಂಯಮ ವಹಿಸಿದ್ದಾರೆ. ಹೀಗಾಗಿ ನರೇಂದ್ರ ಈಸ್ ನಾಟ್ ಸರೆಂಡರ್; ನರೇಂದ್ರ ಈಸ್ ದುರಂಧರ್' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಬಣ್ಣಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇರಾನ್ ಜೊತೆಗಿನ ಯುದ್ಧದಲ್ಲಿ ಇಸ್ರೇಲ್‌ನ ವಿರೋಧ ಪಕ್ಷವೂ ಆಡಳಿತ ಪಕ್ಷಕ್ಕೆ ಬೆಂಬಲವಾಗಿ ನಿಂತಿದೆ. ಆದರೆ, ನಮ್ಮ ದೇಶದಲ್ಲಿ ಯುದ್ಧವೇನಾದರೂ ಸಂಭವಿಸಿದರೆ, ಕಾಂಗ್ರೆಸ್ ಪಕ್ಷವು ವಿರೋಧಿಗಳೊಂದಿಗೆ ಕೈಜೋಡಿಸಿದರೂ ಆಶ್ಚರ್ಯವಿಲ್ಲ' ಎಂದು ಟೀಕಿಸಿದರು.

'ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿನ ಬಿಕ್ಕಟ್ಟಿನ ಹೊರತಾಗಿಯೂ ಹೊರ್ಮುಜ್ ಜಲಸಂಧಿ ಭಾರತದ ಹಡುಗುಗಳಿಗೆ ಮುಕ್ತವಾಗಿದೆ. ಇದು ವಿದೇಶಗಳೊಂದಿಗೆ ಭಾರತದ ಸೌಹಾರ್ದ ಸಂಬಂಧಕ್ಕೆ ನಿದರ್ಶನ. ಅದಾಗ್ಯೂ, ಕಾಂಗ್ರೆಸ್ ಪ್ರಧಾನಿಯನ್ನು ನರೇಂದ್ರ ಸರೆಂಡರ್ ಎಂದು ಟೀಕಿಸುತ್ತಿದೆ' ಎಂದರು.

'ಕಾಂಗ್ರೆಸ್‌ನಿಂದ ಅಲ್ಪಸಂಖ್ಯಾತರ ದುರ್ಬಳಕೆ'

ದಾವಣಗೆರೆ: 'ಚುನಾವಣೆಯಲ್ಲಿ ಅಲ್ಪಸಂಖ್ಯಾತರನ್ನು ಮತಬ್ಯಾಂಕ್ ರೀತಿ ಬಳಸಿಕೊಳ್ಳುವ ಕಾಂಗ್ರೆಸ್, ಇಡೀ ಸಮುದಾಯವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಈ ಸತ್ಯಾಂಶ ಅಲ್ಪಸಂಖ್ಯಾತರಿಗೂ ಅರ್ಥವಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು.



ಬಿ.ವೈ. ವಿಜಯೇಂದ್ರ

'ಕಾಂಗ್ರೆಸ್, ಅಭಿವೃದ್ಧಿಯ ಜೊತೆಗೆ ಅಲ್ಪಸಂಖ್ಯಾತರನ್ನೂ ಮರೆತಿದೆ. ಇದರ ಪರಿಣಾಮ ಉಪಚುನಾವಣಾ ಕಣದಲ್ಲಿ ಗೊತ್ತಾಗುತ್ತಿದೆ. ಈಗ ಎಚ್ಚೆತ್ತುಕೊಂಡಿರುವ ಕಾಂಗ್ರೆಸ್ ಮುಖಂಡರು ಮುಸ್ಲಿಮರ ಮನವೊಲಿಸುವ ಪ್ರಯತ್ನಕ್ಕೆ ಮುಂದಾಗಿದ್ದಾರೆ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

ಚುನಾವಣೆ ಬಳಿಕ ಮಣಿಯುವ ಸಿಎಂ: ಪಂಚರಾಜ್ಯ ಚುನಾವಣೆಯ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಹೈಕಮಾಂಡ್‌ಗೆ ಮಣಿಯಲಿದ್ದಾರೆ. ಈ ಚುನಾವಣೆ ಮುಗಿದ ವಾರದಲ್ಲೇ ರಾಜ್ಯ ರಾಜಕಾರಣದಲ್ಲಿ ಬದಲಾವಣೆ ಗೋಚರಿಸಲಿದೆ ಎಂದರು.

ಹುಲಿ ಉಗುರು ಸಾಗಣೆ: ಬಂಧನ

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ಕಾರಿನಲ್ಲಿ 2 ಹುಲಿ ಉಗುರುಗಳನ್ನು ಸಾಗಣೆ ಮಾಡುತ್ತಿದ್ದ ಆರೋಪದ ಮೇಲೆ ತಾಲ್ಲೂಕಿನ ಜಾಗೇರಿ ಗ್ರಾಮದ ಚಂದ್ರು ಎನ್ನುವವರನ್ನು ಅಪರಾಧ ಪತ್ತೆ ದಳ ಬಂಧಿಸಿದೆ. ಉಗುರುಗಳನ್ನು ಬೆಂಗಳೂರಿಗೆ ಸಾಗಿಸುತ್ತಿರುವ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆದಿದೆ.

ಪ್ರಿಯಾಂಕ್ – ಕೋಟ ಪತ್ರ ಸಮರ

ಬೆಂಗಳೂರು: ನರೇಗಾ ರದ್ದತಿ ಮತ್ತು ವಿಬಿ ಜಿರಾಮ್‌ಜಿ ಜಾರಿಯ ವಿರುದ್ಧ ಕಾನೂನು ಹೋರಾಟಕ್ಕೆ ರಾಜ್ಯವು ತಯಾರಿ ನಡೆಸಿದ್ದು, ತಾವು ಬೆಂಬಲ ನೀಡಬೇಕು ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಗ್ರಾಮಪಂಚಾಯಿತಿ ಸದಸ್ಯರಿಗೆ ಪತ್ರ ಬರೆದಿದ್ದರು. ಈ ಪತ್ರವನ್ನು ಖಂಡಿಸಿ ಗ್ರಾಮ ಪಂಚಾಯಿತಿ ಸದಸ್ಯರಿಗೆ ಪತ್ರ ಬರೆದಿರುವ ಬಿಜೆಪಿ ಸಂಸದ ಕೋಟ ಶ್ರೀನಿವಾಸ ಪೂಜಾರಿ, ವಿಬಿ ಜಿರಾಮ್‌ಜಿಯನ್ನು ಬೆಂಬಲಿಸಿ ಎಂದಿದ್ದಾರೆ.

'ಅಧಿಕಾರ ಕೇಂದ್ರೀಕರಣ'

- ಕೇಂದ್ರ ಸರ್ಕಾರವು ಗುರುತಿಸುವ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಮತ್ತು ಕೇಂದ್ರ ಸರ್ಕಾರವು ಅಧಿಸೂಚಿಸುವ ಸ್ವರೂಪದ ಕಾಮಗಾರಿಗಳನ್ನಷ್ಟೇ ವಿಬಿ ಜಿರಾಮ್‌ಜಿ ಅಡಿ ಕೈಗೊಳ್ಳಬಹುದಾಗಿದೆ. ಗ್ರಾಮ ಪಂಚಾಯಿತಿಗಳ ಅಧಿಕಾರವನ್ನು ಇದು ಕಸಿದುಕೊಳ್ಳುತ್ತದೆ. ಕೇಂದ್ರ ಸರ್ಕಾರವು ರೂಪಿಸುವ ಮಾಸ್ಟರ್ ಪ್ಲ್ಯಾನ್ ಪ್ರಕಾರವೇ ಅವು ಕಾರ್ಯನಿರ್ವಹಿಸಬೇಕಾಗುತ್ತದೆ
- ನೂತನ ಯೋಜನೆ ಅಡಿ ಅನುದಾನ ಹಂಚಿಕೆ ಮತ್ತು ಬಿಡುಗಡೆಗೆ ಸ್ಪಷ್ಟ ನಿಯಮಗಳು ಇಲ್ಲ. ಕೇಂದ್ರ ನಿಗದಿ ಮಾಡಿದಷ್ಟೇ ಅನುದಾನ ಬಿಡುಗಡೆಯಾಗುತ್ತದೆ. ಆ ಮಿತಿಯನ್ನು ಮೀರಿ ನಡೆಸಿದ ಕಾಮಗಾರಿಗಳಿಗೆ ಕೇಂದ್ರ ಹಣ ನೀಡುವುದಿಲ್ಲ
- ನರೇಗಾ ಅಡಿ ವರ್ಷಪೂರ್ತಿ ಉದ್ಯೋಗ ಸೃಷ್ಟಿಗೆ ಅವಕಾಶವಿತ್ತು. ಆದರೆ ವಿಬಿ ಜಿರಾಮ್‌ಜಿ ಅಡಿಯಲ್ಲಿ ಕೇಂದ್ರವು ಗೊತ್ತುಪಡಿಸಿದ 60 ದಿನಗಳಲ್ಲಿ ಉದ್ಯೋಗ ಸೃಷ್ಟಿ ಸಾಧ್ಯವಿಲ್ಲ. ಇದು ಉದ್ಯೋಗ ಕತ್ತರಿ ಯೋಜನೆಯೇ ವಿನಃ ಖಾತರಿ ಯೋಜನೆಯಲ್ಲ. ನರೇಗಾದಲ್ಲಿ ಗುತ್ತಿಗೆದಾರರ ಪ್ರವೇಶಕ್ಕೆ ಇದ್ದ ನಿರ್ಬಂಧವನ್ನು ನೂತನ ಯೋಜನೆಯು ತೆಗೆದುಹಾಕಿದೆ
- ನರೇಗಾದಲ್ಲಿ ಕೂಲಿಯ ಶೇ 100ರಷ್ಟು ವೆಚ್ಚ ಮತ್ತು ಸಾಮಗ್ರಿಯ ಶೇ 75ರಷ್ಟು ವೆಚ್ಚವನ್ನು ಕೇಂದ್ರವೇ ಭರಿಸುತ್ತಿತ್ತು. ವಿಬಿ ಜಿರಾಮ್‌ಜಿಯಲ್ಲಿ ಒಟ್ಟು ವೆಚ್ಚದ ಶೇ 40ರಷ್ಟನ್ನು ರಾಜ್ಯ ಸರ್ಕಾರವೇ ಭರಿಸಬೇಕಿದ್ದು, ಕರ್ನಾಟಕವೂ ಸೇರಿದಂತೆ ಎಲ್ಲ ರಾಜ್ಯಗಳಿಗೆ ಹೊರೆಯಾಗಲಿದೆ

ಪ್ರಿಯಾಂಕ್ ಖರ್ಗೆ

'ಭ್ರಷ್ಟಾಚಾರಕ್ಕೆ ಅವಕಾಶವಿಲ್ಲ'

- ಗ್ರಾಮ ಪಂಚಾಯಿತಿಗಳು ಮತ್ತು ಗ್ರಾಮ ಸಭೆಗಳು ಮನವಿ ಸಲ್ಲಿಸುವಂತಹ ಕಾಮಗಾರಿಗಳನ್ನಷ್ಟೇ ಕೇಂದ್ರ ಸರ್ಕಾರವು ವಿಬಿ ಜಿರಾಮ್‌ಜಿ ಅಡಿ ಆಯ್ಕೆಗೆ ಪರಿಗಣಿಸುತ್ತದೆ. ಬೇಡಿಕೆ ಆಧರಿಸಿಯೇ ಕಾಮಗಾರಿ ಮಂಜೂರಾಗುತ್ತದೆ. ಸುಳ್ಳು ದಾಖಲೆ ತೋರಿಸಿ ಬಿಲ್ ಪಾವತಿ ಮಾಡಿಕೊಳ್ಳಲು ಅವಕಾಶವಿಲ್ಲ. ಗ್ರಾಮ ಪಂಚಾಯಿತಿಗಳ ಅಧಿಕಾರ ಕಸಿದುಕೊಳ್ಳಲಾಗುತ್ತಿದೆ ಎಂಬುದು ಸುಳ್ಳು
- ನರೇಗಾದಲ್ಲಿ ದೇಶದಾದ್ಯಂತ ₹22,000 ಕೋಟಿ ಮತ್ತು ಕರ್ನಾಟಕದಲ್ಲಿ ₹699 ಕೋಟಿಯಷ್ಟು ಅಕ್ರಮ ನಡೆದಿತ್ತು. ವಿಬಿ ಜಿರಾಮ್‌ಜಿಯಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವಿರುವುದಿಲ್ಲ. ನರೇಗಾದಲ್ಲಿ ಗುತ್ತಿಗೆದಾರರು ಅಕ್ರಮವಾಗಿ ನುಸುಳುತ್ತಿದ್ದರು. ಈಗ ಅಂಥದ್ದಕ್ಕೆ ಅವಕಾಶವಿಲ್ಲ
- ನರೇಗಾದಲ್ಲಿ 100 ದಿನಗಳ ಕೆಲಸವಷ್ಟೇ ಸಿಗುತ್ತಿತ್ತು. ಅದನ್ನು ಈಗ 125 ದಿನಗಳಿಗೆ ಹೆಚ್ಚಿಸಲಾಗಿದೆ. ಎಲ್ಲಿ ಕೆಲಸದ ಅಗತ್ಯವಿದೆಯೋ ಅಲ್ಲಿ ಕೆಲಸ ದೊರೆಯಲಿದೆ. ಕಾರ್ಮಿಕರಿಗೆ ಏಳು ದಿನಗಳೊಳಗೇ ವೇತನ ಪಾವತಿ ಆಗಲಿದೆ
- ಕೇಂದ್ರ ಸರ್ಕಾರವು ಶೇ 100ರಷ್ಟು ವೆಚ್ಚ ವೇತನ ವೆಚ್ಚ ಭರಿಸುತ್ತಿದ್ದಾಗ ರಾಜ್ಯ ಸರ್ಕಾರಗಳು ₹22,000 ಕೋಟಿಯಷ್ಟು ಅಕ್ರಮ ನಡೆಸಿವೆ. ಈಗ ತುಸು ಹೆಚ್ಚು ಹಣ ವೆಚ್ಚ ಮಾಡಿದರೆ ರಾಜ್ಯ ಸರ್ಕಾರಕ್ಕೆ ನಷ್ಟ ಇಲ್ಲ

ಕೋಟ ಶ್ರೀನಿವಾಸ ಪೂಜಾರಿ

ಪ್ರಸಾದ ಸೇವನೆ: 400ಕ್ಕೂ ಅಧಿಕ ಜನರ ಆರೋಗ್ಯ ಏರುಪೇರು
100ಕ್ಕೂ ಹೆಚ್ಚು ಮಂದಿ ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಬೆಟ್ಟೇನಹಳ್ಳಿ (ದೇವನಹಳ್ಳಿ): ತಾಲ್ಲೂಕಿನ ಕುಂದಾಣ ಹೋಬಳಿಯ ಬೆಟ್ಟೇನಹಳ್ಳಿಯಲ್ಲಿ ರಾಮನವಮಿ ಪ್ರಸಾದ ಸೇವಿಸಿದ 400ಕ್ಕೂ ಹೆಚ್ಚು ಗ್ರಾಮಸ್ಥರ ಆರೋಗ್ಯ ಏರುಪೇರಾಗಿದೆ. ಅಸ್ವಸ್ಥರಾದ ನೂರಕ್ಕೂ ಹೆಚ್ಚು ಗ್ರಾಮಸ್ಥರನ್ನು ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ರಾಮನವಮಿ ಪ್ರಯುಕ್ತ ಶನಿವಾರ ಅನ್ನ ಪ್ರಸಾದ ವಿತರಿಸಲಾಗಿತ್ತು. ಪ್ರಸಾದ ಸೇವಿಸಿದ ಬಳಿಕ ರಾತ್ರಿಯೇ ಕೆಲವರಿಗೆ ಹೊಟ್ಟೆನೋವು, ವಾಂತಿ, ಬೇಧಿ ಶುರುವಾಗಿ ಸುಸ್ತಾಗಿದ್ದಾರೆ.

ಹಲವರನ್ನು ಸಮೀಪದ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಗಂಭೀರವಾಗಿ ಅಸ್ವಸ್ಥರಾದವರನ್ನು ಆಂಬುಲೆನ್ಸ್‌ನಲ್ಲಿ ಬೇರೆ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ಗ್ರಾಮದಲ್ಲಿ ಬೀಡುಬಿಟ್ಟಿರುವ ಆರೋಗ್ಯ ಸಿಬ್ಬಂದಿ ಗ್ರಾಮಸ್ಥರ ಆರೋಗ್ಯ ತಪಾಸಣೆ ನಡೆಸುತ್ತಿದ್ದಾರೆ. ಅನ್ನಪ್ರಸಾದ ಹಾಗೂ ನೀರಿನ ಮಾದರಿಗಳನ್ನು ಪರೀಕ್ಷೆಗೆ ಕಳುಹಿಸಿದ್ದು ವರದಿ ಶೀಘ್ರ ಲಭ್ಯವಾಗಲಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಲಕ್ಕಾ ಕೃಷ್ಣರೆಡ್ಡಿ ತಿಳಿಸಿದ್ದಾರೆ.

ಬೆಟ್ಟೇನಹಳ್ಳಿಯಲ್ಲಿ ರಾಮನವಮಿ ಪ್ರಸಾದ ಸೇವಿಸಿ ಅಸ್ವಸ್ಥಗೊಂಡು ಆಸ್ಪತ್ರೆಗೆ ದಾಖಲಾಗಿದ್ದವರ ಆರೋಗ್ಯ ವಿಚಾರಿಸಿದ ಸಚಿವ ಕೆ.ಎಚ್. ಮುನಿಯಪ್ಪ

ಛಾಯಾಚಿತ್ರ ಸ್ಪರ್ಧೆ: 'ಪ್ರಜಾವಾಣಿ'ಯ ಭರತ್‌ಗೆ ಪ್ರಶಸ್ತಿ

ಬೆಂಗಳೂರು: ಬೆಂಗಳೂರು ಫೋಟೋಗ್ರಾಫಿಕ್ ಕ್ಲಬ್ ಆಯೋಜಿಸಿದ್ದ 'ಕರ್ನಾಟಕದ ಜಾತ್ರೆ ಮತ್ತು ಉತ್ಸವಗಳು' ಕುರಿತ ಛಾಯಾಚಿತ್ರ ಸ್ಪರ್ಧೆಯಲ್ಲಿ 'ಪ್ರಜಾವಾಣಿ'ಯ ಭರತ್ ಕಂದಕೂರ ಸೇರಿದಂತೆ ಎಂಟು ಮಂದಿಗೆ ಬಹುಮಾನ ದೊರೆತಿದೆ.

ದೊಡ್ಡಬಳ್ಳಾಪುರದ ಸುಧೀರ್ ಭಜನೆ ಹಟ್ಟಿ ಅವರ ಕೊಪ್ಪಳ ಗವಿ ಸಿದ್ದೇಶ್ವರ ಜಾತ್ರೆ ಚಿತ್ರ (ಪ್ರಥಮ ಸ್ಥಾನ), ದೊಡ್ಡಬಳ್ಳಾಪುರದ ಬಿ.ಎನ್.ಉಮಾಶಂಕರ್ ಅವರ ಗೋಕಾಕದ ಭಂಡಾರ ಜಾತ್ರೆ ಚಿತ್ರ (ದ್ವಿತೀಯ ಸ್ಥಾನ), 'ಪ್ರಜಾವಾಣಿ'ಯ ಕೊಪ್ಪಳ ಛಾಯಾಗ್ರಾಹಕ ಭರತ್ ಕಂದಕೂರ ಅವರ ಅಂಜನಾದ್ರಿ ಬೆಟ್ಟದ ಹನುಮ ಮಾಲೆ ಚಿತ್ರ (ತೃತೀಯ ಸ್ಥಾನ) ಪಡೆದಿವೆ.

ಮುಂದಿನ ವರ್ಷದ ಛಾಯಾಚಿತ್ರ ಸ್ಪರ್ಧೆಗೆ 'ಕನಾಟಕದ ಹಬ್ಬ ಮತ್ತು ಆಚರಣೆಗಳು' ಎನ್ನುವ ವಿಷಯ ಆಯ್ಕೆ ಮಾಡಲಾಗಿದ್ದು, ಛಾಯಾಗ್ರಾಹಕರು ಭಾಗಿಯಾಗಬಹುದು ಎಂದು ಕ್ಲಬ್ ಅಧ್ಯಕ್ಷ ಟಿ.ಕೆಂಪಣ್ಣ ತಿಳಿಸಿದ್ದಾರೆ.

ಗೌರವ ಡಾಕ್ಟರೇಟ್ ಪ್ರದಾನ

ಮಂಗಳೂರಿನ ಶ್ರೀನಿವಾಸ ವಿಶ್ವವಿದ್ಯಾಲಯದಲ್ಲಿ ಶನಿವಾರ ನಡೆದ ಎಂಟನೇ ಘಟಿಕೋತ್ಸವದಲ್ಲಿ ಮಣಿಪಾಲ್ ಮೀಡಿಯಾ ನೆಟ್‌ವರ್ಕ್ ಲಿಮಿಟೆಡ್‌ನ ಕಾರ್ಯನಿರ್ವಾಹಕ ಅಧ್ಯಕ್ಷ ಸತೀಶ್ ಯು.ಪೈ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ವಿಶ್ವವಿದ್ಯಾಲಯದ ಕುಲಪತಿ ಕೆ. ಸತ್ಯನಾರಾಯಣ ರೆಡ್ಡಿ, ವಿಶ್ವವಿದ್ಯಾಲಯದ ವಿಶ್ವಸ್ಥ ಮಂಡಳಿ ಸದಸ್ಯೆ ಎ. ಮಿತ್ರಾ ಎಸ್. ರಾವ್, ಕರ್ಣಾಟಕ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಘವೇಂದ್ರ ಶ್ರೀನಿವಾಸ್ ಭಟ್, ತರಂಗ ವಾರಪತ್ರಿಕೆಯ ವ್ಯವಸ್ಥಾಪಕ ಸಂಪಾದಕಿ ಸಂಧ್ಯಾ ಎಸ್. ಪೈ, ವಿಶ್ವವಿದ್ಯಾಲಯದ ಕುಲಾಧಿಪತಿ. ಶ್ರೀನಿವಾಸ ರಾವ್, ವಿಶ್ವವಿದ್ಯಾಲಯದ ವಿಶ್ವಸ್ಥ ಮಂಡಳಿ ಸದಸ್ಯರಾದ ಇಶಾನ್ ರಾವ್ ಹಾಗೂ ವಿಜಯಲಕ್ಷ್ಮೀ ಆರ್. ರಾವ್ ಭಾಗವಹಿಸಿದ್ದರು

ವಿಟಿಯು ಕಡೆ ವಿದೇಶಿ ಕಾಲೇಜುಗಳ ನಡೆ

ಒಂದನೇ ಪುಟದಿಂದ...

ವಿದ್ಯಾರ್ಥಿಗಳಿಗೆ ಈಗಿನ ಅವಶ್ಯಕ್ಕೆ ತಕ್ಕಂತೆ ಪಠ್ಯಕ್ರಮ ಪರಿಷ್ಕರಿಸಲಾಗಿದೆ. ಕೃತಕ ಬುದ್ಧಿಮತ್ತೆಯನ್ನು ಪಠ್ಯಕ್ರಮದಲ್ಲಿ ಅಳವಡಿಸಿಕೊಂಡಿದ್ದು ವಿದ್ಯಾರ್ಥಿಗಳಿಗೆ ಕೌಶಲ ಶಿಕ್ಷಣ ನೀಡಲು ಹಲವು ಕಂಪನಿಗಳ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಹೀಗಾಗಿ, ವಿದೇಶದಲ್ಲಿರುವ ಕಾಲೇಜುಗಳು ಮಾನ್ಯತೆಗಾಗಿ ಅರ್ಜಿ ಸಲ್ಲಿಸುತ್ತಿವೆ.

ವಿಟಿಯು ವ್ಯಾಪ್ತಿಯಲ್ಲಿ 220 ಎಂಜಿನಿಯರಿಂಗ್ ಕಾಲೇಜುಗಳಿವೆ. ಈ ಎಲ್ಲ ಕಾಲೇಜುಗಳು ರಾಜ್ಯದ ಒಳಗೆ ಇದ್ದು, ಅಂದಾಜು ಮೂರು ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ದೇಶದಲ್ಲಿಯೇ ಅತಿ ಹೆಚ್ಚು ಎಂಜಿನಿಯರಿಂಗ್ ಕಾಲೇಜುಗಳನ್ನು ಹೊಂದಿರುವ ವಿಶ್ವವಿದ್ಯಾಲಯವಾಗಿದೆ.

'ನವೋದ್ಯಮಿ'ಗೆ ರಜೆ ಸೌಲಭ್ಯ: ವಿಟಿಯು ವ್ಯಾಪ್ತಿಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಮೊದಲ ವರ್ಷದಲ್ಲೇ ನವೋದ್ಯಮಗಳನ್ನು ಆರಂಭಿಸಿದರೆ, ಅಂತಹವರಿಗೆ ಎರಡನೇ ವರ್ಷದಲ್ಲಿ ಕಾಲೇಜಿಗೆ ಬರುವುದಕ್ಕೆ ವಿನಾಯಿತಿ ದೊರೆಯಲಿದೆ.

'ಮೊದಲ ವರ್ಷ ಪೂರ್ಣಗೊಂಡ ನಂತರ ನವೋದ್ಯಮದ ಯೋಜನೆ ಯಶಸ್ವಿಗೊಳಿಸಲು ವಿದ್ಯಾರ್ಥಿಗಳಿಗೆ ಒಂದು ವರ್ಷ ಅವಕಾಶ ನೀಡಲಾಗುತ್ತದೆ. ಎರಡನೇ ವರ್ಷ ಕಾಲೇಜಿಗೆ ಬರಬಹುದು. ಮುಂದಿನ ಶೈಕ್ಷಣಿಕ ವರ್ಷದಿಂದ ಇದಕ್ಕೆ ಅವಕಾಶ ಕಲ್ಪಿಸಲಾಗುವುದು' ಎಂದು ವಿದ್ಯಾಶಂಕರ್ ತಿಳಿಸಿದರು.

ಸ್ತ್ರೀ ನಾವೀನ್ಯತೆ ಯೋಜನೆ

ವಿಶ್ವೇಶ್ವರಯ್ಯ ಸಂಶೋಧನಾ ಮತ್ತು ನಾವೀನ್ಯತೆ ಕೇಂದ್ರದ (ವಿಆರ್‌ಐಎಫ್) ಸಂಯುಕ್ತ ಆಶ್ರಯದಲ್ಲಿ ಮಹಿಳಾ ಉದ್ಯಮಿಗಳಿಗೆ ಉತ್ತೇಜನ ನೀಡಲು ವಿಟಿಯು 'ಸ್ತ್ರೀ ನಾವೀನ್ಯತೆ' ಎಂಬ ಹೊಸ ಯೋಜನೆ ಜಾರಿಗೊಳಿಸಿದೆ.

ಈ ಯೋಜನೆಗೆ ವಿಪ್ರೊ, ಜಾನ್ ಎಐ, ಯುಎನ್ ವಿಮೆನ್, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಸಂಸ್ಥೆಗಳು ಸಹಕಾರ ನೀಡಿವೆ. ವಿಟಿಯು ವ್ಯಾಪ್ತಿಯ ಪ್ರತಿ ಕಾಲೇಜಿನಿಂದ 80 ವಿದ್ಯಾರ್ಥಿನಿಯರು ಈ ಯೋಜನೆಗೆ ನೋಂದಾಯಿಸಿ ಕೊಳ್ಳಬಹುದು. ಅಂತಿಮವಾಗಿ 100 ವಿದ್ಯಾರ್ಥಿನಿಯರನ್ನು ಈ ಯೋಜನೆಗೆ ಆಯ್ಕೆ ಮಾಡಲಾಗುತ್ತದೆ. ವಿದ್ಯಾರ್ಥಿನಿಯರು ರೂಪಿಸಿರುವ ಮಾದರಿಗಳಿಗೆ ಆರ್ಥಿಕ ನೆರವು ನೀಡುವ ಮೂಲಕ ಅವರ ಯೋಜನೆಗಳನ್ನು ದೊಡ್ಡಮಟ್ಟದಲ್ಲಿ ಅನುಷ್ಠಾನಕ್ಕೆ ತರಲು ವಿಟಿಯು ವೇದಿಕೆ ಒದಗಿಸಲಿದೆ.

'ವಿದ್ಯಾರ್ಥಿನಿಯರಿಗೆ ಮೆಂಟರ್‌ಗಳ ವ್ಯವಸ್ಥೆ ಮಾಡುತ್ತೇವೆ. ಗ್ರಾಮೀಣ ವಿದ್ಯಾರ್ಥಿನಿಯರಿಗೆ ಆದ್ಯತೆ ನೀಡಲಾಗುವುದು' ಎಂದು ವಿದ್ಯಾಶಂಕರ್ ತಿಳಿಸಿದರು.

ವರದಕ್ಷಿಣೆ ಕಿರುಕುಳ: ಅತ್ತೆ–ಮಾವ, ನಾದಿನಿ ನಿರಾಳ
ನಿರಾಧಾರ ಕ್ರೌರ್ಯದ ನೆಪ ಸಲ್ಲ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮದುವೆಗೂ ಮೊದಲಿನ ಮಾತುಕತೆಯಲ್ಲಿ, ವರದಕ್ಷಿಣೆ ಹಾಗೂ ಮದುವೆಯ ಖರ್ಚುವೆಚ್ಚಗಳಿಗೆ ಸಂಬಂಧಿಸಿದ ಅಂಶಗಳನ್ನೇ ಮುಂದಿಟ್ಟುಕೊಂಡು ಮದುವೆಯ ನಂತರ ಅತ್ತೆ–ಮಾವ, ನಾದಿನಿ 'ಕ್ರೌರ್ಯ' ಎಸಗಿದ್ದಾರೆ ಎಂಬ ನಿರಾಧಾರ ಆರೋಪಗಳನ್ನು ವರದಕ್ಷಿಣೆ ಕಿರುಕುಳವೆಂದು ವ್ಯಾಖ್ಯಾನಿಸಲು ಆಗದು' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ತೀರ್ಪು ನೀಡಿದೆ.

'ನಮ್ಮ ವಿರುದ್ಧ ಬೆಂಗಳೂರಿನ 24ನೇ ಹೆಚ್ಚುವರಿ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿರುವ ವಿಚಾರಣೆ ರದ್ದುಪಡಿಸಬೇಕು' ಎಂದು ಕೋರಿ ಅತ್ತೆ–ಮಾವ ಮತ್ತು ನಾದಿನಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ. ಅರ್ಜಿದಾರರ ವಿರುದ್ಧದ ವಿಚಾರಣೆ ರದ್ದುಗೊಳಿಸಿದೆ.

'ಹಾಲಿ ಪ್ರಕರಣದ ದೂರಿನಲ್ಲಿರುವ ಅಂಶಗಳು, ಮದುವೆ ಸಮಾರಂಭಗಳಲ್ಲಿ ಮಾಡಿದ ಖರ್ಚಿನ ಬಗ್ಗೆ ಮಾತ್ರವೇ ವಿವರಿಸುತ್ತವೆ. ಇದರ ತಳಹದಿಯಲ್ಲಿ ಮದುವೆ ನಂತರ ಗಂಡನ ಕುಟುಂಬದ ಪ್ರತಿಯೊಬ್ಬ ಸದಸ್ಯರನ್ನೂ ವರದಕ್ಷಿಣೆ ಬೇಡಿಕೆ ಆರೋಪದಡಿ ಸಿಲುಕಿಸಲು 498ಎ ಕಲಂ ಅನ್ನು ಅಸ್ತ್ರವಾಗಿ ಬಳಸಲಾಗಿದೆ. ಹೀಗಾಗಿ, ಕೆಲವು ಸಾಮಾನ್ಯ ಜಗಳವನ್ನೇ ಊರುಗೋಲಾಗಿಸಿ ಪುರಾವೆಗಳಿಲ್ಲದ ಆರೋಪಗಳಡಿ ಅವರನ್ನು ವಿವೇಚನಾರಹಿತವಾಗಿ ವಿಚಾರಣೆಯ ಅಗ್ನಿಪರೀಕ್ಷೆಗೆ ಒಳಪಡಿಸುವುದು ಸಲ್ಲ' ಎಂದು ಸ್ಪಷ್ಟಪಡಿಸಿದೆ.

'ಹೆಣ್ಣಿನ ಮನೆಯವರು ಮದುವೆಗೆ ₹50 ಲಕ್ಷ ಖರ್ಚು ಮಾಡುತ್ತೇವೆ ಹಾಗೂ ಏನೆಲ್ಲಾ ವರೋಪಚಾರ ಮಾಡುತ್ತೇವೆ ಎಂಬುದರ ಮಾತುಕತೆಗಳೇ ದೂರಿಗೆ ಆಧಾರ. ದೂರುದಾರ ಮಹಿಳೆ (ಪತ್ನಿ) ಗಂಡನ ಮನೆಯಲ್ಲಿ ಕೇವಲ 19 ದಿನಗಳ ಸಂಸಾರ ನಡೆಸಿದ್ದಾರೆ. ಈ ದಿನಗಳಲ್ಲಿ ಎಲ್ಲೂ ಕೂಡಾ ಅರ್ಜಿದಾರರ ವಿರುದ್ಧ ವರದಕ್ಷಿಣೆಗೆ ಬೇಡಿಕೆ ಇರಿಸಿದ ಬಗ್ಗೆ ಸಾಕ್ಷ್ಯಾಧಾರಗಳಿಲ್ಲ' ಎಂಬ ಅಂಶವನ್ನು ನ್ಯಾಯಪೀಠ ಎತ್ತಿಹಿಡಿದಿದೆ.

ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ವಾದ ಮಂಡಿಸಿದ್ದರು.

ಪ್ರಕರಣವೇನು?: ಬೆಂಗಳೂರಿನ ವಧು ಮತ್ತು ಮೈಸೂರಿನ ವರನಿಗೆ 2018ರ ಏಪ್ರಿಲ್ 24ರಂದು ಮೈಸೂರಿನ ಲಲಿತ ಮಹಲ್‌ನಲ್ಲಿ ವಿಜೃಂಭಣೆಯ ಮದುವೆ ನೆರವೇರಿತ್ತು. 2018ರ ಮೇ 9ರಂದು ಪತಿ ಅಮೆರಿಕಕ್ಕೆ ತೆರಳಿದ್ದರು. ಪತ್ನಿ 19 ದಿನಗಳ ಕಾಲ ಅತ್ತೆ–ಮಾವನ ಮನೆಯಲ್ಲಿದ್ದು ನಂತರ ತವರು ಮನೆಗೆ ವಾಪಸಾಗಿದ್ದರು.

'ಗಂಡನ ಮನೆಯಲ್ಲಿದ್ದ ಸಮಯದಲ್ಲಿ ನನಗೆ ಅತ್ತೆ, ಮಾವ ಮತ್ತು ನಾದಿನಿ ವರದಕ್ಷಿಣೆ ಕಿರುಕುಳ ನೀಡಿದ್ದಾರೆ. ನೀನು ದಪ್ಪಗಿದ್ದೀಯ ಎಂದು ಜರಿದಿದ್ದಾರೆ' ಎಂದು ಆರೋಪಿಸಿ ಪತ್ನಿ ಆರು ತಿಂಗಳ ನಂತರ ಬೆಂಗಳೂರಿನ ಬಸವೇಶ್ವರ ನಗರದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ತನಿಖೆ ನಡೆಸಿದ್ದ ಪೊಲೀಸರು, ಭಾರತೀಯ ದಂಡ ಸಂಹಿತೆ ಮತ್ತು ವರದಕ್ಷಿಣೆ ನಿಷೇಧ ಕಾಯ್ದೆಯ ವಿವಿಧ ಕಲಂಗಳ ಅಡಿಯಲ್ಲಿ ಅರ್ಜಿದಾರರ (ಅತ್ತೆ, ಮಾವ ಮತ್ತು ನಾದಿನಿ) ವಿರುದ್ಧ 2021ರ ಆಗಸ್ಟ್ 12ರಂದು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಮೊಳಕೆಯಲ್ಲೇ ಚಿವುಟಬೇಕು...

'ಕ್ರೌರ್ಯ ಎಂಬ ಪದವನ್ನು ನಿರ್ದಿಷ್ಟ ನಿದರ್ಶನಗಳಿಲ್ಲದೆ ಸರಳವಾಗಿ ಸಾಬೀತುಪಡಿಸಲು ಸಾಧ್ಯವಿಲ್ಲ. ಆರೋಪ ಹೊರಿಸುವಾಗ ಕನಿಷ್ಠ ಪಕ್ಷ ಕ್ರೌರ್ಯ ನಡೆದಿದೆ ಎನ್ನುವುದರ ಕರಾರುವಾಕ್ಕುಗಳಿಗೆ, ದಿನಾಂಕ ಅಥವಾ ಘಟನೆಗಳನ್ನು ಕ್ವಚಿತ್ತಾಗಿಯಾದರೂ ದೂರಿನಲ್ಲಿ ವಿವರಿಸಿರಬೇಕು. ಸುಖಾಸುಮ್ಮನೆ ಆರೋಪ ಹೊರಿಸುವ ಪ್ರವೃತ್ತಿಯು ದೂರುದಾರರ ಮೇಲೆ ಅನುಮಾನಕ್ಕೆ ಎಡೆಮಾಡಿಕೊಡುತ್ತದೆ' ಎಂಬ ಪೂರ್ವ ನಿದರ್ಶನಗಳನ್ನು ನ್ಯಾಯಪೀಠ ತೀರ್ಪಿನಲ್ಲಿ ಉಲ್ಲೇಖಿಸಿದೆ.

ಈ ಸಂಬಂಧ ವಿವಿಧ ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್‌ನ ತೀರ್ಪುಗಳನ್ನು ಪ್ರಸ್ತಾಪಿಸಿ, 'ವೈವಾಹಿಕ ವಿವಾದದಿಂದ ಉದ್ಭವಿಸುವ ಕ್ರಿಮಿನಲ್ ಪ್ರಕರಣಗಳಲ್ಲಿ ಮನೆಮಂದಿಯನ್ನೆಲ್ಲಾ ಸಿಲುಕಿಸಿ ಅವರನ್ನು ವಿಚಾರಣೆಯ ಕಟಕಟೆಗೆ ಎಳೆತರುವ ಪ್ರವೃತ್ತಿಯನ್ನು ಮೊಳಕೆಯಲ್ಲೇ ಚಿವುಟ ಹಾಕಬೇಕು' ಎಂಬುದನ್ನು ವಿವರಿಸಿದೆ.

ವರದಕ್ಷಿಣೆ ಕಿರುಕುಳದ ಆರೋಪಗಳಿಗೆ ನಿರ್ದಿಷ್ಟತೆ ಇರಬೇಕು. ದೂರು ಖಚಿತಪಡಿಸಿಕೊಂಡೇ ಪ್ರಾಸಿಕ್ಯೂಷನ್ ಮುಂದುವರಿಯಬೇಕು. ವೃಥಾ ಆರೋಪಗಳಡಿ ವಿಚಾರಣೆ ಕಾನೂನಿನ ದುರುಪಯೋಗ

ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

ಶಿಕ್ಷಣ ಇಲ್ಲದ ಸಚಿವ: ಶೋಭಾ ಕರಂದ್ಲಾಜೆ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಶಾಲಾ ಶಿಕ್ಷಣ ಸಚಿವರಿಗೆ ಶಿಕ್ಷಣವೇ ಇಲ್ಲ. ಹೀಗಾಗಿಯೇ ಹಿಂದಿ ಪರೀಕ್ಷೆಯ ಅಂಕ ಲೆಕ್ಕಕ್ಕಿಲ್ಲ ಎಂಬಂತಹ ಆದೇಶ ಹೊರಡಿಸಿದ್ದಾರೆ. ಈ ನೀತಿ ಸರಿಯಿಲ್ಲ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕಿಡಿಕಾರಿದರು.

ಶೋಭಾ ಕರಂದ್ಲಾಜೆ

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಹಿಂದಿ ಪರೀಕ್ಷೆಯ ಅಂಕ ಲೆಕ್ಕಕ್ಕಿಲ್ಲ ಎಂದಿದ್ದರೆ, ಶಾಲೆ ಆರಂಭವಾಗುತ್ತಿದ್ದಂತೆಯೇ ಹೇಳಬೇಕಿತ್ತು. ಪರೀಕ್ಷೆ ಮಧ್ಯೆ ಹೇಳುತ್ತಾರೆಯೇ? ಮಕ್ಕಳ ಶ್ರಮ ವ್ಯರ್ಥ ವಾಗುವುದಿಲ್ಲವೇ' ಎಂದು ಪ್ರಶ್ನಿಸಿದರು.

'ಶಿಕ್ಷಣವೇ ಇಲ್ಲದ, ಶಿಕ್ಷಣದ ಬಗ್ಗೆ ಏನೂ ಗೊತ್ತಿಲ್ಲದ ಶಿಕ್ಷಣ ಸಚಿವರು ಇಂತಹ ಆದೇಶ ಹೊರಡಿಸುವುದಾದರೆ, ಮುಖ್ಯಮಂತ್ರಿ ಇದನ್ನು ಪರಿಶೀಲಿಸಬೇಕಲ್ಲವೇ? ಇದು ಅತ್ಯಂತ ಹೊಣೆಗೇಡಿ ಸರ್ಕಾರ ಎಂಬುದಕ್ಕೆ ಈ ಆದೇಶವೇ ಸ್ಪಷ್ಟ ನಿದರ್ಶನ' ಎಂದರು.

ರಾಜಮುಡಿ ಕಿರೀಟದಲ್ಲಿ ಕಂಗೊಳಿಸಿದ ಚೆಲುವನಾರಾಯಣಸ್ವಾಮಿ

ಮೇಲುಕೋಟೆ ಪ್ರಹ್ಲಾದ ಪರಿಪಾಲನಾ ಉತ್ಸವ

ಪ್ರಜಾವಾಣಿ ವಾರ್ತೆ

ಮೇಲುಕೋಟೆ (ಮಂಡ್ಯ ಜಿಲ್ಲೆ): ಚೆಲುವನಾರಾಯಣಸ್ವಾಮಿ ವೈರಮುಡಿ ಜಾತ್ರಾ ಮಹೋತ್ಸವದ ಅಂಗವಾಗಿ 5ನೇ ತಿರುನಾಳ್ ಆಶ್ಲೇಷ ನಕ್ಷತ್ರದಂದು ಭಾನುವಾರ ಸಂಜೆ 'ಪ್ರಹ್ಲಾದ ಪರಿಪಾಲನಾ ಉತ್ಸವ' ವೈಭವದಿಂದ ನೆರವೇರಿತು.

ಮಹಾವಿಷ್ಣುವಿನ ನರಸಿಂಹ ಅವತಾರದ ಪ್ರತೀಕವಾಗಿ ಚೆಲುವನಾರಾಯಣನಿಗೆ ಪ್ರಹ್ಲಾದ ಪರಿಪಾಲನಾ ಮಹೋತ್ಸವ ಅರ್ಥಪೂರ್ಣವಾಗಿ ನೆರವೇರಿತು. ಶ್ವೇತ ಛತ್ರಿಗಳ ನಡುವೆ ರಾಜಮುಡಿ ಕಿರೀಟಧಾರಣೆಯೊಂದಿಗೆ ಕಂಗೊಳಿಸಿದ ಸ್ವಾಮಿಯ ಚೆಲುವನ್ನು ಸಾವಿರಾರು ಸಂಖ್ಯೆಯಲ್ಲಿ ನೆರೆದಿದ್ದ ಭಕ್ತರು ಕಣ್ತುಂಬಿಕೊಂಡರು.

ವೈರಮುಡಿ ಕಿರೀಟಧಾರಣಾ ಮಹೋತ್ಸವದ ನಂತರ ಮೈಸೂರಿನ ಅರಸ ರಾಜ ಒಡೆಯರ್ ಅವರು ರಾಜಮುಡಿ ಉತ್ಸವಕ್ಕಾಗಿಯೇ ನಿರ್ಮಿಸಿರುವ ವಾಹನೋತ್ಸವ ಮಂಟಪದಲ್ಲಿ ವೈರಮುಡಿ ಅಲಂಕಾರ ತೆಗೆದು ಸ್ವಾಮಿಗೆ ರಾಜಮುಡಿ ಕಿರೀಟ ಧರಿಸಿ ಉತ್ಸವ ನೆರವೇರಿಸಲಾಯಿತು.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪದ್ಧತಿ ಬದಲಾವಣೆ: ರಾಜ್ಯ ಸರ್ಕಾರದ ವಿರುದ್ಧ ಕಾಗೇರಿ ಕಿಡಿ
'ಶಿಕ್ಷಣ ಇಲಾಖೆಯ ಅವಿವೇಕದ ಪ್ರಯೋಗ'

ಪ್ರಜಾವಾಣಿ ವಾರ್ತೆ

ಶಿರಸಿ (ಉತ್ತರ ಕನ್ನಡ ಜಿಲ್ಲೆ): 'ರಾಜ್ಯ ಶಿಕ್ಷಣ ಇಲಾಖೆಯು ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪದ್ಧತಿಯಲ್ಲಿ ತಂದಿರುವ ಬದಲಾವಣೆಗಳು ದುರದೃಷ್ಟಕರ ಮತ್ತು ವಿದ್ಯಾರ್ಥಿ ವಿರೋಧಿಯಾಗಿವೆ' ಎಂದು ಸಂಸದ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ಖಂಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, 'ದಶಕಗಳಿಂದ ಯಶಸ್ವಿಯಾಗಿ ಜಾರಿಯಲ್ಲಿದ್ದ ತ್ರಿಭಾಷಾ ಸೂತ್ರಕ್ಕೆ ಶಿಕ್ಷಣ ಸಚಿವ ಮಧು ಬಂಗಾರಪ್ಪನವರು ಕೊಡಲಿ ಪೆಟ್ಟು ನೀಡುತ್ತಿದ್ದಾರೆ. ತೃತೀಯ ಭಾಷೆಯ ಅಂಕಗಳನ್ನು ಕೈಬಿಟ್ಟು ಕೇವಲ ಗ್ರೇಡ್ ಪದ್ಧತಿಗೆ ಸೀಮಿತಗೊಳಿಸಿರುವುದು ಶಿಕ್ಷಣ ಕ್ಷೇತ್ರದಲ್ಲಿ ಅರಾಜಕತೆ ಸೃಷ್ಟಿಸಲಿದೆ. ಸಚಿವರ ಈ ಅಪ್ರಬುದ್ಧ ನಿರ್ಧಾರವು ರಾಜ್ಯದ ಶೈಕ್ಷಣಿಕ ಘನತೆಗೆ ಧಕ್ಕೆ ತಂದಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ವಿದ್ಯಾರ್ಥಿಗಳು ಕನ್ನಡವನ್ನು ಅಸ್ಮಿತೆಯಾಗಿ, ಇಂಗ್ಲಿಷ್ ಅನ್ನು ಸಂವಹನಕ್ಕಾಗಿ ಹಾಗೂ ಹಿಂದಿ ಅಥವಾ ಸಂಸ್ಕೃತವನ್ನು ರಾಷ್ಟ್ರೀಯ ಮತ್ತು ಸಾಂಸ್ಕೃತಿಕ ದೃಷ್ಟಿಕೋನದಿಂದ ಕಲಿಯುತ್ತಿದ್ದರು. ಆದರೆ ಈಗ ತೃತೀಯ ಭಾಷೆಯು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಾಗಿದೆ. ಇದರಿಂದ ಮಕ್ಕಳ ಭಾಷಾ ಸಾಮರ್ಥ್ಯ ಕುಂಠಿತಗೊಳ್ಳಲಿದೆ. ಶಿಕ್ಷಣ ತಜ್ಞರ ಜತೆ ಯಾವುದೇ ಪೂರ್ವಭಾವಿ ಚರ್ಚೆ ನಡೆಸದೆ ಏಕಾಏಕಿ ಇಂತಹ ಬದಲಾವಣೆ ಜಾರಿಗೊಳಿಸಿರುವುದು ಸಚಿವರ ಸರ್ವಾಧಿಕಾರಿ ಧೋರಣೆಯನ್ನು ಎತ್ತಿ ತೋರಿಸುತ್ತದೆ' ಎಂದು ಟೀಕಿಸಿದ್ದಾರೆ.



ವಿಶ್ವೇಶ್ವರ ಹೆಗಡೆ ಕಾಗೇರಿ

'ಶಿಕ್ಷಣ ಕ್ಷೇತ್ರವು ರಾಜಕೀಯ ಪ್ರಯೋಗಶಾಲೆಯಲ್ಲ. ಈ ನಿರ್ಧಾರದಿಂದ ನಮ್ಮ ವಿದ್ಯಾರ್ಥಿಗಳು ರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಹಿನ್ನಡೆ ಅನುಭವಿಸುವಂತಾಗುತ್ತದೆ. ಸರ್ಕಾರ ಈ ಆದೇಶವನ್ನು ರದ್ದುಗೊಳಿಸಿ, ಭಾಷಾ ತಜ್ಞರು ಹಾಗೂ ಸಾಹಿತಿಗಳ ಸಮ್ಮುಖದಲ್ಲಿ ಚರ್ಚೆ ನಡೆಸಿ ಮುಂದಿನ ತೀರ್ಮಾನ ಕೈಗೊಳ್ಳಬೇಕು' ಎಂದಿದ್ದಾರೆ.

ರಾಜ್ಯ ಸರ್ಕಾರಕ್ಕೆ ಸ್ಪಷ್ಟ ನೀತಿ ಇಲ್ಲ: ಬಿವೈವಿ

ಹುಬ್ಬಳ್ಳಿ: 'ಹಿಂದಿ ಸೇರಿದಂತೆ ತೃತೀಯ ಭಾಷಾ ವಿಷಯಗಳಿಗೆ ಅಂಕ ನೀಡುವ ಪದ್ಧತಿ ಕೈಬಿಟ್ಟು, ಗ್ರೇಡಿಂಗ್ ನೀಡಲು ರಾಜ್ಯ ಸರ್ಕಾರ ಮುಂದಾಗಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಸ್ಪಷ್ಟ ನೀತಿ ಇಲ್ಲ ಎನ್ನುವುದು ಗೊತ್ತಾಗುತ್ತದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

'ಹಿಂದಿ ಬೇಡ ಎನ್ನುವುದಾದರೆ ಪರೀಕ್ಷಾ ಸಮಯದಲ್ಲಿ ಈ ಬಗ್ಗೆ ಅದಕ್ಕೆ ಗಮನ ಕೊಡುವ ಅಗತ್ಯ ಇರಲಿಲ್ಲ. ಪರೀಕ್ಷಾ ಸಮಯದಲ್ಲಿ ಈ ರೀತಿ ನಿರ್ಧಾರ ಕೈಗೊಂಡಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರ ಜನಪ್ರಿಯತೆ ಸಹಿಸದೆ ಕೇಂದ್ರ ಸರ್ಕಾರದ ನೀತಿಗಳನ್ನು ರಾಜ್ಯ ಸರ್ಕಾರ ವಿರೋಧಿಸುತ್ತಿದೆ' ಎಂದು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

'ರಾಜ್ಯದಲ್ಲಿ ಹೊಸ ಶಿಕ್ಷಣ ನೀತಿ ಜಾರಿಗೆ ತರಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದರು. ಈ ನೀತಿ ಜಾರಿಗೆ ರಚಿಸಿದ್ದ ಸಮಿತಿ ವರದಿ ಕೊಟ್ಟು ಎರಡು ವರ್ಷ ಕಳೆದರೂ ಅದು ಜಾರಿಯಾಗಿಲ್ಲ. ಈಗ ಮತ್ತೆ ಉಪಸಮಿತಿ ರಚಿಸಿದ್ದಾರೆ' ಎಂದು ಟೀಕಿಸಿದರು.

ಕನ್ನಡ ಭಾಷಿಕ ಟಿಇಟಿ ಅಭ್ಯರ್ಥಿಗಳಿಗೆ ಅನ್ಯಾಯ: ಆರೋಪ

ಪ್ರಜಾವಾಣಿ ವಾರ್ತೆ

ಸೋಲಾಪುರ: 'ಸುಪ್ರೀಂ ಕೋರ್ಟ್ ಆದೇಶದಂತೆ ಮಹಾರಾಷ್ಟ್ರದಲ್ಲಿ 2027ರ ಒಳಗೆ ಎಲ್ಲಾ ಶಿಕ್ಷಕರು ಟಿಇಟಿ (ಶಿಕ್ಷಕರ ಅರ್ಹತಾ ಪರೀಕ್ಷೆ) ಪಾಸಾಗುವುದು ಕಡ್ಡಾಯವಾಗಿದೆ. ಆದರೆ, ಮಹಾರಾಷ್ಟ್ರ ಸರ್ಕಾರ ಒಂದು ಕಡೆ ಪರೀಕ್ಷೆಯನ್ನು ಕಡ್ಡಾಯಗೊಳಿಸುತ್ತಿದ್ದರೆ, ಇನ್ನೊಂದೆಡೆ ಅಲ್ಪಸಂಖ್ಯಾತ ಕನ್ನಡ ಭಾಷಿಕ ಶಿಕ್ಷಕರ ಮೇಲೆ ಭಾಷಾ ಅನ್ಯಾಯ ಮಾಡುತ್ತಿದೆ' ಎಂದು ಇಲ್ಲಿನ 'ಆದರ್ಶ ಕನ್ನಡ ಬಳಗ'ದ ಅಧ್ಯಕ್ಷ ಮಲಿಕಜಾನ್ ಶೇಖ್ ಆರೋಪಿಸಿದ್ದಾರೆ.

'ಕರ್ನಾಟಕದಲ್ಲಿ ಮರಾಠಿ ಭಾಷಿಕರಿಗೆ ಮರಾಠಿ ಭಾಷೆಯಲ್ಲೇ ಪ್ರಶ್ನೆಪತ್ರಿಕೆ ನೀಡಲಾಗುತ್ತದೆ, ಆದರೆ ಮಹಾರಾಷ್ಟ್ರದಲ್ಲಿ ಕನ್ನಡ ಭಾಷಿಕರಿಗೆ ಮರಾಠಿ ಅಥವಾ ಇಂಗ್ಲಿಷ್‌ನಲ್ಲಿ ಪರೀಕ್ಷೆ ಬರೆಯುವಂತೆ ಒತ್ತಾಯಿಸುತ್ತಿದ್ದಾರೆ' ಎಂದು ದೂರಿದ್ದಾರೆ.

'ಪರೀಕ್ಷಾ ಪರಿಷತ್ತು ಅರ್ಜಿ ಸಲ್ಲಿಸುವಾಗ 'ಕನ್ನಡ' ಮಾಧ್ಯಮದ ಆಯ್ಕೆ ನೀಡುತ್ತದೆ. ಆದರೆ, ಪರೀಕ್ಷೆಯ ಸಮಯದಲ್ಲಿ ಪ್ರಶ್ನೆಪತ್ರಿಕೆಯು ಮರಾಠಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಇರುತ್ತದೆ. ಇದರಿಂದ ಕನ್ನಡ ಮಾಧ್ಯಮದಲ್ಲಿ ಡಿ.ಇಡಿ., ಬಿ.ಇಡಿ ಪೂರೈಸಿದ ಅಭ್ಯರ್ಥಿಗಳಿಗೆ ಪ್ರಶ್ನೆಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತಿದೆ. ಭಾಷೆಯ ಈ ತಾಂತ್ರಿಕ ಅಡಚಣೆಯಿಂದಾಗಿ ಅರ್ಹರು ಅನುತ್ತೀರ್ಣರಾಗುತ್ತಿದ್ದಾರೆ' ಎಂದು ಆರೋಪಿಸಿದ್ದಾರೆ.

'ಅರ್ಹ ಶಿಕ್ಷಕರು ಲಭ್ಯವಾಗದಿದ್ದರೆ ಮುಂದಿನ ದಿನಗಳಲ್ಲಿ ಮಹಾರಾಷ್ಟ್ರದಲ್ಲಿ ಕನ್ನಡ ಶಾಲೆಗಳು ಮುಚ್ಚುವ ಭೀತಿ ಇದೆ. ಇದು ಗಡಿ ಭಾಗದ ಕನ್ನಡ ಸಂಸ್ಕೃತಿ ಮತ್ತು ಶಿಕ್ಷಣದ ಮೇಲೆ ಹೊಡೆತ ನೀಡಲಿದೆ. ಸರ್ಕಾರ ಕೂಡಲೇ ನಿರ್ಧಾರ ಕೈಗೊಳ್ಳದಿದ್ದರೆ ಹೋರಾಟ ಹಮ್ಮಿಕೊಳ್ಳಲಾಗುವುದು' ಎಂದು ಕನ್ನಡ ಸಾಹಿತ್ಯ ಪರಿಷತ್ತು (ಮಹಾರಾಷ್ಟ್ರ ಘಟಕ) ಅಧ್ಯಕ್ಷ ಸೋಮಶೇಖರ್ ಜಮಶೆಟ್ಟಿ ತಿಳಿಸಿದ್ದಾರೆ.

ಶಿಶು ಅಭಿವೃದ್ಧಿ ಅಂತಃಕರಣವೇ ಸಂಜೀವಿನಿ

• ಪ್ರದೀಪ್ ಎಸ್. ವೆಂಕಟರಾಮ್

ಪಿಯುಸಿ ಮುಂದೇನು? ಭಾಗ –7

ಶಿಕ್ಷಕರು ಕೇಳಿದ ಒಂದು ಸರಳ ಪ್ರಶ್ನೆಯು ಆರು ವರ್ಷದ ಅಕ್ಷಯ್‌ಗೆ ಉತ್ತರಿಸಲು ಅಸಾಧ್ಯವಾದ ಸವಾಲಾಗುತ್ತದೆ. ಚುರುಕುಮತಿ, ಮನೆಯಲ್ಲಿ ನಿರಂತರವಾಗಿ ಮಾತನಾಡುವವನು ತರಗತಿಯಲ್ಲಿ ಮಾತ್ರ ಮೌನಕ್ಕೆ ಶರಣಾಗುತ್ತಾನೆ. ಸ್ನೇಹಿತರ ನಡುವೆಯಿದ್ದರೂ ಒಂಟಿಯಾಗಿಯೇ ಉಳಿಯುತ್ತಾನೆ.

ಇನ್ನೊಂದು ಉದಾಹರಣೆ: ಅಪರಿಚಿತರು ಮಾತ್ರವಲ್ಲ, ಪರಿಚಿತ ಬಂಧುಗಳನ್ನು ನೋಡಿದಾಗ, ಅವರು ಮಾತನಾಡಿಸಲು ಮುಂದಾದಾಗ ಭಯದಿಂದ ಅಳುವವಳು ಮೂರು ವರ್ಷದ ಶ್ವೇತಾ. ಉಡುಗೊರೆಗಳನ್ನು ನಿಸ್ಸಂಕೋಚವಾಗಿ ಸ್ವೀಕರಿಸಿದರೂ ಕ್ಷಣದಲ್ಲೇ ತಾಯ್ತಂದೆಯ ಹಿಂದೆ ಅಡಗಿಕೊಳ್ಳುತ್ತಾಳೆ. ಕಾಲ ಕಳೆದರೂ ಈ ವರ್ತನೆ ಬದಲಾಗುವುದಿಲ್ಲ. ಆಶ್ಚರ್ಯವೆಂದರೆ, ಅವಳು ಓದಿನಲ್ಲಿ ಮುಂದಿದ್ದಾಳೆ, ನೃತ್ಯದಲ್ಲಿ ಮಿಂಚುತ್ತಾಳೆ. ಆದರೆ, ಸಾಮಾಜಿಕ ಬೆಳವಣಿಗೆಯಲ್ಲಿ ಹಿಂದಿದ್ದಾಳೆ.

ಇವು ಬರೀ ಪ್ರಕರಣಗಳಲ್ಲ. ನಮ್ಮ ಸುತ್ತಮುತ್ತಲಿನ ಅನೇಕ ಮಕ್ಕಳಲ್ಲಿ ಕಂಡುಬರುವ ವರ್ತನೆಗಳ ಪ್ರತಿಬಿಂಬ. ಬೆಳವಣಿಗೆ ಎಂದರೆ ಅಂಕಗಳು, ಬಹುಮಾನಗಳಷ್ಟೇ ಅಲ್ಲ; ಮಕ್ಕಳ ಮನಸ್ಸು, ಭಾವನೆ ಮತ್ತು ಸಾಮಾಜಿಕ ಹೊಂದಾಣಿಕೆಯ ಸಮತೋಲನವೂ ಅಷ್ಟೇ ಮುಖ್ಯ. ಈ ದಿಸೆಯಲ್ಲಿ ಉಂಟಾಗುವ ಸಮಸ್ಯೆಗಳು, ಸವಾಲುಗಳನ್ನು ಗಮನಿಸಿ, ಸಕಾಲಕ್ಕೆ ತಜ್ಞರೊಡನೆ ಸಮಾಲೋಚಿಸದಿದ್ದರೆ, ಮುಂದೆ ಅವು ಪರಿಹರಿಸಲು ಕ್ಲಿಷ್ಟವಾದ ಸಮಸ್ಯೆಗಳೇ ಆಗಬಹುದು. ಮಗುವಿನ ಮೊದಲ ಐದು ವರ್ಷ, ಮೆದುಳಿನ ಶೇ 90ರಷ್ಟು ಬೆಳವಣಿಗೆಯಾಗುವ ಮಹತ್ವದ ಹಂತ. ಮಗು ಈ ಅವಧಿಯಲ್ಲಿ ಅಭಿವೃದ್ಧಿಯ ಕೆಲವು ಪ್ರಮುಖ ಮೈಲಿಗಲ್ಲುಗಳನ್ನು ಕಾಲಕ್ರಮೇಣ ತಲುಪುತ್ತದೆ. ತಾಯಿಯನ್ನು ಗುರುತಿಸುವುದು, ಶಬ್ದಗಳಿಗೆ, ಧ್ವನಿಗಳಿಗೆ ಪ್ರತಿಕ್ರಿಯಿಸುವುದು, ನಗುವುದು, ಬೋರಲಾಗುವುದು, ಅಂಬೆಗಾಲಿಡುವುದು, ಕುಳಿತುಕೊಳ್ಳುವುದು, ಮಾತು, ನಡಿಗೆ ಇತ್ಯಾದಿ. ಇದೇ ಅವಧಿಯಲ್ಲಿ ರೂಪುಗೊಳ್ಳುವ ಹಂಚಿಕೊಳ್ಳುವಿಕೆ, ಸಹಾನುಭೂತಿ, ಸತ್ಯನಿಷ್ಠೆ, ಸಹಕಾರ, ಸಹನೆ ಮತ್ತು ಸಂವಹನದಂತಹ ಜೀವನ ಕೌಶಲಗಳು ಮಗುವಿನ ಭವಿಷ್ಯದ ವ್ಯಕ್ತಿತ್ವಕ್ಕೆ ಅಡಿಪಾಯವಾಗುತ್ತವೆ. ಆದರೆ ಕೆಲವೊಮ್ಮೆ ಮಕ್ಕಳ ಬೆಳವಣಿಗೆಯಲ್ಲಿ ತಡವಾಗಬಹುದು. ಮಾತನಾಡಲು ವಿಳಂಬ, ಪ್ರತಿಕ್ರಿಯೆಯಲ್ಲಿ ಕೊರತೆ, ಅಸಾಮಾನ್ಯ ವರ್ತನೆ, ನಿದ್ರಾಹೀನತೆ, ಆಹಾರ ನಿರಾಕರಣೆ ಅಥವಾ ಆಟಿಸಮ್ ಲಕ್ಷಣಗಳನ್ನು ಕಾಣಬಹುದು. ಇಂತಹ ಲಕ್ಷಣಗಳನ್ನು

ನಿರ್ಲಕ್ಷಿಸದೆ ತಜ್ಞರು, ವೈದ್ಯರು, ಮನೋವಿಜ್ಞಾನಿಗಳು ಅಥವಾ ಸ್ಪೆಷಲ್ ಎಜುಕೇಟರ್‌ಗಳ ಮಾರ್ಗದರ್ಶನದಲ್ಲಿ 'ಆರಂಭಿಕ ಮಧ್ಯಸ್ಥಿಕೆ' (ಅರ್ಲಿ ಇಂಟರ್‌ವೆನ್ಷನ್) ನೀಡಿದರೆ, ಮಕ್ಕಳಲ್ಲಿ ಸಂಪೂರ್ಣ ಅಥವಾ ಗಮನಾರ್ಹವಾದ ಸುಧಾರಣೆಯನ್ನು ಕಾಣಬಹುದು. ಪ್ರತಿ ಮಗುವಿನ ಸಮಸ್ಯೆ ವಿಭಿನ್ನವಾಗಿರುವುದು ಸಹಜ. ಹಾಗಾಗಿ, ಈ ಕ್ಷೇತ್ರದಲ್ಲಿ ಉದ್ಯೋಗಿಯಾಗಿ ಯಶಸ್ವಿಯಾಗಲು ಪದವಿಯಷ್ಟೇ ಸಾಕಾಗದು. ಕೆಲವು ವಿಶೇಷ ಗುಣಗಳು, ಕೌಶಲಗಳು ಅಗತ್ಯ. ಮಕ್ಕಳೊಡನೆ ಬೆರೆಯುವ ಆಸಕ್ತಿ, ಪ್ರೀತಿ, ಸಹಾನುಭೂತಿ, ಸಹನೆ, ಶಾಂತ ಸ್ವಭಾವ, ಸಂವಹನ ಕೌಶಲ, ಸಕ್ರಿಯ ಆಲಿಸುವಿಕೆ, ವಿಶ್ಲೇಷಣಾ ಕೌಶಲ, ಸಮಸ್ಯೆಗಳ ಪರಿಹಾರ, ಸಮಾಜಸೇವೆಯ ಮನೋಭಾವ ಎಲ್ಲವೂ ಇರಬೇಕಾಗುತ್ತದೆ.

ಆಧುನಿಕ ಜೀವನದಲ್ಲಿ ಮಕ್ಕಳಿಗೆ ಹೆಚ್ಚಿನ ಮಾನಸಿಕ ಒತ್ತಡ ಮತ್ತು ಸಾಮಾಜಿಕ ಸವಾಲುಗಳು ಎದುರಾಗುತ್ತಿವೆ. ಆದ್ದರಿಂದ, ಶಿಶು ಅಭಿವೃದ್ಧಿ ಕ್ಷೇತ್ರದ ಮಹತ್ವ ಹಾಗೂ ಪ್ರಸ್ತುತತೆ ಇನ್ನಷ್ಟು ಹೆಚ್ಚುತ್ತಿದೆ. ಹಾಗಾಗಿ, ಈ ಕ್ಷೇತ್ರದ ಉದ್ಯೋಗಿಗಳಿಗೆ ಸಮಾಜದಲ್ಲಿ ಗೌರವದ ಜೊತೆಗೆ ಮಾನವೀಯ ಸೇವೆ ಮಾಡುವ ತೃಪ್ತಿಯೂ ದೊರೆಯುತ್ತದೆ.

ಲೇಖಕ: ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ

ವಿವಿಧ ಕೋರ್ಸ್, ವಿವಿಧ ವೃತ್ತಿ

ಶಿಶು ಅಭಿವೃದ್ಧಿ ಕ್ಷೇತ್ರದಲ್ಲಿ ಬಹಳಷ್ಟು ಉದ್ಯೋಗಾವಕಾಶಗಳಿವೆ. ಪ್ರಮುಖ ವೃತ್ತಿಗಳೆಂದರೆ: ಚೈಲ್ಡ್ ಡೆವಲಪ್‌ಮೆಂಟ್ ಸ್ಪೆಷಲಿಸ್ಟ್, ಸ್ಪೆಷಲ್ ಎಜುಕೇಟರ್, ಸ್ಪೀಚ್ ಥೆರಪಿಸ್ಟ್, ಕೌನ್ಸೆಲರ್, ಪ್ರೀ-ಸ್ಕೂಲ್ ಟೀಚರ್, ಚೈಲ್ಡ್ ಡೆವಲಪ್‌ಮೆಂಟ್ ಎಕ್ಸ್‌ಪರ್ಟ್, ಆಟಿಸಮ್ ಸ್ಪೆಷಲಿಸ್ಟ್...

ವಿವಿಧ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳು ಲಭ್ಯವಿವೆ: ಬಿ.ಎ (ಚೈಲ್ಡ್ ಡೆವಲಪ್‌ಮೆಂಟ್), ಬಿ.ಎಸ್ಸಿ (ಹ್ಯೂಮನ್ ಡೆವಲಪ್‌ಮೆಂಟ್), ಡಿಪ್ಲೊಮಾ (ಅರ್ಲಿ ಚೈಲ್ಡ್ ಕೇರ್ ಆ್ಯಂಡ್ ಎಜುಕೇಷನ್), ಎಂ.ಎ (ಚೈಲ್ಡ್ ಡೆವಲಪ್‌ಮೆಂಟ್), ಎಂ.ಎಸ್ಸಿ (ಸೈಕಾಲಜಿ- ಚೈಲ್ಡ್ ಸ್ಪೆಷಲೈಸೇಶನ್) ಹಾಗೂ ಅಲ್ಪಾವಧಿಯ ನಿರ್ದಿಷ್ಟ ಡಿಪ್ಲೊಮಾ, ಸರ್ಟಿಫಿಕೆಟ್ ಕೋರ್ಸ್‌ಗಳಿವೆ. ಎಲ್ಲಾ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಈ ಕೋರ್ಸ್‌ಗಳು ಲಭ್ಯ.

ಕಲಿಸುವ ವಿಷಯ

ಮಕ್ಕಳ ಮಾನಸಿಕ ಬೆಳವಣಿಗೆ, ಭಾಷಾ ಅಭಿವೃದ್ಧಿ, ಕಲಿಕೆಯ ಸಮಸ್ಯೆ, ವರ್ತನೆಯ ಅಧ್ಯಯನ, ಕೌನ್ಸೆಲಿಂಗ್ ತಂತ್ರಗಳು, ಪ್ರೀ-ಸ್ಕೂಲ್ ಶಿಕ್ಷಣ ವಿಧಾನಗಳು, ವಿಶೇಷ ಮಕ್ಕಳ ಪೋಷಣೆ ಮತ್ತು ಶಿಕ್ಷಣ, ಕುಟುಂಬ ಮತ್ತು ಸಾಮಾಜಿಕ ಪರಿಸರದ ಪ್ರಭಾವ... ಈ ಕೋರ್ಸ್‌ಗಳಲ್ಲಿ ಸಾಂಪ್ರದಾಯಿಕ ತರಗತಿ ಕಲಿಕೆಯ ಜೊತೆಗೆ ಮಕ್ಕಳೊಂದಿಗೆ ನೇರವಾಗಿ ಕೆಲಸ ಮಾಡುವ ತರಬೇತಿಯನ್ನೂ ನೀಡಲಾಗುತ್ತದೆ.

ಶೈಕ್ಷಣಿಕ ಮೇಳ ದಿನಗಣನೆ ಆರಂಭ

'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಆಯೋಜಿಸಲಿರುವ, 100ಕ್ಕೂ ಹೆಚ್ಚು ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳು ಪಾಲ್ಗೊಳ್ಳಲಿರುವ, ಕರ್ನಾಟಕದ ಅತಿದೊಡ್ಡ ಶೈಕ್ಷಣಿಕ ಮೇಳ 'ಎಡ್ಯುವರ್ಸ್–2026'ಕ್ಕೆ ದಿನಗಣನೆ ಆರಂಭವಾಗಿದೆ.

'ಪಿಯುಸಿ ನಂತರ ಮುಂದೇನು?' ಎಂಬ ಪ್ರಶ್ನೆಗೆ ವಿದ್ಯಾರ್ಥಿಗಳು ಹಾಗೂ ಪೋಷಕರು ಮೇಳದಲ್ಲಿ ಭಾಗವಹಿಸುವ ಮೂಲಕ ತಕ್ಕ ಉತ್ತರ ಪಡೆಯಬಹುದಾಗಿದೆ.

ಮೇಳದಲ್ಲಿ ಪಾಲ್ಗೊಳ್ಳುತ್ತಿರುವ ಸಂಸ್ಥೆಗಳು: ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್, ರೇವಾ ಯೂನಿವರ್ಸಿಟಿ, ಪ್ರೆಸಿಡೆನ್ಸಿ ಯೂನಿವರ್ಸಿಟಿ, ಸಿಎಂಆರ್ ಯೂನಿವರ್ಸಿಟಿ, ಸಪ್ತಗಿರಿ ಎನ್‌ಪಿಎಸ್ ಯೂನಿವರ್ಸಿಟಿ, ಕೆಎಲ್‌ಇ ವೈದ್ಯಕೀಯ ವಿಶ್ವವಿದ್ಯಾಲಯ, ವಿಐಟಿ, ಈಸ್ಟ್ ಪಾಯಿಂಟ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಕೇಂಬ್ರಿಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ರಾಜರಾಜೇಶ್ವರಿ ಎಂಜಿನಿಯರಿಂಗ್ ಕಾಲೇಜು, ಈಸ್ಟ್ ವೆಸ್ಟ್ ಸಮೂಹ ಸಂಸ್ಥೆ, ಸಂಭ್ರಮ್ ಇನ್‌ಸ್ಟಿಟ್ಯೂಷನ್ಸ್, ಎಂಎಸ್ ಎಂಜಿನಿಯರಿಂಗ್ ಕಾಲೇಜು, ಎಬಿಬಿಎಸ್–ಆಚಾರ್ಯ ಬೆಂಗಳೂರು ಬಿ ಸ್ಕೂಲ್, ಎಐಎಂಎಸ್–ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸೈನ್ಸ್, ಅಮೃತ ವಿಶ್ವ ವಿದ್ಯಾಪೀಠಂ, ಎಸಿಎಸ್ ಎಂಜಿನಿಯರಿಂಗ್ ಕಾಲೇಜು, ಡಾ. ಎಸ್.ಆರ್.ಚಂದ್ರಶೇಖರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್, ಐಡಿಯಾ ಸ್ಮಾರ್ಟ್ ಲರ್ನಿಂಗ್ (ವಿಷನ್ ಅಕಾಡೆಮಿ), ಪಿಇಎಸ್ ಯೂನಿವರ್ಸಿಟಿ, ಯೂನಿವರ್ಸಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಆರ್‌ಆರ್ ಇನ್‌ಸ್ಟಿಟ್ಯೂಷನ್ಸ್ ಎಂಜಿನಿಯರಿಂಗ್ ಕಾಲೇಜಸ್, ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು (ಮೈಸೂರು), ಕೆಳದಿ ಶಿವಪ್ಪ ನಾಯಕ ಯೂನಿವರ್ಸಿಟಿ ಆಫ್ ಅಗ್ರಿಕಲ್ಚರಲ್ ಆ್ಯಂಡ್ ಹಾರ್ಟಿಕಲ್ಚರಲ್ ಸೈನ್ಸಸ್ (ಇರುವಕ್ಕಿ), ಎಂಐಟಿ ವರ್ಲ್ಡ್ ಪೀಸ್ ಯೂನಿವರ್ಸಿಟಿ (ಪುಣೆ), ಐಎಎಸ್ ಬಾಬಾ, ಅಮಿಟಿ ಯೂನಿವರ್ಸಿಟಿ, ಬಿರ್ಲಾ ಗ್ಲೋಬಲ್ ಯೂನಿವರ್ಸಿಟಿ, ಐಎಸ್‌ಬಿಆ್ಯಂಡ್‌ಎಂ, ಎಸ್‌ಆರ್‌ಎನ್ ಆದರ್ಶ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಐಸಿಎಫ್‌ಎಐ, ದಿ ಆಕ್ಸ್‌ಫರ್ಡ್ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್, ಎಸ್‌ಡಿಎಂ ಎಜುಕೇಷನ್ ಸೊಸೈಟಿ (ಉಜಿರೆ), ಪಾರುಲ್ ಯೂನಿವರ್ಸಿಟಿ, ಆರ್‌ವಿ ಯೂನಿವರ್ಸಿಟಿ, ಮಾಹೆ, ಎಸ್‌ಆರ್‌ಎಂ ಯೂನಿವರ್ಸಿಟಿ, ಕಮ್ಮವಾರಿ ಸಂಘಂ, ಸಾಯಿ ವಿದ್ಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಡೆಕ್ಕನ್ ಪಿಯು ಕಾಲೇಜು, ಶೇಷಾದ್ರಿಪುರಂ ಕಾಲೇಜು, ಏಟ್ರಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಮಹಾರಾಜ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಹತ್ತು ಹಲವು.

ಎಡ್ಯುವರ್ಸ್
ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

ಬೆಂಗಳೂರಿನಲ್ಲಿ

ನಡೆಯುವ ದಿನಾಂಕ: ಏಪ್ರಿಲ್ 4 ಮತ್ತು 5
ಸ್ಥಳ: ಗಾಯತ್ರಿ ವಿಹಾರ, ಅರಮನೆ ಮೈದಾನ
ಸಮಯ: ಬೆಳಿಗ್ಗೆ 9ರಿಂದ ಸಂಜೆ 6
ಉಚಿತ ಪ್ರವೇಶ

ಹುಬ್ಬಳ್ಳಿಯಲ್ಲಿ

ನಡೆಯುವ ದಿನಾಂಕ: ಏಪ್ರಿಲ್ 11 ಮತ್ತು 12
ಸ್ಥಳ: ನೆಹರೂ ಕ್ರೀಡಾಂಗಣ, ಜೆ.ಸಿ.ನಗರ
ಸಮಯ: ಬೆಳಿಗ್ಗೆ 9ರಿಂದ ಸಂಜೆ 6
ಉಚಿತ ಪ್ರವೇಶ

ಸಿಇಟಿ ಮತ್ತು ನೀಟ್ ಅಣಕು ಪರೀಕ್ಷೆ ಬರೆಯಲು ಇಚ್ಛಿಸುವವರು ಪಕ್ಕದ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಹೆಸರು ನೋಂದಾಯಿಸಿಕೊಳ್ಳಬಹುದು.

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ಕೆರಿಯರ್360: ಮಾರ್ಕೆಟಿಂಗ್ ಇಂಟರ್ನಿಯನ್ನು ನೇಮಕ ಮಾಡಿಕೊಳ್ಳಲಿದೆ. ಮಾರ್ಕೆಟಿಂಗ್ ಬಗ್ಗೆ ಜ್ಞಾನ ಹಾಗೂ ಪರಿಣಾಮಕಾರಿ ಸಂವಹನ ಸಾಮರ್ಥ್ಯ ಇರುವವರು ಏ. 24ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ಒಟ್ಟಾರೆ ₹ 15,150. ಸಂಪರ್ಕ: https://tinyurl.com/mssyb6bp.

ಬೆಂಗಳೂರು ಕೇಂದ್ರಿತ ಇಂಟರ್ನ್‌ಷಿಪ್

ಸತ್ಯುಕ್ತ್ ಅನಲಿಟಿಕ್ಸ್ ಪ್ರೈವೇಟ್ ಲಿಮಿಟೆಡ್: ಬಿಸಿನೆಸ್ ಡೆವಲಪ್‌ಮೆಂಟ್ (ಸೇಲ್ಸ್) ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಕ್ಲೈಂಟ್ ರಿಲೇಷನ್‌ಷಿಪ್ ಮ್ಯಾನೇಜ್‌ಮೆಂಟ್ (ಸಿಆರ್‌ಎಂ), ಇಂಟರ್‌ಪರ್ಸನಲ್ ಸ್ಕಿಲ್ ಅರಿತಿರುವ, ಇಂಗ್ಲಿಷ್‌ನಲ್ಲಿ ಮಾತನಾಡುವ ಮತ್ತು ಬರೆಯುವ ಸಾಮರ್ಥ್ಯ ಇರುವ ವಿದ್ಯಾರ್ಥಿಗಳು ಏ. 23ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 10,000– ₹ 15,000. ಸಂಪರ್ಕ: https://tinyurl.com/2zt2juc2.

'ಏನನ್ನು ಓದಬೇಕು ತಿಳಿದುಕೊಳ್ಳಿ'

ಯುಪಿಎಸ್‌ಸಿ ಪರೀಕ್ಷೆ ವಿಜೇತ ಕಿರಣ ಕಮತೆ

• ಸಂತೋಷ ಈ. ಚಿನಗುಡಿ

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಹತ್ತರವಾಟ ಗ್ರಾಮದ ಕಿರಣ ಸಣ್ಣಪ್ಪ ಕಮತೆ (29) ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ 53ನೇ ರ‍್ಯಾಂಕ್ ಹಾಗೂ ರಾಜ್ಯಕ್ಕೆ ಮೊದಲ ರ‍್ಯಾಂಕ್ ಪಡೆದಿದ್ದಾರೆ. ಐದು ಪ್ರಯತ್ನಗಳಲ್ಲಿ ವಿಫಲರಾದ ಅವರು ಆರನೇ ಬಾರಿಗೆ ಯಶಸ್ಸು ಕಂಡಿದ್ದಾರೆ. ತಮ್ಮ ಯಶಸ್ಸಿನ ಹಿಂದಿನ ಗುಟ್ಟನ್ನು 'ಪ್ರಜಾವಾಣಿ' ಜೊತೆ ಅವರಿಲ್ಲಿ ಹಂಚಿಕೊಂಡಿದ್ದಾರೆ:

***

'ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವವರು ತುಂಬ ಓದಬೇಕಾಗುತ್ತದೆ, ತುಂಬ ಬರೆಯಬೇಕಾಗುತ್ತದೆ ಎಂಬುದು ನಿಜ. ಆದರೆ, ಏನನ್ನು ಓದಬೇಕು, ಏನನ್ನು ಓದಬಾರದು ಎಂದು ಸರಿಯಾಗಿ ನಿರ್ಧರಿಸಬೇಕು. ಈ ಪರೀಕ್ಷೆಗಳು ಆಳವಾದ ಅಧ್ಯಯನದ ಜೊತೆಗೆ ಅಧ್ಯಯನ ಕೌಶಲವನ್ನೂ ಕೇಳುತ್ತವೆ. ಅನಗತ್ಯವಾದುದನ್ನು ಓದಿ ಸಮಯ ವ್ಯರ್ಥ ಮಾಡಬಾರದು. ನಿರ್ದಿಷ್ಟವಾದ ಯೋಜಿತ ಓದು ನಮ್ಮಲ್ಲಿ ಆತ್ಮವಿಶ್ವಾಸ ಮೂಡಿಸುತ್ತದೆ'.

–ಕಿರಣ ಕಮತೆ ಅವರ ಈ ಮಾತಿನಲ್ಲಿ ಸ್ಪಷ್ಟತೆ ಇತ್ತು. ದೊಡ್ಡ ಯಶಸ್ಸು ಅವರಿಗೆ ಸುಲಭವಾಗಿ ಸಿಕ್ಕಿಲ್ಲ ಎಂಬ ಸಂದೇಶವಿತ್ತು. ಬಾಲ್ಯದಲ್ಲಿ ಹುಟ್ಟಿದ ಕನಸೊಂದನ್ನು ನನಸು ಮಾಡಿಕೊಳ್ಳಲು ಅವರು ಬರೋಬ್ಬರಿ 8 ವರ್ಷ ಸವೆಸಿದರು. ವೃತ್ತಿಯ ಒತ್ತಡ, ಪತ್ನಿ ಹಾಗೂ ಹೆತ್ತವರ ಜವಾಬ್ದಾರಿ ನಿಭಾಯಿಸುತ್ತಲೇ ಸಾಧನೆಯ ಉತ್ತುಂಗ ತಲುಪಿದರು. ದೃಢ ಸಂಕಲ್ಪದ ಮುಂದೆ ಎಲ್ಲ ಅಡಚಣೆಗಳೂ ಗೌಣ ಎಂಬ ಮಾತಿಗೆ ಜ್ವಲಂತ ನಿದರ್ಶನವಾದರು.

ಹತ್ತರವಾಟ ಎಂಬ ಸಣ್ಣ ಹಳ್ಳಿಯಲ್ಲಿ ಹುಟ್ಟಿ ಬೆಳೆದವರು ಕಿರಣ. ತಂದೆ ಸಣ್ಣಪ್ಪ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರು, ತಾಯಿ ರುಕ್ಮಿಣಿ ಗೃಹಿಣಿ. ಪತ್ನಿ ಲೋಚನಾ ಹಾಗೂ ಸಹೋದರಿ ಕೀರ್ತಿ ಕೂಡ ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸಿದ್ದಾರೆ. ಅಜ್ಜ, ಅಜ್ಜಿ ಸೇರಿ ಅವರದು ದೊಡ್ಡ ಅವಿಭಕ್ತ ಕುಟುಂಬ. ಯುಪಿಎಸ್‌ಸಿ ಪರೀಕ್ಷೆಗೆ ಪ್ರಯತ್ನಿಸಿ ವಿಫಲರಾಗಿದ್ದ ತಂದೆ ತಮ್ಮ ಕನಸನ್ನು ಮಗನಿಗೆ ಎಳವೆಯಲ್ಲೇ ಬಿತ್ತಿದರು. ಪದವಿ ಮುಗಿಸುವಷ್ಟರಲ್ಲಿ ಆ ಮಾತು ಕಿರಣ ಅವರನ್ನು ಎಷ್ಟು ಆವರಿಸಿತೆಂದರೆ, ಮುಂದೆ ಐದು ಸೋಲುಗಳೂ ಅವರ ಮನಸ್ಸನ್ನು ಚಂಚಲಗೊಳಿಸಲಿಲ್ಲ, ಆತ್ಮವಿಶ್ವಾಸ ಕುಗ್ಗಿಸಲಿಲ್ಲ.

ಅವರ ಪ್ರಾಥಮಿಕ ಶಿಕ್ಷಣ ಬೇರೆ ಬೇರೆ ಶಾಲೆಗಳಲ್ಲಿ ಆಗಿದೆ. ಬೆಳಗಾವಿಯ ಜಿಐಟಿಯಲ್ಲಿ ಸಿವಿಲ್ ಎಂಜಿನಿಯರಿಂಗ್ ಮುಗಿಸಿ, ಪ್ರಸ್ತುತ ಬೆಂಗಳೂರಿನಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿದ್ದಾರೆ. ಯುಪಿಎಸ್‌ಸಿ ಪರೀಕ್ಷೆಗಾಗಿ ಮದುವೆಯನ್ನು ಅಥವಾ ಮದುವೆಗಾಗಿ ಯುಪಿಎಸ್‌ಸಿ ಪರೀಕ್ಷೆಯನ್ನು ಅವರು ತ್ಯಾಗ ಮಾಡಲಿಲ್ಲ. ಎರಡನ್ನೂ ಬದುಕಿನ ಬಂಡಿಯ ಚಕ್ರಗಳಾಗಿ ಮಾಡಿಕೊಂಡರು.

'ನಾನು ಹೆಚ್ಚು ಪರೀಕ್ಷೆಗಳನ್ನು ಬರೆಯುವುದನ್ನು ರೂಢಿಸಿಕೊಂಡಿದ್ದೆ. ಪುನರ್ಮನನ ತುಂಬಾ ಮುಖ್ಯ. ಅದಕ್ಕಾಗಿ ಹೆಚ್ಚು ತಯಾರಿ ಮಾಡಿಕೊಂಡಿದ್ದೆ. ಹೀಗಾಗಿ, ಆರು ಬಾರಿಯೂ ಪೂರ್ವಭಾವಿ ಪರೀಕ್ಷೆ ಪಾಸಾದೆ' ಎನ್ನುವುದು ಅವರ ಮಾತು.

'ರಾಜ್ಯಶಾಸ್ತ್ರ ಮತ್ತು ಅಂತರರಾಷ್ಟ್ರೀಯ ಸಂಬಂಧಗಳು (ಪಿಎಸ್‌ಐಆರ್) ನಾನು ಮುಖ್ಯ ಪರೀಕ್ಷೆಗೆ ಆಯ್ದುಕೊಂಡ ವಿಷಯ. ಈ ಪರೀಕ್ಷೆಯಲ್ಲಿ 1750 ಅಂಕಗಳು ಇರುತ್ತವೆ. ಇಲ್ಲಿ ಉತ್ತಮವಾಗಿ ಬರೆಯುವುದು ಮುಖ್ಯ. ನಾನು ಪದೇಪದೇ ಬರೆದು ರೂಢಿಸಿಕೊಂಡೆ. ಒಂದು ಉತ್ತರವನ್ನು ಏಳೇ ನಿಮಿಷಗಳಲ್ಲಿ ಬರೆದುಬಿಡಬೇಕು ಎಂಬುದು ನನ್ನ ಗುರಿಯಾಗಿತ್ತು. ಪೂರ್ವಭಾವಿ ಪರೀಕ್ಷೆಯ ಅಂಕಗಳು ಇನ್ನೂ ಗೊತ್ತಾಗಿಲ್ಲ. ಮುಖ್ಯ ಪರೀಕ್ಷೆಯಲ್ಲಿ 811 (1750) ಹಾಗೂ ಸಂದರ್ಶನದಲ್ಲಿ 195 (275) ಅಂಕಗಳನ್ನು ಗಳಿಸಿದ್ದೇನೆ. ಆತ್ಮವಿಶ್ವಾಸದಿಂದ ಸಂದರ್ಶನ ಎದುರಿಸಬೇಕು. ಅಲ್ಲಿ ಏನು ಹೇಳಬೇಕು ಎನ್ನುವುದರ ಜೊತೆಗೆ ಏನನ್ನು ಹೇಳಬಾರದು ಎಂಬುದೂ ಗೊತ್ತಿರಬೇಕು' ಎಂದು ಅವರು ಅನುಭವ ಹಂಚಿಕೊಂಡರು.

'ಪ್ರತಿದಿನದ ವೃತ್ತಿ, ಕುಟುಂಬ ನಿರ್ವಹಣೆ ಹೊರತಾಗಿ 6 ಗಂಟೆ ಓದಿಗಾಗಿ ಮೀಸಲಿಟ್ಟಿದ್ದೆ. ಮೂಲ ರೆಫರೆನ್ಸ್ ಪುಸ್ತಕ, ಪ್ರಚಲಿತ ಸಂಗತಿಗಳು, ಪೂರ್ವಭಾವಿ ಹಾಗೂ ಮುಖ್ಯ ಪರೀಕ್ಷೆಯ ಓದಿನ ರಿವಿಜನ್, ವೃತ್ತಪತ್ರಿಕೆ ಓದು ಎಲ್ಲದಕ್ಕೂ ಒಂದೊಂದು ಗಂಟೆ ಹೊಂದಿಸಿಕೊಂಡಿದ್ದೆ' ಎಂದು ಅವರು ತಮ್ಮ ರೂಪುರೇಷೆ ಬಿಚ್ಚಿಟ್ಟರು.

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪ್ರಚಲಿತ ವಿದ್ಯಮಾನಗಳು ಮತ್ತು ವಿಶ್ವವ್ಯಾಪಿಯ ಮಾಹಿತಿ ಬೇಕಾಗುತ್ತದೆ. ಅದಕ್ಕೆ ಪತ್ರಿಕೆಗಳು ಮಾತ್ರ ಸಾಧನ. 'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಮತ್ತು ಇತರ ಇಂಗ್ಲಿಷ್ ಪತ್ರಿಕೆಗಳನ್ನು ಪ್ರತಿದಿನ ಒಂದು ತಾಸು ಓದುವುದು ಅವರ ರೂಢಿ.

ಕನ್ನಡದಲ್ಲಿ ಈಗ ಬಹಳಷ್ಟು ಉಪಯುಕ್ತ ಪುಸ್ತಕಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳು ಸಿಗುತ್ತಾರೆ. ಕೋಚಿಂಗ್ ಕೇಂದ್ರಗಳೂ ಇವೆ. ಗೂಗಲ್, ಕೃತಕ ಬುದ್ಧಿಮತ್ತೆ ಆ್ಯಪ್‌ಗಳಲ್ಲಿ ಮಾಹಿತಿ ಸಿಗುತ್ತದೆ. ಇದರೊಂದಿಗೆ ತಕ್ಕಷ್ಟು ಇಂಗ್ಲಿಷ್ ಜ್ಞಾನ ಬೇಕು. ಕೋಚಿಂಗ್ ಎಲ್ಲರಿಗೂ ಅನಿವಾರ್ಯ ಅಲ್ಲ, ತಮ್ಮ ಸಾಮರ್ಥ್ಯ ಏನು ಎಂಬುದನ್ನು ಅರ್ಥ ಮಾಡಿಕೊಂಡು ನಿರ್ಧರಿಸಬೇಕು ಎಂಬುದಕ್ಕೆ ಕಿರಣ ಅವರೇ ಉದಾಹರಣೆ.

ಸ್ವಯಂ ಅಧ್ಯಯನ ಮಾಡಿ ಯಶಸ್ಸು ಗಳಿಸಬಹುದು ಎಂಬುದನ್ನು ಅವರು ಸಾಧಿಸಿ ತೋರಿಸಿದ್ದಾರೆ. ಆದರೆ ಯಾರಿಗಾದರೂ ಕೋಚಿಂಗ್ ಸಹಕಾರಿ ಎನಿಸಿದರೆ ಖಂಡಿತ ಬಳಸಿಕೊಳ್ಳಬೇಕು ಎಂಬುದು ಅವರ ಸಲಹೆ. ❖

'ನೀಟ್' ದಿಕ್ಸೂಚಿ

ಎಸ್‌ಎಸ್‌ಎಲ್‌ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

Biology

16) The periplaneta belongs to which of this phyla
(a) Echinodermata (b) Annelida
(c) Mollusca (d) Arthropoda
Ans: (d)

17) Match the animals given in column A with their location in Column B.

	Column A		Column B
i	Dodo	a	Africa
ii	Quagga	b	Russia
iii	Thylacine	c	Mauritius
iv	Stellar's sea cow	d	Australia

Choose the correct match-
a) i – a, ii – c, iii – b, iv – d
b) i – d, ii – c, iii – a, iv – b
c) i – c, ii – a, iii – b, iv – d
d) i – c, ii – a, iii – d, iv – b`
Ans:- d

18) Given below are two statements: One is labelled as **Assertion A** and the other is labelled as **Reason R:**
Assertion A: The first stage of gametophyte in the life cycle of moss is protonema stage.
Reason R: Protonema develops directly from spores produced in capsule.
In the light of the above statements, choose the most appropriate answer from the options given below:
a) A is not correct but R is correct.
b) Both A and R are correct and R is the correct explanation of A.
c) Both A and R are correct but R is NOT the correct explanation of A.
d) A is correct but R is not correct.
Ans:- b
Expl^n:- Mosses spores released from the capsule germinate to form the filamentous structure called protonema. It is the first stage of gametophyte.

19) Which of the following is used as an atmospheric pollution indicator?
a) Lepidoptera b) Lichems
c) Lycopersicon d) Lycopodium
Ans:- b

20) Lecithin, a small molecular weight organic compound found in living tissues, is an example of:
a) Amino acids b) Phospholipids
c) Glycerides d) Carbohydrates
Ans (b)
Expln:- The correct answer is option (b). Some lipids have phosphorous and a phosphorylated organic compound in them. These are phospholipids. They are found in cell membrane. Lecithin is one example. Option (c) is incorrect as glycerides are another group of lipids in which both glycerol and fatty acids are present. Option (a) and (d) are incorrect as amino acids and carbohydrates are separate groups of biomolecules.

21) Genes R and Y follow independent assortment. If RRYY produce round yellow seeds and rryy produce wrinkled green seeds, what will be the phenotypic ratio of the F2 generation?
(a) Phenotypic ratio - 9 : 7
(b) Phenotypic ratio - 1 : 2 : 1
(c) Phenotypic ratio - 3 : 1
(d) Phenotypic ratio - 9 : 3 : 3 : 1
Ans:- (d)
Expln:- A classical dihybrid cross performed by Mendel involves. A cross which was made between a pure round yellow seeded pea plant (RRYY) with wrinkled green seeded plant (rryy). Yellow colour is dominant over green and round seed shape over wrinkled seed shape. Phenotypic ratio in F2 generation

9 : 3 : 3 : 1
Round yellow — Round green — Wrinkled yellow — Wrinkled green

22) Given below are two statements :
Statement I : The DNA fragments extracted from gel electrophoresis can be used in construction of recombinant DNA.
Statement II : Smaller size DNA fragments are observed near anode while larger fragments are found near the wells in an agarose gel.
In the light of the above statements, choose the most appropriate answer from the options given below :
(a) Statement I is incorrect but statement II is correct
(b) Both statement I and statement II are correct
(c) Both statement I and statement II are incorrect
(d) Statement I is correct but statement II is incorrect
Ans (b)
Expln:-. The cutting of DNA by restriction endonucleases results in the fragments of DNA. These fragments can be separated by a technique known as gel electrophoresis. The separated bands of DNA are cut out from the agarose gel and extracted from the gel piece. This step is known as elution. The DNA fragments purified in this way are used in constructing rDNA by joining them with cloning vectors.

In gel electrophoresis, the DNA fragments separate (resolve) according to their size through sieving effect provided by the agarose gel. Hence, the smaller the fragment size, the farther it moves from cathode towards anode.

ಸಿಇಟಿ ದಿಕ್ಸೂಚಿ

MATHS

MULTIPLE CHOICE QUESTIONS

27) The area in square units bounded by the normal at (1, 2) to the parabola $y^2 = 4x$, x-axis and the curve is given by
(A) $\frac{10}{3}$ (B) $\frac{7}{3}$
(C) $\frac{4}{3}$ (D) None of these
Ans : (A) $\frac{10}{3}$

(.........Contd)



$y^2 = 4x$

$\therefore 2y\frac{dy}{dx} = 4$ i.e., $\frac{dy}{dx} = \frac{4}{2y} = \frac{2}{y}$

$\left(\frac{dy}{dx}\right)_{(1,2)} = 1 =$ slope of tangent.

$\therefore$ Slope of normal $= -1$.

Equation of normal at (1,2) is $y - 2 = -1(x - 1)$
i.e., $x + y = 3$

x + y = 3

x	3	3
y	0	3

$$\text{Required area} = \int_0^1 \sqrt{4x}\,dx + \int_1^3 (3 - x)\,dx$$
$$= 2\int_0^1 \sqrt{x}\,dx + \left[3x - \frac{x^2}{2}\right]_1^3$$
$$= 2\times\frac{2}{3}[x^{3/2}]_0^1 + \left[9 - \frac{9}{2} - 3 + \frac{1}{2}\right]$$
$$= \frac{4}{3} + 6 - 4 = \frac{10}{3} \text{ sq. units.}$$

28) Area bounded by the y axis, y = cos x, y = sin x when $0 \le x \le \frac{\pi}{2}$ is
(A) $\sqrt{2} - 1$ (B) $2(\sqrt{2} - 1)$
(C) $(\sqrt{2} + 1)$ (D) $\sqrt{2}$
Ans : (A) $\sqrt{2} - 1$
Expln :– The two curves are y = cos x, y = sin x
i.e., $\sin x = \cos x \Rightarrow \tan x = 1 \quad \therefore x = \frac{\pi}{4}$

$\therefore$ The two curves intersect at $x = \frac{\pi}{4}$.

$$\text{Required area} = \int_0^{\pi/4} (\cos x - \sin x)\,dx$$
$$= [\sin x + \cos x]_0^{\pi/4}$$
$$\left(\sin\frac{\pi}{4} + \cos\frac{\pi}{4}\right) - (\sin\theta + \cos\theta)$$
$$= \left(\frac{1}{\sqrt{2}} + \frac{1}{\sqrt{2}}\right) - (0 + 1)$$
$$= \frac{2}{\sqrt{2}} - 1$$
$$= \sqrt{2} - 1$$

29) The area in square units of the region bounded by $y^2 = 9x$ and $y = 3x$ is
(A) 2 (B) $\frac{1}{4}$ (C) $\frac{1}{2}$ (D) 1
Ans : (C) $\frac{1}{2}$
Expln:- Solving $y^2 = 9x$ and $y = 3x$ we get $x = 0$ or 1. $\therefore y = 0$ or 3
i.e., point of intersection of two curves is (1, 3).



$$\text{Required area} = \int_0^1 3\sqrt{x}\,dx - \int_0^1 3x\,dx$$
$$= 3\times\frac{2}{3}[x^{3/2}]_0^1 - 3\left[\frac{x^2}{2}\right]_0^1$$
$$= 2 - \frac{3}{2} = \frac{1}{2}.$$

30) A die has two face each with number '1', three faces each with number '2' and one face with number '3'. If the die is rolled once, then P(1 or 3) is
a) 2/3 b) ½
c) 1/3 d) 1/6
Ans:-b
Expln:-

$p(1) = \frac{2}{6}$ $\Rightarrow p(1 \cup 3) = p(1) + p(3)$

$p(2) = \frac{3}{6}$ $= \frac{2}{6} + \frac{1}{6}$

$p(3) = \frac{1}{6}$ $= \frac{1}{2}$

31) The rate of change of volume of a sphere with respect to itssurface area when theradius is 4 cm is
A) 4 cm^2/cm^2 B) 2 cm^2/cm^2
C) 6 cm^2/cm^2 D) 8 cm^2/cm^2
Ans:-B
Expln:-

Volume of a sphere $V = \frac{4}{3}\pi r^3$

$\frac{dy}{dt} = \frac{4}{3} \times 3r^2 \frac{dr}{dt} = 4\pi r^2 \frac{dr}{dt}$

$S = 4\pi r^2 \therefore \frac{ds}{dt} = 4\pi \times 2r \times \frac{dr}{dt}$

When $r = 4$cm, $\frac{dv}{dt} = 64\pi\frac{dr}{dt}$, $\frac{ds}{dt} = 32\pi\frac{dr}{dt}$

$\therefore \frac{dy}{dt} \Big/ \frac{ds}{dt} = 2cm^2/cm^2$

32) Three dice are rolled once. The chance of getting a score of 5 is............................
(A) $\frac{5}{216}$ (B) $\frac{1}{6}$
(C) $\frac{1}{36}$ (D) $\frac{1}{7^2}$
Ans : (C) $\frac{1}{36}$

ಸದ್ಯಕ್ಕಿಲ್ಲ ಜನನಾಯಗನ್ ಬಿಡುಗಡೆ!

ದಳಪತಿ ವಿಜಯ್

ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ದಳಪತಿ ವಿಜಯ್ ನಟನೆಯ 'ಜನ ನಾಯಗನ್' ಚಿತ್ರ ಈ ವರ್ಷ ಜನವರಿಯಲ್ಲಿಯೇ ತೆರೆ ಕಾಣಬೇಕಿತ್ತು. ಆದರೆ ಸೆನ್ಸಾರ್ ಸಮಸ್ಯೆಯಿಂದಾಗಿ ಚಿತ್ರ ಬಿಡುಗಡೆ ಇನ್ನಷ್ಟು ಮುಂದಕ್ಕೆ ಹೋಗಿದೆ.

'ಯಶ್ ನಟನೆಯ 'ಟಾಕ್ಸಿಕ್' ಚಿತ್ರದ ಬಿಡುಗಡೆ ಬಳಿಕವೇ ಈ ಚಿತ್ರದತ್ತ ಗಮನಹರಿಸಲು ನಿರ್ಮಾಣ ಸಂಸ್ಥೆಯಾದ ಕೆವಿಎನ್ ಪ್ರೊಡಕ್ಷನ್ಸ್ ಆಲೋಚಿಸಿದೆ' ಎಂದು ತಮಿಳು ಮಾಧ್ಯಮಗಳು ವರದಿ ಮಾಡಿವೆ. ಗೀತು ಮೋಹನ್‌ದಾಸ್ ನಿರ್ದೇಶನದ 'ಟಾಕ್ಸಿಕ್' ಜೂ.4ರಂದು ತೆರೆ ಕಾಣಲಿದೆ. ಜುಲೈ ಅಥವಾ ಸೆಪ್ಟೆಂಬರ್‌ನಲ್ಲಿ 'ಜನ ನಾಯಗನ್' ತೆರೆ ಕಾಣಲಿದೆ ಎಂದು ಅಂದಾಜಿಸಲಾಗಿದೆ.

ಚಿತ್ರ ಬಿಡುಗಡೆ ಮುಂದೂಡಿ ಎರಡು ತಿಂಗಳು ಕಳೆದರೂ ಈತನಕ ಸೆನ್ಸಾರ್ ಆಗಿಲ್ಲ. ಸೂಕ್ತ ಕಾರಣವಿಲ್ಲದೆ ಪದೇ ಪದೇ ಚಿತ್ರದ ಸೆನ್ಸಾರ್ ಪ್ರಕ್ರಿಯೆ ಮುಂದಕ್ಕೆ ಹೋಗುತ್ತಿರುವುದು ವಿಜಯ್ ಅಭಿಮಾನಿಗಳಲ್ಲಿ ಆಕ್ರೋಶ ಮೂಡಿಸಿತ್ತು.

ಮಾ.9ರಂದು ಸೆನ್ಸಾರ್ ಮಂಡಳಿ ಚಿತ್ರ ಮರು ವೀಕ್ಷಣೆ ಮಾಡಬೇಕಿತ್ತು. ಮಂಡಳಿ ಸದಸ್ಯರೊಬ್ಬರ ಅನಾರೋಗ್ಯ ಕಾರಣ ನೀಡಿ ಅದು ಮಾ.17ಕ್ಕೆ ಮುಂದಕ್ಕೆ ಹೋಗಿತ್ತು. ಆದರೆ ಈ ಪರಿಷ್ಕೃತ ದಿನಾಂಕದಂದೂ ಸೆನ್ಸಾರ್ ಮಂಡಳಿ ಚಿತ್ರವನ್ನು ವೀಕ್ಷಿಸಿಲ್ಲ. ಅದಕ್ಕೆ ಸೂಕ್ತ ಕಾರಣವನ್ನೂ ನೀಡಿಲ್ಲ.

ಏನಿದು ವಿವಾದ?

ಎಚ್.ವಿನೋತ್ ನಿರ್ದೇಶಿಸಿ, ಅನಿರುದ್ಧ್ ರವಿಚಂದರ್ ಸಂಗೀತ ನೀಡಿರುವ ಈ ಸಿನಿಮಾ ತಮಿಳು ಚಿತ್ರೋದ್ಯಮಕ್ಕೆ ಬಹುನಿರೀಕ್ಷಿತ ಚಿತ್ರ. 2025ರ ಡಿಸೆಂಬರ್‌ನಲ್ಲಿಯೇ ಚಿತ್ರದ ಸೆನ್ಸಾರ್‌ಗೆ ನಿರ್ಮಾಣ ಸಂಸ್ಥೆಯಾದ ಕೆವಿಎನ್ ಪ್ರೊಡಕ್ಷನ್ಸ್ ಅರ್ಜಿ ಸಲ್ಲಿಸಿತ್ತು. ತಮಿಳುನಾಡಿನ ಅತಿದೊಡ್ಡ ಹಬ್ಬವಾದ ಸಂಕ್ರಾಂತಿಗೆ ಸಿನಿಮಾವನ್ನು ತೆರೆಗೆ ತರುವ ಯೋಚನೆ ನಿರ್ಮಾಣ ಸಂಸ್ಥೆಯದ್ದಾಗಿತ್ತು. ಆದರೆ ಸಿನಿಮಾದಲ್ಲಿ ರಾಜಕೀಯ ಅಂಶಗಳು ಮತ್ತು ಸಂಭಾಷಣೆಗಳು ಇರುವುದರಿಂದ ಒಂದಷ್ಟು ದೃಶ್ಯಗಳನ್ನು ಪರಿಷ್ಕರಿಸುವಂತೆ ಸೆನ್ಸಾರ್ ಮಂಡಳಿ ಸೂಚಿಸಿತ್ತು. ಬದಲಾವಣೆ ಬಳಿಕದ ಪರಿಷ್ಕೃತ ಆವೃತ್ತಿಯನ್ನು ವೀಕ್ಷಿಸಲು ಸೆನ್ಸಾರ್ ಮಂಡಳಿ ವಿಳಂಬ ಮಾಡುತ್ತಿದೆ.

'ಲೈಫ್ ಟುಡೇ' ಚಿತ್ರದ ಹಾಡು

ಲೇಖಾ ಚಂದ್ರ

ಬಹುತೇಕ ಹೊಸಬರಿಂದಲೇ ಕೂಡಿರುವ 'ಲೈಫ್ ಟುಡೇ' ಚಿತ್ರದ 'ನೀನೇ ನೀನೇ ನೋಡಲ್ಲಿ' ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕಾಂತ ಕನ್ನಲ್ಲಿ ಆ್ಯಕ್ಷನ್ ಕಟ್ ಹೇಳಿರುವ ಚಿತ್ರ ಶೀಘ್ರದಲ್ಲಿ ತೆರೆಗೆ ಬರಲಿದೆ.

ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ಹಾಡು ಬಿಡುಗಡೆಗೊಂಡಿದ್ದು, ಶ್ರೀಧರ್ ವಿ ಸಂಭ್ರಮ್ ಸಂಗೀತವಿದೆ. ಕವಿರಾಜ್ ಸಾಹಿತ್ಯ ಬರೆದಿದ್ದು, ನಾಯಕ ಕಿರಣ್ ಆದಿತ್ಯ, ನಾಯಕಿ ಲೇಖಾ ಚಂದ್ರ ಈ ಗೀತೆಗೆ ನೃತ್ಯ ಮಾಡಿದ್ದಾರೆ.

'ಸಂಬಂಧಗಳು ಮತ್ತು ಭಾವನೆಗಳು ಇದ್ದಾಗ ಸಿನಿಮಾ ಗೆಲ್ಲುತ್ತದೆ. ಅದೇ ರೀತಿಯ ಕಥಾವಸ್ತು ಹೊಂದಿರುವ ಚಿತ್ರವಿದು. ಇಲ್ಲಿನ ಸನ್ನಿವೇಶಗಳೆಲ್ಲ ಇಂದಿನ ಬದುಕಿನ ಪ್ರತಿಬಿಂಬದಂತಿವೆ. ಚಿತ್ರದ ಬಹುತೇಕ ಕೆಲಸಗಳು ಮುಗಿದಿದ್ದು ಶೀಘ್ರದಲ್ಲಿ ಬಿಡುಗಡೆ ದಿನಾಂಕ ಘೋಷಿಸುತ್ತೇವೆ' ಎಂದರು ನಿರ್ದೇಶಕ.

ಪ್ರದೀಪ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಯುಕ್ತಾ, ಕಾಕ್ರೋಚ್ ಸುಧಿ ಮುಂತಾದವರು ಚಿತ್ರದಲ್ಲಿದ್ದಾರೆ. ಗುರು ಪ್ರಸಾದ್ ಛಾಯಾಚಿತ್ರಗ್ರಹಣವಿದೆ.

'ಇದೊಂದು ಮಹಿಳಾ ಪ್ರಧಾನ ಚಿತ್ರ. ಇದರಲ್ಲಿ ನನ್ನದು ಸಮಾಜಕ್ಕೆ ಸಂದೇಶ ಕೊಡುವ ಪಾತ್ರ. ಚಿತ್ರ ಬಹಳ ಚೆನ್ನಾಗಿ ಮೂಡಿಬಂದಿದೆ. ಅದ್ದೂರಿಯಾಗಿ ಚಿತ್ರ ಬಿಡುಗಡೆ ಮಾಡುವ ಉದ್ದೇಶ ನಿರ್ಮಾಪಕರದ್ದು' ಎಂದರು ಲೇಖಾ ಚಂದ್ರ.

ಹೊರಬಂತು 'ಗ್ಯಾಂಗ್ಸ್ ಆಫ್ ಯುಕೆ' ಟೀಸರ್

ರವಿ ಶ್ರೀವತ್ಸ ನಿರ್ದೇಶನದ 'ಗ್ಯಾಂಗ್ಸ್ ಆಫ್ ಯುಕೆ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. 'ಒರಟ' ಪ್ರಶಾಂತ್ ನಾಯಕನಾಗಿ ನಟಿಸಿರುವ ಚಿತ್ರ ಏ.10ರಂದು ತೆರೆಗೆ ಬರಲಿದೆ.

'ಈ ಕಥೆಯಲ್ಲಿ ಇರುವ ಪಾತ್ರಧಾರಿಗಳು ಇವತ್ತಿಗೂ ಜೀವಂತವಾಗಿದ್ದಾರೆ ಮತ್ತು ವ್ಯವಸ್ಥೆಯ ವಿರುದ್ಧ ರೊಚ್ಚಿಗೆದ್ದಿದ್ದಾರೆ. ಸಮಾಜ, ವ್ಯವಸ್ಥೆ ಮತ್ತು ಆರಕ್ಷಕರು ಇವರ್‍ಯಾರ ಸಹಾಯವಿಲ್ಲದೆ ರಕ್ತಕಣ್ಣೀರು ಹಾಕಿಕೊಂಡು ಸುಮ್ಮನಿದ್ದಾರೆ. ಅವರೆಲ್ಲ ಈ ಗ್ಯಾಂಗ್‌ಗೆ ಹೇಗೆ ಸೇರಿಕೊಂಡರು? ಅದರ ಪರಿಣಾಮವೇನಾಗಿದೆ ಎಂಬುದನ್ನು ಚಿತ್ರದಲ್ಲಿ ಹೇಳಿದ್ದೇವೆ' ಎನ್ನುತ್ತಾರೆ ನಿರ್ದೇಶಕ.

'ಚಿತ್ರದಲ್ಲಿ ಕೇವಲ ಹೊಡೆದಾಟ, ಬಡಿದಾಟಗಳಿಲ್ಲ. ತಾಯಿಯ ಕಣ್ಣೀರನ ಕಥೆಯಿದೆ. ಹೆಣ್ಣಿನ ರಕ್ತಕಣ್ಣೀರಿದೆ. ನಾಯಕ ಧರ್ಮರಾಯನಂತಿದ್ದವನು, ಪರಶುರಾಮನಾಗುತ್ತಾನೆ. ಈ ಚಿತ್ರಕ್ಕೂ ಭೀಮಾತೀರದ ಹಂತಕರ ಕಥೆಗೂ ಸಂಬಂಧವಿಲ್ಲ. ನಮ್ಮಲ್ಲಿ ಕಾಳ, ಅವನ ಮುಗ್ಧ ತಂಗಿ ಕಾಳಿ, ಶಿವಯ್ಯ ಸಾಹುಕಾರ, ಅವನ ಮಾವ ವಿರೂಪಾಕ್ಷ ಸಾಹುಕಾರ, ರುದ್ರೇಶ ಮೊದಲಾದ ಪಾತ್ರಗಳಿವೆ. ಊರಿನ ಒಂದು ಸಣ್ಣ ಗಲಾಟೆ ನಂತರದಲ್ಲಿ ಹೇಗೆ ನಿರಂತರವಾಗಿ ರಕ್ತವನ್ನು ಹರಿಸುತ್ತದೆ ಎಂದು ತೋರಿಸಿದ್ದೇವೆ' ಎಂದು ಅವರು ಚಿತ್ರದ ಬಗ್ಗೆ ಇನ್ನಷ್ಟು ವಿವರ ನೀಡಿದರು.

ಎಂ.ಎಸ್. ರಮೇಶ್ ಚಿಚಿತ್ರಕಥೆ ಮತ್ತು ಸಂಭಾಷಣೆ ಬರೆದಿದ್ದಾರೆ. ಡೆಡ್ಲಿ ಆರ್ಟ್ಸ್ ಸಂಸ್ಥೆ ಬಂಡವಾಳ ಹೂಡಿದೆ. ಮುನಿ, ಪದ್ಮಾ ವಾಸಂತಿ, ಸೋನು ಉಪಾಧ್ಯ, ಪ್ರವೀಣ್, 'ಉಗ್ರಂ' ರೆಡ್ಡಿ ಮುಂತಾದವರು ನಟಿಸಿದ್ದಾರೆ. ಚಿತ್ರಕ್ಕೆ ಆರ್. ಗಿರಿ ಛಾಯಾಚಿತ್ರಗ್ರಹಣವಿದೆ.

ಚಿತ್ರತಂಡ

'ಕೈ' ಕೋಟೆ ವಶಕ್ಕೆ ಕೇಸರಿಪಡೆ ಪಣ

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಕಾಂಗ್ರೆಸ್–ಬಿಜೆಪಿ ನಡುವೆ ನೇರ ಹಣಾಹಣಿ

• ಜಿ.ಬಿ.ನಾಗರಾಜ್

ಪ್ರಜಾಮತ
ಜನತಂತ್ರದ ಹಬ್ಬ
ವಿಧಾನಸಭಾ ಉಪ ಚುನಾವಣೆ - 2026

ಸಮರ್ಥ್

ಶ್ರೀನಿವಾಸ

2,31,132 ಕ್ಷೇತ್ರದಲ್ಲಿರುವ ಒಟ್ಟು ಮತದಾರರು

1,13,399 ಪುರುಷ ಮತದಾರರು

1,17,690 ಮಹಿಳಾ ಮತದಾರರು

43 ಲಿಂಗತ್ವ ಅಲ್ಪಸಂಖ್ಯಾತರು

2023ರ ಚುನಾವಣೆಯ ಫಲಿತಾಂಶ

- ಗೆದ್ದ ಅಭ್ಯರ್ಥಿ– ಶಾಮನೂರು ಶಿವಶಂಕರಪ್ಪ (ಕಾಂಗ್ರೆಸ್), ಪಡೆದ ಮತ– **84,298**
- ಪರಾಜಿತ ಅಭ್ಯರ್ಥಿ– ಬಿ.ಜಿ. ಅಜಯ್‌ಕುಮಾರ್ (ಬಿಜೆಪಿ), ಪಡೆದ ಮತ– **56,410**
- ಗೆಲುವಿನ ಅಂತರ– **27,888**

ಕಣ ಚಿತ್ರಣ

ದಾವಣಗೆರೆ: ಟಿಕೆಟ್ ಕೈತಪ್ಪಿದ ಅಸಮಾಧಾನದಿಂದ ಭುಗಿಲೆದ್ದಿದ್ದ ಮುಸ್ಲಿಂ ಸಮುದಾಯದ ಬಂಡಾಯವನ್ನು ಕಾಂಗ್ರೆಸ್ ಶಮನ ಮಾಡುತ್ತಿದ್ದಂತೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಚಿತ್ರಣ ಬದಲಾಗಿದೆ. ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಪೈಪೋಟಿಗೆ ಅಖಾಡ ಸಜ್ಜಾಗಿದೆ. 'ಕೈ' ಗೆಲುವಿನ ಓಟಕ್ಕೆ ಕಡಿವಾಣ ಹಾಕಲು ಕೇಸರಿಪಡೆ ಶತಪ್ರಯತ್ನ ನಡೆಸುತ್ತಿದೆ.

ಶಾಮನೂರು ಶಿವಶಂಕರಪ್ಪ ನಿಧನದಿಂದ ಎದುರಾಗಿರುವ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಅವರ ಮೊಮ್ಮಗ ಸಮರ್ಥ್ ಶಾಮನೂರು ಅಖಾಡಕ್ಕೆ ಇಳಿದಿದ್ದಾರೆ. ಬಿಜೆಪಿ ಎಸ್‌ಟಿ ಮೋರ್ಚಾ ರಾಜ್ಯ ಘಟಕದ ಉಪಾಧ್ಯಕ್ಷ ಟಿ. ಶ್ರೀನಿವಾಸ ದಾಸಕರಿಯಪ್ಪ ಬಿಜೆಪಿ ಹುರಿಯಾಳು. ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ಕೈತಪ್ಪಿದ ಅಸಮಾಧಾನದಿಂದ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸಾದಿಕ್ ಪೈಲ್ವಾನ್, ಕಣದಿಂದ ನಿವೃತ್ತಿ ಘೋಷಿಸಿ ಸಮರ್ಥ್ ಪರ ನಿಂತಿದ್ದಾರೆ.

ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳಿಗೆ ಇದು ಮೊದಲ ಚುನಾವಣೆ. ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ (ಎಸ್‌ಡಿಪಿಐ) ಅಫ್ಸರ್ ಕೊಡ್ಲಿಪೇಟೆ, ಪಕ್ಷೇತರ ಅಭ್ಯರ್ಥಿ ಖಾದರ್ ಆದಿಲ್ ಬಾಷಾ, ಕಾಂಗ್ರೆಸ್ ಉಚ್ಚಾಟಿತ ಮುಖಂಡ ಎಚ್. ಸುಭಾನ್ ಸಾಬ್ ಸೇರಿದಂತೆ ಇತರ 13 ಮುಸ್ಲಿಂ ಉಮೇದುವಾರರು ಕಣದಲ್ಲಿದ್ದಾರೆ.

ಕ್ಷೇತ್ರದಲ್ಲಿ ಹೆಚ್ಚು ಮತದಾರರನ್ನು ಹೊಂದಿರುವ ಮುಸ್ಲಿಂ ಸಮುದಾಯ ಕಾಂಗ್ರೆಸ್ ಟಿಕೆಟ್‌ಗೆ ಪಟ್ಟು ಹಿಡಿದ ಪರಿಣಾಮ ಅಭ್ಯರ್ಥಿ ಆಯ್ಕೆಯಲ್ಲಿ ಗೊಂದಲಗಳು ಸೃಷ್ಟಿಯಾಗಿದ್ದವು. ಆರಂಭದ ತೊಡಕುಗಳನ್ನು ನಿವಾರಿಸಿಕೊಂಡ ಕಾಂಗ್ರೆಸ್ ಮೈಕೊಡವಿ ಬಿರುಸಿನ ಪ್ರಚಾರದಲ್ಲಿ ತಲ್ಲೀನವಾಗಿದೆ. ಬಣಗಳನ್ನು ಒಗ್ಗೂಡಿಸಿಕೊಂಡಿರುವ ಬಿಜೆಪಿ, ಮತದಾರರ ಮನಗೆಲ್ಲಲು ಕಾರ್ಯತಂತ್ರ ಹೆಣೆದಿದೆ. ಸಾದಿಕ್ ಪೈಲ್ವಾನ್ ಕಣದಿಂದ ಹಿಂದೆ ಸರಿಯುತ್ತಿದ್ದಂತೆ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಸೇರಿ ಇತರರು ಪಕ್ಷೇತರ ಅಭ್ಯರ್ಥಿ ಖಾದರ್ ಆದಿಲ್ ಬಾಷಾ ಬೆನ್ನಿಗೆ ನಿಂತಿದ್ದಾರೆ. 2008ರಲ್ಲಿ ಕ್ಷೇತ್ರ ಪುನರ್ ವಿಂಗಡಣೆಯಾದ ಬಳಿಕ ನಡೆದ ನಾಲ್ಕು ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿದೆ. ಕ್ಷೇತ್ರದಲ್ಲಿ ಬಿಗಿಹಿಡಿತ ಹೊಂದಿದ್ದ ಶಾಮನೂರು ಶಿವಶಂಕರಪ್ಪ ನಿರಂತರವಾಗಿ ಜಯ ಗಳಿಸಿದ್ದರು.

ಶಾಮನೂರು–ಸಿದ್ದೇಶ್ವರ ಕುಟುಂಬಕ್ಕೆ ಪ್ರತಿಷ್ಠೆ

ಪಾರಂಪರಿಕ ಎದುರಾಳಿಗಳಾಗಿರುವ ಕೇಂದ್ರದ ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕುಟುಂಬಕ್ಕೆ ಈ ಚುನಾವಣೆ ಪ್ರತಿಷ್ಠೆಯಾಗಿದೆ.

ಶ್ರೀನಿವಾಸ ದಾಸಕರಿಯಪ್ಪ ಅವರನ್ನು ಗೆಲ್ಲಿಸಿಕೊಳ್ಳುವ ಮೂಲಕ ಶಾಮನೂರು ಕುಟುಂಬಕ್ಕೆ ಎದಿರೇಟು ನೀಡಿ ರಾಜಕೀಯ ಅಸ್ತಿತ್ವ ವಿಸ್ತರಿಸಿಕೊಳ್ಳುವ ಹಂಬಲ ಸಿದ್ದೇಶ್ವರ ಅವರಲ್ಲಿ ಕಾಣುತ್ತಿದೆ. ಅವರು ಪ್ರಮುಖ ಬೆಂಬಲಿಗನಿಗೆ ಟಿಕೆಟ್ ಕೊಡಿಸಿ ಪ್ರಚಾರದ ಮುಂಚೂಣಿಯಲ್ಲಿ ನಿಂತಿದ್ದಾರೆ.

ಕ್ಷೇತ್ರದಲ್ಲಿ ಕುಟುಂಬದ ಪಾರುಪತ್ಯ ಉಳಿಸಿಕೊಳ್ಳಲು ಶಾಮನೂರು ಕುಟುಂಬ ಪ್ರಯತ್ನಿಸುತ್ತಿದೆ. 'ಅಹಿಂದ'ದ ಜೊತೆಗೆ ವೀರಶೈವ ಲಿಂಗಾಯತ ಮತಗಳನ್ನು ಸೆಳೆಯುತ್ತಿದೆ.

ಮುಸ್ಲಿಮರ ಮನಗೆಲ್ಲುವ ಪ್ರಯತ್ನ

'ಮುಸ್ಲಿಮರ ಮತಗಳಿಲ್ಲದೆಯೂ ಗೆಲ್ಲುತ್ತೇವೆ' ಎಂಬುದಾಗಿ ಗಟ್ಟಿಧ್ವನಿಯಲ್ಲಿ ಹೇಳುವ ಬಿಜೆಪಿ ನಾಯಕರು ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ವರಸೆ ಬದಲಿಸಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿರುವ ಮುಸ್ಲಿಮರ ಮನಗೆಲ್ಲಲು 'ಸಬ್ ಕಾ ಸಾತ್ ಸಬ್ ಕಾ ವಿಕಾಸ್' ಮಂತ್ರ ಪಠಿಸುತ್ತಿದ್ದಾರೆ.

ಕ್ಷೇತ್ರ ವ್ಯಾಪ್ತಿಯ 284 ಮತಗಟ್ಟೆಗಳ ಪೈಕಿ 62 ಮತಗಟ್ಟೆಗಳಲ್ಲಿ ಬಿಜೆಪಿಗೆ ಅಸ್ತಿತ್ವವೇ ಇಲ್ಲ. ಕ್ಷೇತ್ರದ ಅಲ್ಪಸಂಖ್ಯಾತರ ಮನೆಬಾಗಿಲಿಗೆ ತೆರಳಿ ಬಿಜೆಪಿ ಮತಯಾಚನೆ ಮಾಡುತ್ತಿದೆ. ಕೋಮುಭಾವನೆ ಕೆರಳಿಸುವ ಮಾತುಗಳು ಪ್ರಚಾರದ ಮುಂಚೂಣಿಯಲ್ಲಿ ಕಾಣುತ್ತಿಲ್ಲ.

ತಾತನ ದಾರಿಯಲ್ಲಿ ಹೆಜ್ಜೆಹಾಕುವ ಉಮೇದು ಸಮರ್ಥ್ ಶಾಮನೂರು ಅವರಲ್ಲಿ ಕಾಣುತ್ತಿದೆ. ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಸಂಸದೆ ಡಾ.ಪ್ರಭಾ ಅವರು ಪುತ್ರನ ಗೆಲುವಿಗೆ ಅವಿರತವಾಗಿ ಶ್ರಮಿಸುತ್ತಿದ್ದಾರೆ.

'1994ರಿಂದ ಕ್ಷೇತ್ರದಲ್ಲಿ ಶಾಂತಿ ಕಾಪಾಡಿದ್ದೇವೆ. ಸೌಹಾರ್ದ ಬದುಕು, ಸಾಮರಸ್ಯವೇ ಆದ್ಯತೆ' ಎಂದು ಕಾಂಗ್ರೆಸ್ ಮತಯಾಚನೆ ಮಾಡುತ್ತಿದೆ. 'ಗ್ಯಾರಂಟಿ' ಯೋಜನೆಗಳೂ ಮತದ 'ಫಲ'ವಾಗಿ ಗೆಲುವಿನ ದಡ ಸೇರಿಸಬಹುದು ಎಂಬ ಲೆಕ್ಕಾಚಾರವೂ ಇದೆ.

ಕಮಲ ಅರಳಿಸಲು ನಿರಂತರವಾಗಿ ಶ್ರಮಿಸಿ ವಿಫಲವಾಗಿರುವ ಬಿಜೆಪಿ, ಉಪ ಚುನಾವಣೆಯಲ್ಲಿ ಕಾರ್ಯತಂತ್ರ ಬದಲಿಸಿದೆ. 'ಇದು ಶ್ರೀಮಂತ (ಶಾಮನೂರು) ಹಾಗೂ ಶ್ರೀಸಾಮಾನ್ಯನ (ಶ್ರೀನಿವಾಸ) ನಡುವಿನ ಚುನಾವಣೆ' ಎಂಬುದನ್ನು ಒತ್ತಿ ಹೇಳುತ್ತಿದೆ. 'ಹಣ, ತೋಳ್ಬಲದ ನಡುವೆ ಸಾಮಾನ್ಯ ಅಭ್ಯರ್ಥಿಯನ್ನು ಬೆಂಬಲಿಸಿ' ಎಂದು ಬಿಜೆಪಿ ಮತಯಾಚನೆ ಮಾಡುತ್ತಿದೆ. ಕ್ಷೇತ್ರವು ಅಭಿವೃದ್ಧಿ ಕಾಣದಿರುವ ವಿಚಾರಗಳನ್ನು ಪ್ರಧಾನವಾಗಿಟ್ಟುಕೊಂಡು ಎಸ್‌ಡಿಪಿಐ ಮತಯಾಚನೆ ಮಾಡುತ್ತಿದೆ.

ವಾಣಿಜ್ಯ: ಪೂರೈಕೆ ಶೇ 68ಕ್ಕೆ

ಒಂದನೇ ಪುಟದಿಂದ...

'ಕೆಲವು ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರ ಹೆಚ್ಚಿಸಿರುವ ವಿಚಾರವೂ ಗಮನಕ್ಕೆ ಬಂದಿದೆ. ಈ ಬಗ್ಗೆಯೂ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಆಸ್ಪತ್ರೆಗಳಿಗೆ ಶೇ 100ರಷ್ಟು, ಹೋಟೆಲ್‌ಗಳಿಗೆ ಶೇ 20ರಷ್ಟು ಎಲ್‌ಪಿಜಿ ಪೂರೈಕೆಯಾಗುತ್ತಿದೆ. ಸಾಧ್ಯವಾದಷ್ಟು ಮಟ್ಟಿಗೆ ಹೋಟೆಲ್‌ಗಳಿಗೂ ಹೆಚ್ಚುವರಿ ವಾಣಿಜ್ಯ ಸಿಲಿಂಡರ್ ಒದಗಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಎಲ್ಲ ವಲಯಗಳಿಗೂ ಯಾವುದೇ ಅಡೆತಡೆಯಿಲ್ಲದೆ ಎಲ್‌ಪಿಜಿ ಪೂರೈಕೆ ಖಚಿತಪಡಿಸಿಕೊಳ್ಳಲು ಪರಿಸ್ಥಿತಿಯ ಮೇಲೆ ನಿರಂತರ ನಿಗಾ ಇರಿಸಲಾಗಿದೆ' ಎಂದು ತಿಳಿಸಿದರು.

ಗಮನಾರ್ಹ ಸುಧಾರಣೆ: 'ಕೇಂದ್ರ ಸರ್ಕಾರದಿಂದ ಹೆಚ್ಚುವರಿ ಸಿಲಿಂಡರ್ ಪೂರೈಕೆ ಆಗುತ್ತಿರುವುದರಿಂದ ರಾಜ್ಯದಲ್ಲಿ ಎಲ್‌ಪಿಜಿ ಪೂರೈಕೆ ಪರಿಸ್ಥಿತಿ ಮುಂದಿನ ದಿನಗಳಲ್ಲಿ ಗಮನಾರ್ಹವಾಗಿ ಸುಧಾರಣೆಯಾಗುವ ನಿರೀಕ್ಷೆ ಇದೆ' ಎಂದು ಮುನಿಯಪ್ಪ ಹೇಳಿದರು.

ಮೊಬೈಲ್ ಮೂಲಕ ಬುಕಿಂಗ್ ಮಾಡಿದವರಿಗೆ ಮನೆ ಬಾಗಿಲಿಗೆ ಸಿಲಿಂಡರ್ ಪೂರೈಕೆ ಮಾಡಲಾಗುವುದು' ಎಂದು ಭರವಸೆ ನೀಡಿದರು.

'ಸಾರ್ವಜನಿಕರು, ಹೋಟೆಲ್ ಮಾಲೀಕರು, ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬಳಕೆದಾರರು ಅನವಶ್ಯವಾಗಿ ಮುಂಗಡ ಬುಕಿಂಗ್ ಮಾಡದೆ ಸರ್ಕಾರದ ಜೊತೆ ಸಹಕರಿಸಬೇಕು. ವಾಣಿಜ್ಯ ಬಳಕೆದಾರರು ಸಾಧ್ಯವಾದಷ್ಟು ಕೊಳವೆ ಮೂಲಕ ನೈಸರ್ಗಿಕ ಅನಿಲ (ಪಿಎನ್‌ಜಿ) ಬಳಕೆ ಮಾಡಬೇಕು' ಎಂದೂ ಮನವಿ ಮಾಡಿದರು.

ಹೊರ್ಮುಜ್ ದಾಟಿದ 2 ಹಡಗು

ಒಂದನೇ ಪುಟದಿಂದ...

ಬಿಡಬ್ಲ್ಯು ಟಿವೈಆರ್ ಹಡಗು ಮಾರ್ಚ್ 31ರಂದು ಮುಂಬೈಗೆ ತಲುಪುವ ನಿರೀಕ್ಷೆ ಇದೆ. ಬಿಡಬ್ಲ್ಯು ಇಎಲ್‌ಎಂ ಹಡಗು ಮಂಗಳೂರಿಗೆ ಏಪ್ರಿಲ್ 1ರಂದು ಬರಬಹುದು ಎಂದು ತಿಳಿಸಿದೆ.

ಇದಕ್ಕೂ ಮೊದಲು, ಭಾರತದ ಧ್ವಜ ಹೊಂದಿರುವ ನಾಲ್ಕು ಹಡಗುಗಳು ಎಲ್‌ಪಿಜಿ ಹೊತ್ತು ಸುರಕ್ಷಿತವಾಗಿ ಹೊರ್ಮುಜ್ ಜಲಸಂಧಿಯನ್ನು ದಾಟಿ, ಭಾರತವನ್ನು ತಲುಪಿವೆ. ಪೈನ್ ಗ್ಯಾಸ್ ಮತ್ತು ಜಗ್ ವಸಂತ್ ಹೆಸರಿನ ಹಡಗುಗಳು 92,612 ಟನ್ ಮತ್ತು ಶಿವಾಲಿಕ್ ಮತ್ತು ನಂದಾದೇವಿ 92,712 ಟನ್ ಎಲ್‌ಪಿಜಿಯನ್ನು ಭಾರತಕ್ಕೆ ತಂದಿವೆ.

'ಕೊರತೆ ಇಲ್ಲ'

'ಆಟೊ ಎಲ್‌ಪಿಜಿಗೆ ಯಾವುದೇ ರೀತಿಯ ಕೊರತೆ ಇಲ್ಲ' ಎಂದು ಆಹಾರ ಇಲಾಖೆಯ ಪ್ರಕಟಣೆ ತಿಳಿಸಿದೆ.

'ಕರ್ನಾಟಕದಾದ್ಯಂತ ಒಟ್ಟು 72 ಆಟೊ ಎಲ್‌ಪಿಜಿ ಡಿಸ್ಪೆನ್ಸಿಂಗ್ ಸ್ಟೇಷನ್‌ಗಳು (ಎಎಲ್‌ಡಿಎಸ್) ಕಾರ್ಯನಿರ್ವಹಿಸುತ್ತಿವೆ. ಈ ಪೈಕಿ, ಬೆಂಗಳೂರು ನಗರವೊಂದರಲ್ಲೇ 31 ಕೇಂದ್ರಗಳಿವೆ. ಎಲ್‌ಪಿಜಿ ಸರಬರಾಜು ವ್ಯವಸ್ಥೆ, ವಿಶೇಷವಾಗಿ ಆಟೊ ಎಲ್‌ಪಿಜಿ ಪೂರೈಕೆಯ ಮೇಲೆ ನಿಗಾ ವಹಿಸಲಾಗಿದೆ' ಎಂದು ಇಲಾಖೆ ತಿಳಿಸಿದೆ.

'ಸಾರ್ವಜನಿಕ ವಲಯದ ಪ್ರಮುಖ ತೈಲ ಮಾರಾಟ ಕಂಪನಿಗಳಾದ ಐಒಸಿಎಲ್, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಮೂಲಕ ಆಟೊ ಎಲ್‌ಪಿಜಿ ಸರಬರಾಜು ಮಾಡಲಾಗುತ್ತಿದೆ. ಈ ಸಂಸ್ಥೆಗಳು ಪ್ರತಿ ಲೀಟರ್‌ಗೆ ₹77.74ರ ದರದಲ್ಲಿ ಆಟೊ ಎಲ್‌ಪಿಜಿ ಪೂರೈಸುತ್ತಿವೆ.

'ಹೆಚ್ಚಿನ ದರಕ್ಕೆ ಮಾರಿದರೆ ಕ್ರಮ'

'ಕೆಲವು ಖಾಸಗಿ ಅನಿಲ ವಿತರಕರು ಸರ್ಕಾರ ನಿಗದಿಪಡಿಸಿದ ದರಕ್ಕಿಂತ ಹೆಚ್ಚು ದರಕ್ಕೆ ಎಲ್‌ಪಿಜಿ ಸಿಲಿಂಡರ್ ಮಾರಾಟ ಮಾಡುತ್ತಿರುವ ಕುರಿತು ದೂರುಗಳು ಬಂದಿವೆ. ಸರ್ಕಾರ ನಿಗದಿಪಡಿಸಿದ ದರದಲ್ಲೇ ಸಿಲಿಂಡರ್ ವಿತರಿಸಬೇಕೆಂದು ಈಗಾಗಲೇ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ' ಎಂದು ಮುನಿಯಪ್ಪ ಹೇಳಿದರು.

'ಹೆಚ್ಚು ದರ ವಸೂಲಿ ಮಾಡಿ ಕಾಳಸಂತೆಯಲ್ಲಿ ಗೃಹ ಬಳಕೆ, ವಾಣಿಜ್ಯ ಬಳಕೆ, ಆಟೊ ಎಲ್‌ಪಿಜಿಗಳನ್ನು ಮಾರಾಟ ಮಾಡುವುದು ಕಂಡುಬಂದರೆ, ಅಂತಹ ವಿತರಕರ ಪರವಾನಗಿ ರದ್ದುಗೊಳಿಸುವುದು ಸೇರಿದಂತೆ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ಕಾಳಸಂತೆಯಲ್ಲಿ ಸಿಲಿಂಡರ್‌ಗಳ ಮಾರಾಟ ತಡೆಯಲು ದಾಳಿಗಳನ್ನು ಹೆಚ್ಚಿಸಲಾಗಿದೆ' ಎಂದು ತಿಳಿಸಿದರು.

ದಾವಣಗೆರೆ: ಮಲ್ಲಿಕಾರ್ಜುನ್ ಮಾತಿಗೆ ಜಮೀರ್ ಸಿಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಚುನಾವಣೆ ನಡೆಯಲಿರುವ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಶಾಮನೂರು ಅವರ ತಂದೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ನಡೆಗೆ ವಸತಿ ಸಚಿವ ಜಮೀರ್ ಅಹಮದ್ ಅವರು ತೀವ್ರ ಅಸಮಾಧಾನ ಹೊರಹಾಕಿದ್ದಾರೆ.

ಕೇರಳದಲ್ಲಿ ಚುನಾವಣಾ ಪ್ರಚಾರದಲ್ಲಿರುವ ಜಮೀರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕರೆ ಮಾಡಿ ತಮ್ಮ ಅಸಮಾಧಾನವನ್ನು ತೋಡಿಕೊಂಡಿದ್ದಾರೆ ಎಂದು ಹೇಳಲಾಗಿದೆ.

'ಕ್ಷೇತ್ರದಲ್ಲಿ ಪ್ರಚಾರಕ್ಕೆ ಜಮೀರ್ ಬಾರದೇ ಇದ್ದರೂ ನಡೆಯುತ್ತೆ' ಎಂದು ಮಲ್ಲಿಕಾರ್ಜುನ್ ಹೇಳಿಕೆ ನೀಡಿದ್ದರು. ಈ ಬಗ್ಗೆ ಸಿದ್ದರಾಮಯ್ಯ ಜತೆ ಮಾತನಾಡಿರುವ ಜಮೀರ್, 'ನನ್ನ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ, ಅಲ್ಲಿಗೆ ಪ್ರಚಾರಕ್ಕೆ ಹೋಗಬೇಕೇ' ಎಂದು ಕೇಳಿದ್ದಾಗಿ ಗೊತ್ತಾಗಿದೆ.

ಮುಖ್ಯಮಂತ್ರಿ ಜೊತೆ ಏಪ್ರಿಲ್ 3ರಿಂದ ಸಮರ್ಥ್ ಪರವಾಗಿ ಚುನಾವಣಾ ಪ್ರಚಾರಕ್ಕೆ ತೆರಳಲು ಜಮೀರ್ ಮುಂದಾಗಿದ್ದರು. ಆದರೆ, ಜಮೀರ್ ಬರದೇ ಇದ್ದರೂ ಪರವಾಗಿಲ್ಲ ಎಂದು ಮಲ್ಲಿಕಾರ್ಜುನ್ ಹೇಳಿರುವುದು ಅವರನ್ನು ಕೆರಳಿಸಿದೆ. ಚುನಾವಣೆ ಘೋಷಣೆಗೂ ಮೊದಲೇ ಅವನಿಗೂ (ಜಮೀರ್) ದಾವಣಗೆರೆಗೂ ಏನು ಸಂಬಂಧ ಎಂದು ಏಕವಚನದಲ್ಲೇ ಜಮೀರ್ ವಿರುದ್ಧ ಮಲ್ಲಿಕಾರ್ಜುನ್ ಕಿಡಿಕಾರಿದ್ದರು.

ಈ ಬಗ್ಗೆ ಮುಖ್ಯಮಂತ್ರಿಯ ಮುಂದೆ ನೇರವಾಗಿಯೇ ತಮ್ಮ ಅತೃಪ್ತಿ ವ್ಯಕ್ತಪಡಿಸಿರುವ ಜಮೀರ್, 'ನಾನೂ ನಿಮ್ಮ ಜೊತೆಗೆ ಚುನಾವಣಾ ಪ್ರಚಾರಕ್ಕೆ ಬರುತ್ತಿದ್ದೆ. ಆದರೆ, ಮಲ್ಲಿಕಾರ್ಜುನ್ ಅವರ ಮಾತುಗಳಿಂದ ಸ್ವಾಭಿಮಾನದ ಪ್ರಶ್ನೆ ಎದುರಾಗಿದೆ. ಅವರು ನನ್ನ ಬಗ್ಗೆ ಹೀಗೆ ಮಾತನಾಡಿದರೆ ಪ್ರಚಾರಕ್ಕೆ ಬರುವುದಾದರೂ ಹೇಗೆ? ನಮಗೂ ಸ್ವಾಭಿಮಾನ ಇಲ್ಲವೇ' ಎಂದು ಹೇಳಿದ್ದಾಗಿ ಎಂದು ತಿಳಿದುಬಂದಿದೆ.

ಲ್ಯಾಬ್ ಟೆಕ್ನೀಷಿಯನ್ ನೇಮಕಕ್ಕೆ ಕ್ರಮ'

ಒಂದನೇ ಪುಟದಿಂದ...

'ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ, ಅಗ್ನಿ ಶಾಮಕ ಇಲಾಖೆ, ಸ್ಥಳೀಯ ಸಂಸ್ಥೆಗಳ ತ್ಯಾಜ್ಯ ನಿರ್ವಹಣಾ ಘಟಕ ರೂಪಿಸಿರುವ ಮಾನದಂಡಗಳಿಂದ ಪ್ರಯೋಗಾಲಯಗಳನ್ನು ಆರಂಭಿಸಲು ಅಡ್ಡಿಯಾಗುತ್ತಿದ್ದು, ನಿಯಮ ಸರಳೀಕರಣ ಮಾಡಬೇಕೆಂಬ ಬೇಡಿಕೆ ಪರಿಶೀಲಿಸಲಾಗುವುದು. ಪ್ರಯೋಗಾಲಯಗಳಲ್ಲಿ ಕೆಲಸ ಮಾಡುವವರ ವೇತನವನ್ನು ಕಾರ್ಮಿಕ ನಿಯಮಾವಳಿಗೆ ಅನುಗುಣವಾಗಿ ಮಾಸಿಕ ₹18,225ರಿಂದ ₹25 ಸಾವಿರಕ್ಕೆ ಹೆಚ್ಚಿಸಲು ಗಮನಹರಿಸಲಾಗುವುದು' ಎಂದರು. ಅಸೋಸಿಯೇಷನ್ ಅಧ್ಯಕ್ಷ ವಿ.ವೆಂಕಟಸ್ವಾಮಿ ಅವರು 17 ಬೇಡಿಕೆಗಳ ಪಟ್ಟಿಯನ್ನು ಸಚಿವರಿಗೆ ಸಲ್ಲಿಸಿದರು.



ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಗೆಲ್ಲುತ್ತೇನೆ ಎಂದು ಬಂದವನು ಸೋಲುವುದಕ್ಕೂ ಸಿದ್ಧನಾಗಿರಬೇಕು.
–ತರಾಸು

ಸಂಪಾದಕೀಯ

ತೃತೀಯ ಭಾಷೆ ಹೊರೆ ಹಗುರ ಸ್ವಾಗತಾರ್ಹ, ಎಚ್ಚರವೂ ಅಗತ್ಯ

ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷಾ ವಿಷಯಗಳಿಗೆ ಅಂಕ ನೀಡುವ ಪದ್ಧತಿಯನ್ನು ಕೈಬಿಡುವ ಶಾಲಾ ಶಿಕ್ಷಣ ಇಲಾಖೆಯ ನಿರ್ಧಾರ, ಹತ್ತನೇ ತರಗತಿಯ ವಿದ್ಯಾರ್ಥಿಗಳ ಮೇಲಿನ ಹೊರೆಯನ್ನು ತಗ್ಗಿಸುವ ಮಹತ್ವದ ಕ್ರಮವಾಗಿದೆ. ಮೂರನೇ ಭಾಷೆಗೆ ಅಂಕಗಳ ಬದಲು ಗ್ರೇಡ್ ನೀಡುವ ಹೊಸ ಪದ್ಧತಿಯನ್ನು 2026ರ ಪರೀಕ್ಷೆಯಿಂದಲೇ ಅನ್ವಯವಾಗುವಂತೆ ಜಾರಿಗೆ ತರಲು ಇಲಾಖೆ ನಿರ್ಧರಿಸಿದೆ. ಈ ಹಿಂದಿನಂತೆ ಹೊಸ ಪದ್ಧತಿಯಲ್ಲೂ ವಿದ್ಯಾರ್ಥಿಗಳು 625 ಅಂಕಗಳಿಗೆ ಪರೀಕ್ಷೆ ಬರೆಯಲಿದ್ದಾರೆ. ಆದರೆ, ತೃತೀಯ ಭಾಷೆಯ ಫಲಿತಾಂಶ ಗ್ರೇಡಿಂಗ್‌ಗಷ್ಟೇ ಸೀಮಿತಗೊಳ್ಳುವುದರಿಂದ, ಶೇಕಡವಾರು ನಿರ್ಧರಿಸಲು 525 ಅಂಕಗಳನ್ನಷ್ಟೇ ಪರಿಗಣಿಸಲಾಗುತ್ತದೆ. ಕನ್ನಡಪರ ಸಂಘಟನೆಗಳು ಮತ್ತು ಚಿಂತಕರ ಒತ್ತಾಯದ ಮೇರೆಗೆ ಈ ಬದಲಾವಣೆ ಮಾಡಿರುವುದಾಗಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. 2025ರ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಸುಮಾರು 1.48 ಲಕ್ಷ ವಿದ್ಯಾರ್ಥಿಗಳು ಹಿಂದಿ ವಿಷಯದಲ್ಲಿ ಅನುತ್ತೀರ್ಣರಾಗಿದ್ದರು, 2024ರಲ್ಲೂ ಹಿಂದಿಯಲ್ಲಿ ಫೇಲಾದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರು. ಮಕ್ಕಳ ಪಾಲಿಗೆ ಹಿಂದಿ ಹೇರಿಕೆ ಮಾರಕವಾಗುತ್ತಿದೆ ಎನ್ನುವ ಆತಂಕ ಕನ್ನಡ ಸಂಘಟನೆಗಳಿಂದ ವ್ಯಕ್ತವಾಗಿತ್ತು. ಆ ಆತಂಕಕ್ಕೆ ಸ್ಪಂದಿಸಿರುವ ಸರ್ಕಾರ, ತೃತೀಯ ಭಾಷೆಯಲ್ಲಿ ಪಡೆಯುವ ಅಂಕಗಳನ್ನು ಫಲಿತಾಂಶದಿಂದ ಹೊರಗಿಡಲು ತೀರ್ಮಾನಿಸಿದೆ. ಇದರಿಂದಾಗಿ, ವಿದ್ಯಾರ್ಥಿಗಳ ಮೇಲಿನ ಮಾನಸಿಕ ಒತ್ತಡ ಕಡಿಮೆ ಆಗಲಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳ ಮಕ್ಕಳ ಮೇಲಿನ ದೊಡ್ಡದೊಂದು ಹೊರೆ ಇಳಿದಂತಾಗುತ್ತದೆ.

ಹಿಂದಿ ವಿಷಯದಲ್ಲಿನ ಅಂಕಗಳನ್ನು ಎಸ್ಎಸ್ಎಲ್‌ಸಿ ಪರೀಕ್ಷಾ ಫಲಿತಾಂಶಕ್ಕೆ ಪರಿಗಣಿಸದಿರುವ ಸರ್ಕಾರದ ನಿರ್ಧಾರ ಸಮಯೋಚಿತ. ಇದರಿಂದ ಲಕ್ಷಾಂತರ ಗ್ರಾಮೀಣ ಮಕ್ಕಳಿಗೆ ಅನುಕೂಲ ಆಗಲಿದೆ.

ತೃತೀಯ ಭಾಷೆಯಾಗಿ ಹಿಂದಿಯ ಮಹತ್ವವನ್ನು ಕುಗ್ಗಿಸುವ ಸರ್ಕಾರದ ನಿರ್ಧಾರವನ್ನು ದ್ವಿಭಾಷಾ ಸೂತ್ರದತ್ತ ಸಾಗುವ ದಾರಿಯಲ್ಲಿನ ಮಹತ್ವದ ಹೆಜ್ಜೆಯ ರೂಪದಲ್ಲಿಯೂ ಗುರ್ತಿಸಲಾಗುತ್ತಿದೆ. ರಾಜ್ಯದಲ್ಲಿ ದ್ವಿಭಾಷಾ ನೀತಿಯನ್ನು ಇನ್ನೂ ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರೂ, ದ್ವಿಭಾಷಾ ನೀತಿಯ ಭಾಗವಾಗಿಯೇ ಎಸ್ಎಸ್ಎಲ್‌ಸಿಯಲ್ಲಿ ಹಿಂದಿ ವಿಷಯದ ಅಂಕಗಳನ್ನು ಫಲಿತಾಂಶಕ್ಕೆ ಪರಿಗಣಿಸದಿರಲು ನಿರ್ಧರಿಸಲಾಗಿದೆ ಎಂದು ಮಧು ಬಂಗಾರಪ್ಪ ಹೇಳಿದ್ದಾರೆ. ಸರ್ಕಾರದ ನಿರ್ಧಾರವನ್ನು ಬಿಜೆಪಿ ನಾಯಕರು ಕಟುವಾಗಿ ಟೀಕಿಸಿದ್ದಾರೆ. ಯಾವುದೇ ಶೈಕ್ಷಣಿಕ ದೃಷ್ಟಿಕೋನವಿಲ್ಲದ, ರಾಜಕೀಯಪ್ರೇರಿತ ನಿರ್ಧಾರ ಇದಾಗಿದೆ ಎನ್ನುವ ಟೀಕೆಗಳು ವ್ಯಕ್ತವಾಗಿವೆ. ಎಸ್ಎಸ್ಎಲ್‌ಸಿ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲೇ ಮಹತ್ವದ ಬದಲಾವಣೆಯನ್ನು ತಂದಿರುವ ಸರ್ಕಾರದ ಕ್ರಮ, ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರಲಿದೆ ಎನ್ನುವ ಅಭಿಪ್ರಾಯಗಳೂ ಇವೆ. ಹಿಂದಿಯನ್ನು ನಗಣ್ಯಗೊಳಿಸಿರುವ ಕ್ರಮ ವಿದ್ಯಾರ್ಥಿಗಳ ಬಹುಭಾಷಾ ಸಾಮರ್ಥ್ಯ ಹಾಗೂ ರಾಷ್ಟ್ರೀಯ ಏಕತೆಯ ಮೇಲೆ ಪರಿಣಾಮ ಬೀರಲಿದೆ ಎನ್ನುವ ವಿಶ್ಲೇಷಣೆಗಳೂ ಇವೆ. ಪರೀಕ್ಷೆಗಳು ಆರಂಭವಾಗುವವರೆಗೂ ಕಾಯುವ ಬದಲು, ಪರೀಕ್ಷೆಗೆ ಸಾಕಷ್ಟು ಮುಂಚಿತವಾಗಿ ಸರ್ಕಾರ ತೀರ್ಮಾನ ಕೈಗೊಳ್ಳಬಹುದಾಗಿತ್ತು. ಇಲ್ಲವೇ ಮುಂದಿನ ಶೈಕ್ಷಣಿಕ ವರ್ಷದಿಂದ ಹೊಸ ಪದ್ಧತಿಯನ್ನು ಜಾರಿಗೊಳಿಸಬಹುದಿತ್ತು ಎನ್ನುವುದು ಒಪ್ಪಬಹುದಾದ ಮಾತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಹಿಂದಿ ವಿಷಯದಲ್ಲಿ ಅನುತ್ತೀರ್ಣರಾಗುತ್ತಿರುವ ಮಕ್ಕಳ ದೊಡ್ಡ ಸಂಖ್ಯೆಯನ್ನು ಗಮನಿಸಿದರೆ, ಸರ್ಕಾರದ ನಿರ್ಧಾರ ವಿಳಂಬವಾದರೂ ಸಮಯೋಚಿತ ಎಂದು ಭಾವಿಸಬೇಕಾಗಿದೆ.

ಸಾವಿರಾರು ಮಕ್ಕಳು ಅನುತ್ತೀರ್ಣರಾಗುವುದನ್ನು ತಪ್ಪಿಸುವ ನಿರ್ಧಾರಕ್ಕೆ ಶೈಕ್ಷಣಿಕ ಹಾಗೂ ಸಾಮಾಜಿಕ ಮಹತ್ವವಿದೆ. ಹಿಂದಿ ಭಾಷೆಯು ರಾಷ್ಟ್ರೀಯ ಏಕತೆಗೆ ಪೂರಕ ಎನ್ನುವ ಮಾತಿನಲ್ಲಿಯೂ ಅರ್ಧ ಸತ್ಯವಷ್ಟೇ ಇದೆ. ಹಿಂದಿಯಷ್ಟೇ ಎಲ್ಲ, ಎಲ್ಲ ಭಾರತೀಯ ಭಾಷೆಗಳೂ ಏಕತೆಗೆ ಪೂರಕವೇ. ಆದರೆ, ರಾಷ್ಟ್ರೀಯ ಸಂದರ್ಭದಲ್ಲಿ ಹಿಂದಿಯನ್ನು ಹೊರತುಪಡಿಸಿ ಕನ್ನಡವೂ ಸೇರಿದಂತೆ ಯಾವ ಭಾರತೀಯ ಭಾಷೆಯ ಪ್ರಸ್ತಾಪವೂ ಆಗುವುದಿಲ್ಲ. ಸ್ಥಳೀಯ ಭಾಷೆಗಳ ಮೇಲೆ ಪ್ರಾಬಲ್ಯ ಸಾಧಿಸುವ ಉದ್ದೇಶದ ಹಿಂದಿ ಹೇರಿಕೆಯು ರಾಜಕೀಯ ಹುನ್ನಾರದ ರೂಪದಲ್ಲಿ ದಶಕಗಳಿಂದಲೂ ವ್ಯವಸ್ಥಿತವಾಗಿ ನಡೆಯುತ್ತಿದೆ. ಹಾಗಾಗಿ, ಭಾಷಾ ದಬ್ಬಾಳಿಕೆಯ ಪ್ರತಿರೋಧದ ಕ್ರಮವಾಗಿಯೂ ಹಿಂದಿ ಭಾಷಾ ಅಂಕಗಳನ್ನು ಫಲಿತಾಂಶಕ್ಕೆ ಪರಿಗಣಿಸದಿರುವ ನಿರ್ಧಾರವನ್ನು ಗಮನಿಸಬಹುದಾಗಿದೆ. ಆದರೆ, ಕನ್ನಡದ ಸಮಗ್ರ ಬೆಳವಣಿಗೆಯ ದೃಷ್ಟಿಯಿಂದ ಗಮನಿಸಿದರೆ, ತೃತೀಯ ಭಾಷೆಯ ಅಂಕಗಳನ್ನು ಫಲಿತಾಂಶಕ್ಕೆ ಪರಿಗಣಿಸದಿರುವ ನಿರ್ಧಾರ ಸಮಸ್ಯಾತ್ಮಕವೂ ಹೌದು. ಪ್ರಸ್ತುತ ಔಪಚಾರಿಕವಾಗಿಯಷ್ಟೇ ತೃತೀಯ ಭಾಷೆಯ ರೂಪದಲ್ಲಿ ಕನ್ನಡವನ್ನು ಉಳಿಸಿಕೊಂಡಿರುವ ಖಾಸಗಿ ಶಾಲೆಗಳು, ಇನ್ನುಮುಂದೆ ಕನ್ನಡವನ್ನು ಮತ್ತಷ್ಟು ನಿರ್ಲಕ್ಷಿಸುವ ಸಾಧ್ಯತೆಯಿದೆ. ಹಾಗಾದಲ್ಲಿ, ಕನ್ನಡದ ಮಕ್ಕಳನ್ನು ಕನ್ನಡದಿಂದ ದೂರವಾಗಲು ಅವಕಾಶ ಕಲ್ಪಿಸಿದಂತಾಗುತ್ತದೆ. ಅದನ್ನು ತಪ್ಪಿಸುವುದಕ್ಕಾಗಿ, ಮುಂದಿನ ಶೈಕ್ಷಣಿಕ ವರ್ಷದಿಂದ ಭಾಷಾನೀತಿಯನ್ನು ಸರ್ಕಾರ ಪರಿಷ್ಕರಿಸುವುದು ಅಗತ್ಯ. ತೃತೀಯ ಭಾಷೆಯ ಬದಲು, ಪ್ರಥಮ ಇಲ್ಲವೇ ದ್ವಿತೀಯ ಭಾಷೆಯನ್ನಾಗಿ ಕನ್ನಡ ಕಲಿಯುವುದನ್ನು ಸರ್ಕಾರ ಕಡ್ಡಾಯಗೊಳಿಸಬೇಕಾಗಿದೆ. ಅದಾಗದೆ ಹೋದರೆ, ಕನ್ನಡದ ಹಿತಾಸಕ್ತಿಯ ಹೆಸರಿನ ಪ್ರಯತ್ನ ಕನ್ನಡವನ್ನೇ ಬಡವಾಗಿಸಲು ಕಾರಣವಾಗಬಹುದು.

ಜಾಲಡಿ

ಕನ್ನಡ ಕಟ್ಟುವುದು ಹೇಗೆ?

ನಮಗೆ ಸ್ವಾಭಿಮಾನ ಬಾರದ ಹೊರತು ಕನ್ನಡಕ್ಕೆ ಸ್ವಾತಂತ್ರ್ಯವಿಲ್ಲ. ನಮ್ಮ ಭಾಷೆ, ನಮ್ಮ ನೆಲ, ನಮ್ಮ ನಾಡು ಎಂಬ ಭಾವನೆ ಹುಟ್ಟದೇ, ಕನ್ನಡ ಕಟ್ಟುವುದಾದರೂ ಹೇಗೆ? ಈಗಾಗಲೇ ಎಲ್ಲವೂ ಹಿಂದಿ, ಇಂಗ್ಲಿಷ್‌ಮಯ ಆಗಿರುವಾಗ!

ಸೂರ್ಯಕೀರ್ತಿ, ಕವಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಕೇಂದ್ರ ಹಾಗೂ ರಾಜ್ಯಗಳ ನಡುವಣ ಸಂಬಂಧವು ಡಬ್ಬಾ ಅಂಗಡಿಯ ವ್ಯಾಪಾರವಲ್ಲ; ಅಲ್ಲೊಂದು ವ್ಯವಸ್ಥೆಯಿದೆ. ಅದರ ಪ್ರಕಾರ, ರಾಜ್ಯಕ್ಕಾದ ಅನ್ಯಾಯದ ಬಗ್ಗೆ ಕೇಂದ್ರಕ್ಕೆ ಮನವರಿಕೆ ಮಾಡಿಕೊಡಬೇಕು. ಲವ್ ಲೆಟರ್ (ಕೇಂದ್ರಕ್ಕೆ ಪತ್ರ) ಬರೆದರೆ ಸಮಸ್ಯೆ ಬಗೆಹರಿಯುತ್ತದೆಯೆ?

ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 30-3-2001

• ಪುಸ್ತಕ ತೆರಿಗೆ: ಉಭಯ ಸದನಗಳಲ್ಲಿ ವಿರೋಧ

ಬೆಂಗಳೂರು, ಮಾರ್ಚ್ 29– ಪುಸ್ತಕಗಳ ಮೇಲೆ ಶೇ 4ರಷ್ಟು ಮಾರಾಟ ತೆರಿಗೆ ವಿಧಿಸಿರುವ ಸರ್ಕಾರದ ನಿರ್ಣಯ ಇಂದು ವಿಧಾನ ಮಂಡಲದ ಉಭಯ ಸದನಗಳಲ್ಲಿ ಪ್ರತಿಧ್ವನಿಸಿ, ವಿರೋಧ ಪಕ್ಷಗಳು ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡವು. ಈ ತೆರಿಗೆಯನ್ನು ಹಿಂತೆಗೆದುಕೊಳ್ಳುವಂತೆ ವಿರೋಧ ಪಕ್ಷದ ಸದಸ್ಯರು ಸರ್ಕಾರವನ್ನು ಆಗ್ರಹಪಡಿಸಿದರು.

'ಜಾಸ್ತಿ ಕುಡಿಯಿರಿ, ಕಡಿಮೆ ಓದಿ' ಎಂಬ ಧೋರಣೆಯನ್ನು ಸರ್ಕಾರ ಅನುಸರಿಸುತ್ತಿದೆ ಎಂದು ವಿಧಾನ ಪರಿಷತ್ತಿನಲ್ಲಿ ವಿರೋಧ ಪಕ್ಷಗಳ ಸದಸ್ಯರು ತರಾಟೆಗೆ ತೆಗೆದುಕೊಂಡರು.

75 ವರ್ಷಗಳ ಹಿಂದೆ

ಶುಕ್ರವಾರ, 30-3-1951

• ಗಂಗಾಜಲ ತರುವುದು ಮರಣೋನ್ಮುಖರಿಗೆ!

ನವದೆಹಲಿ, ಮಾರ್ಚ್ 29– ದೆಹಲಿಗೆ ಗಂಗಾಜಲವನ್ನು ತಂದುದರ ಅರ್ಥದ ಬಗ್ಗೆ ಪಾರ್ಲಿಮೆಂಟಿನಲ್ಲಿ ಈ ದಿನ ಎಚ್.ವಿ. ಕಾಮತರಿಗೂ, ಸಚಿವ ಗಾಡ್ಗಿಲರಿಗೂ ಹಾಸ್ಯಪೂರ್ಣ ಪ್ರಶ್ನೋತ್ತರ ನಡೆಯಿತು.

ಗಾಡ್ಗಿಲರ ಶಾಖೆಯ ಬೇಡಿಕೆಗಳ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಕಾಮತರು, 'ದೆಹಲಿಗೆ ಗಂಗಾಜಲ ತಂದುದಾಗಿ ಗಾಡ್ಗಿಲರು ಜಂಬಕೊಚ್ಚಿಕೊಳ್ಳುತ್ತಾರೆ. ಆದರೆ, ಗಂಗಾಜಲ ತರುವುದು ಯಾವಾಗಲೂ ಸಂತೋಷದ ವಿಷಯವಲ್ಲ. ಹಿಂದೂಗಳಲ್ಲಿ ಯಾರಾದರೂ ಮರಣೋನ್ಮುಖರಾಗಿದ್ದಾಗ ಗಂಗಾಜಲವನ್ನು ತರುತ್ತಾರೆ. ಗಾಡ್ಗಿಲರು ದೆಹಲಿಗೆ ಗಂಗಾಜಲ ತಂದಿರುವುದರಿಂದ ದೆಹಲಿಗೆ ಆ ಸ್ಥಿತಿ ಬಾರದಿರಲೆಂದು ನನ್ನ ಆಶಯ' ಎಂದರು.

ಇವ ನಮ್ಮವ: ಚಾರಿತ್ರಿಕ ಹೆಜ್ಜೆ

ವಿಶ್ಲೇಷಣೆ

ನಟರಾಜ್ ಹುಳಿಯಾರ್

ಅಂತರ್ಜಾತಿ ವಿವಾಹಿತರಿಗೆ ರಕ್ಷಣೆ ಒದಗಿಸುವ 'ಇವ ನಮ್ಮವ' ಮಸೂದೆ, 'ಕನ್ನಡ ವಿವೇಕ' ಪರಂಪರೆಯ ಭಾಗವಾದ ಬಹುತ್ವವನ್ನು ದೇಶಕ್ಕೆ ಮತ್ತೊಮ್ಮೆ ಪರಿಚಯಿಸುತ್ತಿದೆ. ಇದು ಕಾಯ್ದೆಯಾಗಿ ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಲ್ಲಿ ಜಾತಿವ್ಯಸನದ ರಾಡಿಯನ್ನು ಕೊಂಚವಾದರೂ ತಿಳಿಯಾಗಿಸಬಲ್ಲದು.

ಮಾರ್ಚ್ 23, 2026. ಬಸವಣ್ಣನವರ 'ಇವ ನಮ್ಮವ' ಎಂಬ ಸರ್ವಸ್ವೀಕಾರದ ರೂಪಕ ಕರ್ನಾಟಕ ವಿಧಾನಸಭೆಯಲ್ಲಿ ಅಂಗೀಕಾರವಾದ ದಿನ. ಅದು ಅಂತರ್ಜಾತೀಯ ವಿವಾಹವು ಜಾತಿನಿರ್ಮೂಲನದ ಪ್ರಬಲ ಸಾಧನ ಎಂದು ಪ್ರತಿಪಾದಿಸಿದ್ದ ರಾಮಮನೋಹರ ಲೋಹಿಯಾರ ಜನ್ಮ ದಿನ ಕೂಡ. ಅಂಬೇಡ್ಕರ್ ಕೂಡ ಇದೇ ಮಾರ್ಗವನ್ನು ಸೂಚಿಸಿದ್ದರು. ವಚನಯುಗದ ಆದರ್ಶ ನುಡಿಯನ್ನೇ ಮಸೂದೆಯ ಹೆಸರನ್ನಾಗಿಸುವ ಮೂಲಕ ಕಾನೂನು–ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಅವರು ಜಾಣ, ತಾತ್ತ್ವಿಕ ಹೆಜ್ಜೆಯನ್ನಿಟ್ಟಿದ್ದರು!

'ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿರುವ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ವಿಧೇಯಕ–2026' ಒಳಗೊಂಡ ಕಾಳಜಿಗಳು ಪಕ್ಷಾತೀತವಾಗಿ ಎಲ್ಲರಿಗೂ ಒಪ್ಪಿಗೆಯಾಗುವಂತಿದ್ದವು. ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ನೋಡುವುದಕ್ಕೂ ಸಾಧ್ಯ ಇಲ್ಲದ ಘನಘೋರ ಮರ್ಯಾದೆಗೇಡು ಹತ್ಯೆಗಳು ನಡೆಯುತ್ತಿರುವುದನ್ನು ನೋಡಿದ್ದೇವೆ. ಬೆಳಗ್ಗೆ ಎದ್ದು ಪತ್ರಿಕೆಯಲ್ಲಿ ಕರುಳು ಹಿಂಡುವಂಥ ಘಟನೆ ನೋಡುತ್ತಿದ್ದೇವೆ' ಎನ್ನುತ್ತಾ ಮಸೂದೆಯನ್ನು ಒಪ್ಪಿದ್ದರು. ಮಸೂದೆಯಲ್ಲಿದ್ದ ಒಂದೆರಡು ಪದಗಳ ಬಗ್ಗೆ ಸುರೇಶ್ ಕುಮಾರ್ ಸೂಚಿಸಿದ ತಿದ್ದುಪಡಿಯನ್ನು ಸಚಿವರು ಒಪ್ಪಿಕೊಂಡರು. ಪಾಟೀಲರ ಜೊತೆಗೆ, ಪ್ರಿಯಾಂಕ್ ಖರ್ಗೆ, ಕೃಷ್ಣ ಭೈರೇಗೌಡ, ಎಚ್.ಸಿ.ಮಹದೇವಪ್ಪ ಹಾಗೂ ಕಾಳಜಿಯುಳ್ಳ ಅಧಿಕಾರಿಗಳು ಮಸೂದೆಯ ಹಿಂದೆ ಕೆಲಸ ಮಾಡಿದ್ದರು. ವಿಧಾನಸಭೆಯ ಒಳ ಹೊರಗೆ 'ಇವ ನಮ್ಮವ' ವಚನವನ್ನು ಸದಾ ಉಲ್ಲೇಖಿಸುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪೂರ್ಣ ಬೆಂಬಲ ಈ ಮಸೂದೆಗಿತ್ತು.

ದಲಿತ ಯುವಕನನ್ನು ವರಿಸಿದ್ದ ಹುಬ್ಬಳ್ಳಿ ತಾಲ್ಲೂಕಿನ ಇನಾಂ ವೀರಾಪುರದ ಮಾನ್ಯಾ ಎನ್ನುವ ಏಳು ತಿಂಗಳ ಗರ್ಭಿಣಿ 'ತಾಯಿ ಕಾರ್ಡ್' ಮಾಡಿಸಲು ಊರಿಗೆ ಬಂದಾಗ ಆಕೆಯ ಭೀಕರ ಹತ್ಯೆಯಾಯಿತು. ಆಗ ಜಾತ್ಯತೀತ ತಂಡಗಳು, ದಲಿತ ಸಂಘಟನೆಗಳು ವಿಶೇಷ ಕಾಯ್ದೆಗಾಗಿ ಸರ್ಕಾರವನ್ನು ಒತ್ತಾಯಿಸಿದ್ದವು. ಕರ್ನಾಟಕದ ಕಾಳಜಿವಂತರು ಹಾಗೂ ಸರ್ಕಾರದ ಜಾಗೃತಪ್ರಜ್ಞೆಯ ಫಲವಾಗಿ, ಭಾರತದಲ್ಲೇ ಮೊಟ್ಟ ಮೊದಲಿಗೆ ಅತ್ಯಂತ ದೂರಗಾಮಿ ಪರಿಣಾಮ ಬೀರಬಲ್ಲ ಮಹತ್ತರ ಮಸೂದೆ ಕರ್ನಾಟಕ ವಿಧಾನಸಭೆಯಲ್ಲಿ ಧ್ವನಿಮತದಿಂದ ಪಾಸಾಯಿತು. ಇದು ಕರ್ನಾಟಕದ ಚಾರಿತ್ರಿಕ ಹೆಮ್ಮೆಯ ಗಳಿಗೆ.

ಜಾತಿ, ಧರ್ಮಗಳ ಅಹಂಕಾರ, ಠೇಂಕಾರದಿಂದ ಅಂತರ್ಜಾತೀಯ–ಅಂತರ್ಧರ್ಮೀಯ ವಿವಾಹಿತರನ್ನು ಹಿಂಸಿಸುವ ಮರ್ಯಾದೆ ಹೆಸರಿನ ಹತ್ಯೆಯ ಕ್ರೌರ್ಯವನ್ನು 'ಮರ್ಯಾದೆಗೇಡಿ ಹತ್ಯೆ', 'ಮಾನಗೇಡಿ ಕೊಲೆ' ಎಂದು ಧಿಕ್ಕರಿಸಿ ನಾಡಿನ ಪ್ರಗತಿಪರ ವಲಯ ಪ್ರತಿಭಟಿಸುತ್ತಲೇ ಬಂದಿದೆ. ಜಾತಿವಾದಿ, ಕೋಮುವಾದಿ ಚೀರಾಟಗಳ ಕಾರಣದಿಂದ ಹುಸಿ ಮರ್ಯಾದೆಯ ಭಾಷೆಯ ಅಬ್ಬರ ಅತಿಯಾಗಿರುವುದರಿಂದ ಕೂಡ ಇಂಥ ಹತ್ಯೆ ಹೆಚ್ಚಿವೆ. ಅಂತರ್ಜಾತೀಯ ಜೋಡಿಗಳ ಹತ್ಯೆ, ಕಿರುಕುಳಗಳ ಕೇಡಿಗತನಕ್ಕೆ ಕಾನೂನಾತ್ಮಕ ತಡೆ ಒಡ್ಡುವ ಈ ಮಸೂದೆಯಲ್ಲಿರುವ ಕೆಲವು ಪ್ರತಿಬಂಧಕಗಳು ಹೀಗಿವೆ:

ಅಂತರ್ಜಾತಿ ವಿವಾಹವಾಗುವ, ವಿವಾಹವಾಗಲಿರುವ ಜೋಡಿ ಅಥವಾ ಅವರ ಕುಟುಂಬದವರು, ಸಂಬಂಧಿಕರು ಯಾವುದೇ ಹಳ್ಳಿ, ವಾಸಿಸುವ ಪ್ರದೇಶವನ್ನು ಬಿಡುವಂತೆ ಒತ್ತಾಯಿಸುವುದು; ಅವರ ಯಾವುದೇ ಸಾಮಾಜಿಕ ಸಂಬಂಧಗಳಿಗೆ ತಡೆಯೊಡ್ಡುವುದು; ಸಾರ್ವಜನಿಕ ಸ್ಥಳಗಳು, ಮಾರುಕಟ್ಟೆ, ದೇವಾಲಯ ಅಥವಾ ಜೀವನವಶ್ಯಕವಾದ ಸ್ಥಳಗಳ ಭೇಟಿಗೆ ತಡೆಯೊಡ್ಡುವುದು; ಅಂತರ್ಜಾತೀಯ ಜೋಡಿಗಳ, ಅವರ ಕುಟುಂಬದ ಭೂಮಿ, ಆಸ್ತಿ ವಶಪಡಿಸಿಕೊಳ್ಳುವುದು; ದಂಡ ಹಾಕುವುದು; ಜೋಡಿಯ ಜೊತೆ ವ್ಯವಹಾರ ಮಾಡಲು ನಿರಾಕರಿಸುವುದು; ಉದ್ಯೋಗ, ಕಾಂಟ್ರಾಕ್ಟ್ ಮುಂತಾದ ಅವಕಾಶಗಳನ್ನು ನಿರಾಕರಿಸುವುದು; ಯಾವುದೇ ಬಗೆಯ ವೃತ್ತಿ, ವ್ಯಾಪಾರ ವಹಿವಾಟುಗಳಿಂದ ದೂರ ವಿರಿಸುವುದು; ಎಲ್ಲರಿಗೂ ಅನ್ವಯವಾಗುವ ಸೇವೆಗಳನ್ನು ನಿರಾಕರಿಸುವುದು; ಸಾಲ ನಿರಾಕರಣೆ; ಶಾಲಾ ಪ್ರವೇಶ ನಿರಾಕರಿಸುವುದು– ಇವೆಲ್ಲವನ್ನೂ ಈ ಮಸೂದೆ ಶಿಕ್ಷಾರ್ಹ ಅಪರಾಧವಾಗಿಸುತ್ತದೆ.

18 ವರ್ಷ ತುಂಬಿದ ಹುಡುಗಿ, 21 ವರ್ಷ ತುಂಬಿದ ಹುಡುಗನ ನಡುವಣ ವಿವಾಹದ ಹಕ್ಕನ್ನು ತಡೆಯುವ ವ್ಯಕ್ತಿ, ಗುಂಪುಗಳ ಪ್ರಯತ್ನವನ್ನು ಮಸೂದೆ ಅಪರಾಧವೆಂದು ಘೋಷಿಸುತ್ತದೆ. ವಯಸ್ಕ ಜೋಡಿ ವಿವಾಹವಾಗುವ ತನ್ನ ನಿರ್ಧಾರವನ್ನು ಜಿಲ್ಲಾಧಿಕಾರಿಗೆ, ಸಂಬಂಧಪಟ್ಟ ಅಧಿಕಾರಿಗೆ ಮೌಖಿಕವಾಗಿ ಅಥವಾ ಬರಹದಲ್ಲಿ ತಿಳಿಸಿದ ಮೇಲೆ, ಯಾರೂ ಈ ಜೋಡಿಗೆ ಅಡ್ಡ ಬರುವಂತಿಲ್ಲ. ಜಾತಿ, ಸಂಸ್ಕೃತಿ, ರೂಢಿ, ಕಟ್ಟಳೆ, ಸಂಪ್ರದಾಯ, 'ಮರ್ಯಾದೆ'ಯ ಹೆಸರಿನಲ್ಲಿ ಅವರಿಗೆ ಅಡ್ಡಿಯಾಗುವಂತಿಲ್ಲ. ಅವರಿಗೆ ದೈಹಿಕ ಹಿಂಸೆ, ಹತ್ಯೆ, ಕಿರುಕುಳ, ಅವರ ಭೇಟಿಗೆ ತಡೆ ಒಡ್ಡುವುದು ಅಪರಾಧ. ಅಂತರ್ಜಾತೀಯ ವಿವಾಹ ಆಗಲು ತೀರ್ಮಾನಿಸಿದವರನ್ನು, ಅವರಿಗೆ ನೆರವಾಗುವವರ ಅಪಹರಣ, ಅವರಿಗಾಗಲಿ, ಸಂಬಂಧಿಕರಿಗಾಗಲಿ ಬಹಿಷ್ಕಾರ ಹಾಕುವುದು, ಒಕ್ಕಲೆಬ್ಬಿಸುವುದು, ಶಿಕ್ಷಿಸುತ್ತೇವೆಂದು ಹೆದರಿಸುವುದು ಅಪರಾಧ.

ಅಂತರ್ಜಾತೀಯ ಮದುವೆಯಾದವರನ್ನು ಬಲವಂತದಿಂದ ಅಣ್ಣ–ತಂಗಿ ಎಂದು ಘೋಷಿಸುವುದು; ಬದುಕಿದ್ದಾಗಲೇ ಅಂತ್ಯಸಂಸ್ಕಾರ ಮಾಡುವುದು ಅಪರಾಧ. ಆಸ್ತಿ ಹಕ್ಕನ್ನು ನಿರಾಕರಿಸುವುದು, ಈ ಜೋಡಿಗಾಗಲೀ ಅವರ ಬೆಂಬಲಿಗರಿಗಾಗಲೀ ಮಾನಸಿಕ, ದೈಹಿಕ ದಬ್ಬಾಳಿಕೆ ಮಾಡುವುದು, ಕೂಡಿ ಹಾಕುವುದು, ಫೋನ್, ಲ್ಯಾಪ್‌ಟಾಪ್ ಅಥವಾ ಯಾವುದೇ ಸಂವಹನ ಸಾಧನಗಳನ್ನು ವಶಪಡಿಸಿಕೊಳ್ಳುವುದು, ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸುವುದು, ಕೆಲಸದಿಂದ ತೆಗೆಯುವುದು, ಲೈಂಗಿಕ ಹಿಂಸೆ, ಲೈಂಗಿಕ ಕಿರುಕುಳ, ಬಲವಂತದ ಗರ್ಭಪಾತ, ಒತ್ತಾಯದಿಂದ ವಿವಾಹವನ್ನು ರದ್ದುಗೊಳಿಸುವುದು, ಅಂತರ್ಜಾತೀಯ ಜೋಡಿ ಅಥವಾ ಕುಟುಂಬದವರ ವಿರುದ್ಧ ಸುಳ್ಳು ಸುದ್ದಿ ಹರಡಿ ಅಪಮಾನಗೊಳಿಸುವುದು ಅಪರಾಧ. ಹಾಗೆಯೇ, ವಯಸ್ಕ ಹೆಣ್ಣಿಗೆ ವಿವಾಹದ ಭರವಸೆ ಕೊಟ್ಟು ದೈಹಿಕ ಸಂಪರ್ಕ ಬೆಳೆಸಿ, ಆಕೆಯ ಜಾತಿ ತಿಳಿದ ನಂತರ ಹಿಂದೆಗೆಯುವುದು ಅಪರಾಧ. ಇಂಥ ಮದುವೆ ತಮ್ಮ ಜಾತಿ, ಬುಡಕಟ್ಟು, ಸಮುದಾಯ, ಸಂಪ್ರದಾಯಕ್ಕೆ ವಿರುದ್ಧವಾಗಿದೆ ಅಥವಾ ಕುಟುಂಬದವರ ಸಮುದಾಯದ ಆಶಯಕ್ಕೆ ವಿರುದ್ಧವಾಗಿದೆ ಎಂಬ ಕಾರಣಕ್ಕೆ ಐದಕ್ಕಿಂತ ಹೆಚ್ಚು ಮಂದಿ ಜಮಾಯಿಸುವುದು, ಖಂಡಿಸುವುದು ಅಪರಾಧ.

ಯಾವುದೇ ವ್ಯಕ್ತಿ ತನ್ನ ವಿವಾಹ ಸ್ವಾತಂತ್ರ್ಯದ ಹಕ್ಕಿಗೆ ಅಡ್ಡ ಬರುವುದನ್ನು ತಡೆಯಲು ಸಿವಿಲ್ ನ್ಯಾಯಾಲಯದಲ್ಲಿ ತಡೆಆದೇಶ (ಇಂಜಂಕ್ಷನ್) ಕೋರಬಹುದು. ತುರ್ತು ಸನ್ನಿವೇಶದಲ್ಲಿ ನೋಟಿಸ್ ನೀಡದೆಯೇ, ಸಂಬಂಧಪಟ್ಟ ವ್ಯಕ್ತಿಗಳ ಗೈರುಹಾಜರಿಯಲ್ಲೇ ತಡೆಆದೇಶ ಮತ್ತು ರಕ್ಷಣೆಯನ್ನು ನ್ಯಾಯಾಲಯ ಒದಗಿಸುವುದು ಕಡ್ಡಾಯ. ಇಂಥ ಆದೇಶದ ನಂತರ ಜೋಡಿಗೆ ಹಾಗೂ ಸಂಬಂಧಪಟ್ಟವರಿಗೆ ಪೂರ್ಣ ರಕ್ಷಣೆ ಒದಗಿಸುವುದು ಪೊಲೀಸರ ಜವಾಬ್ದಾರಿ. ತಡೆಆದೇಶ ಉಲ್ಲಂಘಿಸುವವರಿಗೆ ಶಿಕ್ಷೆ ನಿಗದಿಗೊಳಿಸಲಾಗಿದೆ. ಮರ್ಯಾದೆಯ ಹೆಸರಲ್ಲಿ ನಡೆಯುವ ಹತ್ಯೆ, ಹಿಂಸೆ, ಗುಂಪುಹಲ್ಲೆಗಳಿಗೆ ಶಿಕ್ಷೆಯ ಪ್ರಮಾಣ ನಿಗದಿಯಾಗಿದೆ.

ಮಸೂದೆಯನ್ನು ಧ್ವನಿಮತಕ್ಕೆ ಹಾಕುವ ಮೊದಲು ಎಚ್.ಕೆ. ಪಾಟೀಲರು, ಈ ಮಸೂದೆ ಕಾಯ್ದೆಯಾದ ನಂತರದ ನಿಯಮಗಳನ್ನು ರೂಪಿಸುವಾಗ ಆಗ ಬೇಕಾದ ಕೆಲಸಗಳು ಇನ್ನೂ ಇವೆ ಎಂದರು. ಮಾನ್ಯಾ ಹತ್ಯೆಯ ನಂತರ ಇಂಥ ಪ್ರಕರಣಗಳ ವಿಚಾರಣೆಗೆ ವಿಶೇಷ ನ್ಯಾಯಾಲಯ ರೂಪಿಸುವ ಕುರಿತು ಸಚಿವ ಎಚ್.ಸಿ. ಮಹಾದೇವಪ್ಪ ಹೇಳಿದ್ದನ್ನೂ ಪಾಟೀಲರು ನೆನೆದರು. 'ರೂಲ್ಸ್ ಮಾಡುವಾಗ ನೀವು ಹೇಳಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಿಯಮಗಳನ್ನು ಮಾಡುತ್ತೇವೆ' ಎಂದು ಸದನದ ಸದಸ್ಯರಿಗೆ ಹೇಳಿದರು. ಈ ನಿಟ್ಟಿನಲ್ಲಿ ಕಾಳಜಿಯುಳ್ಳ ವಕೀಲರು, ನ್ಯಾಯಮೂರ್ತಿಗಳು, ಪೊಲೀಸ್ ಅಧಿಕಾರಿಗಳು, ಚಿಂತಕಿಯರು, ಚಿಂತಕರು ಸರ್ಕಾರಕ್ಕೆ ಇನ್ನಷ್ಟು ಸಲಹೆಗಳನ್ನು ಕೊಡುವ ಅಗತ್ಯವಿದೆ.

ಮಸೂದೆ ಈ ಕಾಲದ ಅನಿವಾರ್ಯವಾಗಿತ್ತು. ಎಷ್ಟೋ ಸಂದರ್ಭಗಳಲ್ಲಿ ಮದುವೆ ನೋಂದಣಿ ಮಾಡುವ ಸಬ್ ರಿಜಿಸ್ಟ್ರಾರ್ ಕಚೇರಿಗಳು, ಪೊಲೀಸರು, ನ್ಯಾಯಾಂಗವು ತೋರುವ ಜಡತೆ, ಉದಾಸೀನಗಳನ್ನೂ ಮಸೂದೆ ಹೋಗಲಾಡಿಸಬಲ್ಲದು. ಜಾತಿ–ಧರ್ಮಗಳ ಮದದ ಜೊತೆಗೆ, ಕಾನೂನಿನ ಅಜ್ಞಾನದಿಂದ ಕೂಡ ಠೇಂಕಾರದಿಂದ ವರ್ತಿಸುವ ಅಣ್ಣಂದಿರು, ಅಪ್ಪಂದಿರು, ನೆಂಟರಿಷ್ಟರು, ನೆರೆಹೊರೆಯವರಿಗೆ ಮಸೂದೆಯಲ್ಲಿ ಎಚ್ಚರವಿದೆ, ಕಡಿವಾಣವಿದೆ, ಶಿಕ್ಷೆಯಿದೆ.

ಈಚೆಗಷ್ಟೇ 'ರೋಹಿತ್ ವೇಮುಲ ಕಾಯ್ದೆ' ಜಾರಿಗೆ ತಂದ ಕರ್ನಾಟಕದ ಹಲವು ಪ್ರಗತಿಪರ ಮಸೂದೆಗಳ ಸಾಲಿಗೆ ಈ ಮಸೂದೆಯೂ ಸೇರಿದೆ. ಈ ಮಸೂದೆಯಲ್ಲಿರುವ 'ಇವ ನಮ್ಮವನೆಂದೆನಿಸಯ್ಯಾ' ಎಂಬ ವಿಶ್ವಾತ್ಮಕ ಜಾತ್ಯತೀತ ಬಿನ್ನಹವನ್ನು ಶಿಕ್ಷಣ, ಸಾಹಿತ್ಯ, ನ್ಯಾಯಾಂಗ, ಪತ್ರಿಕೋದ್ಯಮ, ಪೊಲೀಸ್ ಮುಂತಾದ ಹಲವು ವಲಯಗಳು ಬದ್ಧತೆಯಿಂದ ಎಲ್ಲೆಡೆ ಹಬ್ಬಿಸಿದರೆ, ಇವನ್ನೆಲ್ಲ ಜನರಿಗೆ ಸರಳವಾಗಿ ತಿಳಿ ಹೇಳಿದರೆ ಮಾತ್ರ ಈ ಮಸೂದೆ ಕಾಯ್ದೆಯಾಗಿ, ದಕ್ಷವಾಗಿ ಜಾರಿಯಾಗಬಲ್ಲದು; ಮಾನಗೇಡಿ ಹತ್ಯೆಗಳ ಹಿಂಸೆಗೆ ಪ್ರಬಲ ಪ್ರತಿಬಂಧಕವಾಗಬಲ್ಲದು.

ಅದೇ ವೇಳೆಗೆ, ದಲಿತ–ದಲಿತೇತರರ ಅಂತರ್ಜಾತೀಯ ವಿವಾಹಗಳಿಗೆ ಸರ್ಕಾರದ ಪ್ರೋತ್ಸಾಹಧನ ಹೆಚ್ಚಬೇಕು. ಎಲ್ಲ ಅಂತರ್ಜಾತೀಯ, ಅಂತರ್ಧರ್ಮೀಯ ವಿವಾಹಿತರಿಗೂ ಪ್ರೋತ್ಸಾಹಧನ, ಸ್ವ–ಉದ್ಯೋಗಕ್ಕೆ ಸಾಲ ಯೋಜನೆ ಜಾರಿ ಆಗಬೇಕು. ರವಿವರ್ಮಕುಮಾರ್ ಆಯೋಗ ಶಿಫಾರಸು ಮಾಡಿರುವ ಅಂತರ್ಜಾತೀಯ ವಿವಾಹಿತರಿಗಾಗಿ ಶೇ 1ರಷ್ಟು 'ಮೀಸಲಾತಿಯೊಳಗಣ ಮೀಸಲಾತಿ' ಜಾರಿಯಾಗಬೇಕು. ಕಾರ್ಪೊರೇಟ್, ಖಾಸಗಿ ವಲಯಗಳು ಅಂತರ್ಜಾತೀಯ ವಿವಾಹಿತರಿಗೆ ಬೆಂಬಲ–ಮೀಸಲಾತಿಗಳನ್ನು ನೀಡುವ ನಿರ್ಧಾರ ಮಾಡಿದರಂತೂ ಸಾಮಾಜಿಕ ಬದಲಾವಣೆಯ ಹೊಸ ಹಾದಿಗಳೇ ತೆರೆಯಬಲ್ಲವು.

ವಾಚಕರ ವಾಣಿ

ನೀತಿನಿಯಮ: ಡಿಸಿ, ಎಸ್‌ಪಿಗೆ ಅಪಥ್ಯವೆ?

ಸರ್ಕಾರಿ ಅಧಿಕಾರಿಗಳು ಕರ್ತವ್ಯ ನಿರ್ವಹಿಸುವಾಗ ನೀತಿಸಂಹಿತೆಯನ್ನು ಕಡ್ಡಾಯವಾಗಿ ಪಾಲಿಸಬೇಕು; ಜೊತೆಗೆ, ಧರ್ಮನಿರಪೇಕ್ಷವಾಗಿ ವರ್ತಿಸಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಕೆಲವು ಅಧಿಕಾರಿಗಳು ಈ ನಿಯಮವನ್ನು ಗಾಳಿಗೆ ತೂರುತ್ತಿದ್ದಾರೆ. ಕೆಲವು ತಿಂಗಳ ಹಿಂದೆ ಹಾಸನದ ಹಾಸನಾಂಬ ಜಾತ್ರೆಯಲ್ಲಿ ಅಲ್ಲಿನ ಜಿಲ್ಲಾಧಿಕಾರಿಯು ಕೊಂಡ ಹಾಯ್ದಿದ್ದು ಸುದ್ದಿಯಾಗಿತ್ತು. ಇತ್ತೀಚೆಗೆ ಮೇಲುಕೋಟೆ ವೈರಮುಡಿ ಉತ್ಸವದಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರು ವೈರಮುಡಿ ಗಂಟನ್ನು ಹೊತ್ತು ನಿಯಮ ಮುರಿದಿದ್ದಾರೆ. ಸರ್ಕಾರದ ಪ್ರತಿನಿಧಿಗಳಾಗಿ ಹೀಗೆ ಮಾಡುವುದು ಸರಿಯಲ್ಲ. ಉತ್ಸವಗಳಲ್ಲಿ ಕಾನೂನು–ಸುವ್ಯವಸ್ಥೆ ಕಾಪಾಡುವುದು ಅಧಿಕಾರಿಗಳ ಹೊಣೆ; ತಾವೇ ಉತ್ಸವದ ಭಾಗ ಆಗಬಾರದು. ಇತ್ತೀಚೆಗೆ ಅಧಿಕಾರಿಗಳಲ್ಲಿ ಇಂಥ ಚಾಳಿ ಹೆಚ್ಚುತ್ತಿದೆ. ಸರ್ಕಾರ ಇದಕ್ಕೆ ಸ್ಪಷ್ಟ ಮಾರ್ಗಸೂಚಿ ಪ್ರಕಟಿಸಬೇಕಿದೆ.

ಸಂತೋಷ ಕೌಲಗಿ, ಮೇಲುಕೋಟೆ

ಸಾರಿಗೆ ಸಿಬ್ಬಂದಿ ವರ್ಗಾವಣೆ ತ್ವರಿತವಾಗಲಿ

ಆನ್‌ಲೈನ್ ಮೂಲಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಸಿಬ್ಬಂದಿಯ ವರ್ಗಾವಣೆ ಪ್ರಕ್ರಿಯೆಗೆ ಅರ್ಜಿ ಆಹ್ವಾನಿಸಿರುವುದು ಸ್ವಾಗತಾರ್ಹ. ಮೇ ತಿಂಗಳೊಳಗೆ ಈ ಪ್ರಕ್ರಿಯೆಯು ಪೂರ್ಣಗೊಳ್ಳಬೇಕಿದೆ. ಇದರಿಂದ ವರ್ಗಾವಣೆಗೊಂಡ ಸ್ಥಳದಲ್ಲಿ ಸಿಬ್ಬಂದಿಯು ತಮ್ಮ ಮಕ್ಕಳನ್ನು ಶಾಲೆಗಳಿಗೆ ದಾಖಲಿಸಲು ಅನುಕೂಲವಾಗಲಿದೆ. ಜೊತೆಗೆ, ಬಾಡಿಗೆ ಮನೆಗಳನ್ನು ಹುಡುಕಲು ಸಹಕಾರಿಯಾಗಲಿದೆ. ವಿಳಂಬ ಮಾಡಿದರೆ ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಸಿಬ್ಬಂದಿಯ ಕುಟುಂಬಸ್ಥರು ಮತ್ತು ಮಕ್ಕಳ ಶೈಕ್ಷಣಿಕ ಹಿತದೃಷ್ಟಿದಿಂದ ತ್ವರಿತವಾಗಿ ಕ್ರಮವಹಿಸಬೇಕಿದೆ.

ಎಸ್.ಎಂ. ಚಂದ್ರಮೌಳಿ ಸ್ವಾಮಿ, ಬೆಂಗಳೂರು

ಐಪಿಎಲ್ ಟಿಕೆಟ್ ಬೇಡಿಕೆ ಹಾಸ್ಯಾಸ್ಪದ

ಶಾಸಕರಿಗೆ ಸಾಂವಿಧಾನಿಕವಾಗಿ ಹಲವಾರು ಸವಲತ್ತುಗಳನ್ನು ಕಲ್ಪಿಸಲಾಗಿದೆ. ಪ್ರತಿ ತಿಂಗಳು ಸಂಬಳ, ಮನೆ ಬಾಡಿಗೆ, ವಾಹನ ಭತ್ಯೆ ಸೇರಿದಂತೆ ಲಕ್ಷಾಂತರ ರೂಪಾಯಿಯು ಅವರ ಕಿಸೆ ಸೇರುತ್ತದೆ. ಮೈಸೂರು ದಸರಾ ಹಾಗೂ ಸರ್ಕಾರದಿಂದ ನಡೆಸುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅವರಿಗೆ ಉಚಿತ ಪಾಸು ನೀಡಲಾಗುತ್ತದೆ. ಹೀಗಿದ್ದರೂ ಐಪಿಎಲ್ ಕ್ರಿಕೆಟ್ ಪಂದ್ಯಗಳ ವೀಕ್ಷಣೆಗೆ ಉಚಿತವಾಗಿ ಟಿಕೆಟ್ ಕೇಳುವುದು ಹಾಸ್ಯಾಸ್ಪದ.

ಚಿದಾನಂದ, ದಾವಣಗೆರೆ

ಸಭೆಗೆ ಗೈರು: ಜವಾಬ್ದಾರಿ ಮರೆತ ಪ್ರಧಾನಿ

ಕೊಲ್ಲಿ ಯುದ್ಧದ ಬಿಕ್ಕಟ್ಟಿನ ಬಗ್ಗೆ ಚರ್ಚಿಸಲು ಕೇಂದ್ರ ಸರ್ಕಾರವೇ ಕರೆದಿದ್ದ ಸರ್ವಪಕ್ಷಗಳ ಸಭೆಗೆ ಪ್ರಧಾನಿ ನರೇಂದ್ರ ಮೋದಿ ಗೈರುಹಾಜರಾಗಿದ್ದಾರೆ. ಅವರು ದೆಹಲಿಯಲ್ಲಿದ್ದರೂ ಸಭೆಗೆ ಗೈರುಹಾಜರಾಗಿರುವುದು ಉತ್ತಮ ಸಂಪ್ರದಾಯವಲ್ಲ. ಹಿಂದೆಯೂ ಮಹತ್ವದ ವಿಷಯ ಕುರಿತಂತೆ ನಡೆದ ಸರ್ವಪಕ್ಷಗಳ ಸಭೆಗೆ ಅವರು ಗೈರುಹಾಜರಾಗಿರುವ ನಿದರ್ಶನವಿದೆ. ಪ್ರಜಾಪ್ರಭುತ್ವದ ಯಶಸ್ಸಿಗೆ ಆಡಳಿತ ಮತ್ತು ವಿಪಕ್ಷಗಳೆರಡೂ ವಿಶ್ವಾಸದಿಂದ ಸಾಗಬೇಕಿದೆ. ಮೋದಿಯವರು ವಿದೇಶಗಳಿಗೆ ತೆರಳಿದಾಗ ಅಲ್ಲಿನ ನಾಯಕರನ್ನು ಆಲಿಂಗಿಸಿ ಫೋಟೊ ತೆಗೆಸಿಕೊಳ್ಳುತ್ತಾರೆ. ಆದರೆ, ದೇಶದಲ್ಲಿನ ವಿಪಕ್ಷದ ನಾಯಕರ ಬಗ್ಗೆ ಅಲಕ್ಷ್ಯವೇಕೆ? ವಿಪಕ್ಷಗಳ ನಾಯಕರೊಂದಿಗೆ ಮುಕ್ತವಾಗಿ ಚರ್ಚಿಸುವುದು ಪ್ರಧಾನಿಯ ಹೊಣೆಯಲ್ಲವೆ? ದಶಕದಿಂದ ಕೇಂದ್ರದ ನೀತಿನಿರೂಪಣೆಯಲ್ಲಿ 'ಮುಕ್ತಚರ್ಚೆ'ಯ ವಾತಾವರಣವೇ ಇಲ್ಲದಂತಾಗಿದೆ.

ಅನಿಲ್ ಕುಮಾರ್, ಶಿವಮೊಗ್ಗ

ಋತುಚಕ್ರದ ರಜೆ: ಮುಜುಗರ ಆಗದಿರಲಿ

ದಶಕಗಳ ಹೋರಾಟದ ಫಲದಿಂದ ಶಿಕ್ಷಣ ಹಾಗೂ ಔದ್ಯೋಗಿಕ ಸ್ಥಳಗಳಲ್ಲಿ ಮಹಿಳೆಯರು ಹೆಚ್ಚಾಗಿ ತೊಡಗಿಸಿಕೊಂಡಿದ್ದಾರೆ. ದಕ್ಷತೆಯಿಂದ ಕೆಲಸ ಮಾಡಿ ಉತ್ಪಾದಕತೆಯಲ್ಲಿ ದೇಶಕ್ಕೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ಸಾಮಾಜಿಕ, ಧಾರ್ಮಿಕ, ಲಿಂಗಭೇದದಿಂದ ಮಹಿಳಾ ಆತ್ಮಶಕ್ತಿಗೆ ಅವಕಾಶಗಳು ಕಡಿಮೆ. ಈಗ ಋತುಚಕ್ರ ರಜೆಯ ವಿಷಯ ತೆಗೆದು ಮತ್ತೆ ಮಹಿಳಾ ಶಕ್ತಿಯನ್ನು ಕುಗ್ಗಿಸುವುದು ಬೇಡ. ಋತುಚಕ್ರದ ಬಗ್ಗೆ ಮುಕ್ತವಾಗಿ ಮಾತನಾಡಿ ರಜೆ ಪಡೆಯಲು ಮುಜುಗರ ಉಂಟಾಗಲಿದೆ. ಸರ್ಕಾರದ ನೀತಿಯಿಂದಾಗಿ ಕೆಲವು ಸಂಸ್ಥೆಗಳು ಮಹಿಳೆಯರ ನೇಮಕಾತಿಗೆ ಹಿಂಜರಿಯಬಹುದು; ಕೆಲವು ಸಂಸ್ಥೆಗಳಿಗೆ ಈ ರಜೆಯು ಆರ್ಥಿಕ ಹೊರೆ ಎನಿಸಬಹುದು. ಸರ್ಕಾರಗಳಿಗೆ ತಾವು ಮಾಡುವ ಎಲ್ಲ ಕಾರ್ಯಕ್ರಮಗಳು ಕಲ್ಯಾಣಕ್ರಮವಾಗಿ ಕಾಣುತ್ತವೆ. ಮಹಿಳೆಯರ ಆತ್ಮವಿಶ್ವಾಸ ಕುಗ್ಗಿಸುವ ಇಂಥ ಆದೇಶವನ್ನು ನ್ಯಾಯಾಲಯವು ನ್ಯಾಯಸಮ್ಮತವಾಗಿ ಬಗೆಹರಿಸುವುದು ಹಿತಕಾರಿ.

ಚಿಕ್ಕಜೋಗಿಹಳ್ಳಿ ನಂದಕುಮಾರಿ, ಹೊನ್ನಾಳಿ

ಹಿಂದಿ ಹೊರಕ್ಕೆ: ಗ್ರಾಮೀಣರಿಗೆ ಸಿಕ್ಕ ಜಯ

ಎಸ್ಎಸ್ಎಲ್‌ಸಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಹಿಂದಿಯಲ್ಲಿ ಪಡೆಯುವ ಅಂಕ ಪರಿಗಣಿಸದೆ ಗ್ರೇಡ್ ನೀಡುವ ಕ್ರಮವು ಗ್ರಾಮೀಣ ವಿದ್ಯಾರ್ಥಿಗಳಿಗೆ ಸಂದ ಜಯ. ಭಾಷೆಯನ್ನು ಓದುವುದು, ಬರೆಯುವುದು, ಕಲಿಯುವುದು ತಪ್ಪಲ್ಲ. ಆದರೆ, ಆ ಕಲಿಯುವಿಕೆಯೇ ಭವಿಷ್ಯಕ್ಕೆ ಅಡ್ಡಿಯಾಗಬಾರದು. ಗ್ರಾಮೀಣ ಪ್ರದೇಶದ ಸರ್ಕಾರಿ ಪ್ರೌಢಶಾಲೆಗಳಲ್ಲಿ ಹಿಂದಿ ಕಲಿಸುವ ಶಿಕ್ಷಕರಿಲ್ಲ; ಹೇಳಿಕೊಡುವವರು ಇಲ್ಲ. ನಾವು ಎಸ್ಎಸ್ಎಲ್‌ಸಿ ಓದುವಾಗ 50 ಅಂಕಕ್ಕೆ ಹಿಂದಿ ಪರೀಕ್ಷೆ ಬರೆಯಬೇಕಿತ್ತು. ಎಷ್ಟು ಕಷ್ಟವಿತ್ತೆಂದರೆ ಹೇಳಲು ಅಸಾಧ್ಯ. ಈಗ 100 ಅಂಕಗಳಿವೆ. ತಮ್ಮದಲ್ಲದ ಹಿಂದಿ ಭಾಷೆ ಕಲಿತು ನೂರು ಅಂಕಗಳಿಗೆ ಬರೆಯುವುದಾದರೂ ಹೇಗೆ? ಮನೆಯಲ್ಲಿ, ಶಾಲೆಯಲ್ಲಿ ಕನ್ನಡ ಹೇಳಿ ಕೊಡುವವರಿದ್ದರೂ ನಪಾಸಾಗುವವರ ಸಂಖ್ಯೆ ಈಗಲೂ ಕಡಿಮೆಯಾಗಿಲ್ಲ. ಹೀಗಿರುವಾಗ ಹಿಂದಿ ವಿಷಯದಲ್ಲಿ ಪಾಸಾಗುವುದನ್ನು ಕಡ್ಡಾಯಗೊಳಿಸಿ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟ ಆಡುತ್ತಿದ್ದುದು ಈಗ ತಪ್ಪಿದೆ.

ಬಲ್ಲೇನಹಳ್ಳಿ ಮಂಜುನಾಥ್, ಕೆ.ಆರ್. ಪೇಟೆ

ಚುರುಮುರಿ

ಯಾವ ಕಪ್ ಯಾರ ಕೈಗೆ?

• ಸುಮಂಗಲಾ

'**ಅಬ್ಬಾ!** ಎರಡು ದೊಡ್ಡಾನೆಗಳು ಸೇರಿದ್ರೆ ಎಂಥಾ ದೊಡ್ಡ ಮರಾನೂ ಮಕಾಡೆ ಮಲಗಿಸಿ, ಹೊತ್ತೊಯ್ಯತಾವೆ!' ಎನ್ನುತ್ತ ಬೆಕ್ಕಣ್ಣ ಮೂಗಿನ ಮೇಲೆ ಬೆರಳಿಟ್ಟಿತು.

'ಯಾವ ದೊಡ್ಡಾನೆಗಳು? ಯಾವ ಮರ?' ನಾನು ಕುತೂಹಲದಿಂದ ಕೇಳಿದೆ.

'ಥೋ... ನೀ ಸುದ್ದೀನೆ ಓದಂಗಿಲ್ಲ. ನಾನು ಮೋದಿ ಸೇರಿದ್ರೆ ಎಂಥಾ ಘನಂದಾರಿ ಕೆಲಸಾನೂ ಮಾಡಿ ಮುಗಿಸತೇವು ಅಂತ ಟ್ರಂಪಣ್ಣ ಹೇಳ್ಯಾನೆ. ಇಬ್ಬರೂ ಸೇರಿ ಯುದ್ಧ ನಿಲ್ಲಿಸತಾರೆ. ಈ ಸಲ ನೊಬೆಲ್ ಶಾಂತಿ ಕಪ್ ಇಬ್ಬರಿಗೂ ಸೇರಿ ಕೊಡಬೌದು' ಹೆಮ್ಮೆಯಿಂದ ಹೇಳಿತು.

'ಕೊಲ್ಲಿ ಯುದ್ಧ ಬಗೆಹರಿಸಕ್ಕೆ ಪಾಕ್ ಮಧ್ಯಸ್ಥಿಕೆಯಲ್ಲಿ ಸಭೆ ಮಾಡ್ತಾರಂತೆ. ಶಾಂತಿ ಕಪ್ ಪಾಕಿಸ್ತಾನಕ್ಕೆ ಕೊಟ್ಟರೂ ಕೊಡಬೌದು' ಅಂತ ಇನ್ನೊಂದು ಸುದ್ದಿ ತೋರಿಸಿದೆ.

'ಆ ಮಾತುಕತಿವಳಗೆ ಟ್ರಂಪಣ್ಣನೂ ಇಲ್ಲ, ಇಸ್ರೇಲೂ ಇಲ್ಲ... ಇರಾನೂ ಇಲ್ಲ. ಯುದ್ಧ ಮಾಡ್ತಾ ಇರೋರನ್ನೇ ಬಿಟ್ಟು, ಅಕ್ಕಪಕ್ಕದೋರನ್ನ ಸೇರಿಸ್ಕಂಡು ಅವರೇನು ಮಧ್ಯಸ್ಥಿಕೆ ಮಾಡತಾರೆ?' ಬೆಕ್ಕಣ್ಣ ಉಡಾಫೆಯಿಂದ ಹೇಳಿತು.

'ಟ್ರಂಪಣ್ಣ, ಮೋದಿಮಾಮಾರು ಫೋನಿನಾಗೆ ಮಾತಾಡೂವಾಗ ಇಲಾನ್ ಮಸ್ಕಣ್ಣನೂ ಇದ್ದನಂತ. ಹಂಗಾರೆ ಕಪ್ ಮೂರು ಜನರಿಗೆ ಹಂಚತಾರೇನೋ!' ನಾನು ರಾಗವೆಳೆದೆ.

'ಎಲ್ಲಾ ಬರೇ ಗಾಳಿಸುದ್ದಿ. ಟ್ರಂಪಣ್ಣ–ಮೋದಿಮಾಮಾ ಇಬ್ಬರೇ ಮಾತಾಡ್ಯಾರೆ' ಬೆಕ್ಕಣ್ಣ ಗುರುಗುಟ್ಟಿತು.

'ಆ ಕಪ್ ಸುದ್ದಿ ಬಿಡೂಣು. ನಮ್ಮಲ್ಲಿ ಉಪಚುನಾವಣೆಗಳಲ್ಲಿ ಮತದಾರಪ್ರಭು ಯಾರ ಕೈಗೆ ಕಪ್ ಕೊಡ್ತಾನೋ ನೋಡೂಣು' ಎಂದು ಮಾತು ಬದಲಿಸಿದೆ.

'ಇಲ್ಲಿ ಕಪ್ ಯಾರಿಗೆ ಸಿಗತೈತೋ ಗೊತ್ತಿಲ್ಲ. ಆದ್ರ ಅಸ್ಸಾಂ ವಳಗೆ ಮಾತ್ರ 'ಮಿಯಾ'ಗಳ ಬೆನ್ನುಮೂಳೆ ಮುರೀತೀನಿ ಅಂತ ಅಲ್ಲಿ ಸಿಎಮ್ಮು ಹಿಮಂತಣ್ಣ ಗುಡುಗ್ಯಾನೆ. ಅಲ್ಲಿ ಕಪ್ ಈ ಸಲನೂ ಕಮಲಕ್ಕನ ಮನಿಯವ್ರಿದ್ದೇ!' ಬೆಕ್ಕಣ್ಣ ವಾದಿಸಿತು.

'ಐಪಿಎಲ್ ಕಪ್ ಈ ಸಲನೂ ಆರ್‌ಸಿಬಿಗೇ ಸಿಗಬೌದಾ?'

'ಅದನ್ನು ಪಿಚ್ ಅನ್ನೋ ಅದೃಷ್ಟದೇವತೆ ನಿರ್ಧರಿಸತಾಳೆ!' ಎಂದು ಬೆಕ್ಕಣ್ಣ ಮುಸಿಮುಸಿ ನಕ್ಕಿತು.

ಸಂಗತ

ರಾಜಕಾರಣ: ಅಲ್ಪಸಂಖ್ಯಾತರೆಂಬ ಕರಿಬೇವು!

ಕುಟುಂಬ ರಾಜಕಾರಣದಿಂದಾಗಿ ದುರ್ಬಲ ವರ್ಗ, ಅಲ್ಪಸಂಖ್ಯಾತರಿಗೆ ರಾಜಕೀಯ ಪ್ರಾತಿನಿಧ್ಯ ದೊರೆಯುತ್ತಿಲ್ಲ. ಪ್ರಜಾಪ್ರಭುತ್ವದ ಅಣಕದಲ್ಲಿ ಎಲ್ಲ ಪಕ್ಷಗಳ ಪಾತ್ರವಿದೆ.

• ಸಚ್ಚಿದಾನಂದ ಕುರಗುಂದ

ಅದು 2008ರ ಏಪ್ರಿಲ್ ತಿಂಗಳು. ಬೇಸಿಗೆಯ ಧಗೆಯೊಂದಿಗೆ ಜುಗಲಬಂದಿ ನಡೆಸುವಂತೆ ವಿಧಾನಸಭೆ ಚುನಾವಣೆಯ ಅಖಾಡವೂ ಕಾವೇರಿತ್ತು.

ಆಗ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಶಾಮನೂರು ಶಿವಶಂಕರಪ್ಪ ಅವರು ಅಭ್ಯರ್ಥಿಯಾಗಿದ್ದರು. ಉತ್ತರ ವಿಧಾನಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಆಯ್ಕೆ ಗೊಂದಲದ ಗೂಡಾಗಿತ್ತು. ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಸೈಯದ್ ಸೈಫುಲ್ಲಾ ಟಿಕೆಟ್ ಆಕಾಂಕ್ಷಿಯಾಗಿದ್ದರು.

ನಾಮಪತ್ರ ಸಲ್ಲಿಸುವ ಕೊನೆಯ ದಿನ ಮಧ್ಯಾಹ್ನ ಒಂದು ಗಂಟೆಗೆ, ಅಂದಿನ ಕೆಪಿಸಿಸಿ ಕಾರ್ಯದರ್ಶಿ ಮಂಜುನಾಥ್ ಭಂಡಾರಿ ಬೆಂಗಳೂರಿನಿಂದ 'ಬಿ' ಫಾರಂ ತೆಗೆದುಕೊಂಡು ದಾವಣಗೆರೆಗೆ ಹೆಲಿಕಾಪ್ಟರ್‌ನಲ್ಲಿ ಬಂದಿದ್ದರು. ಸೈಫುಲ್ಲಾ ಅವರಿಗೆ 'ಬಿ' ಫಾರಂ ನೀಡುವುದು ಖಚಿತ ಎನ್ನುವುದು ಗೊತ್ತಾಗುತ್ತಿದ್ದಂತೆ ಮಹಾನಗರ ಪಾಲಿಕೆ ಕಚೇರಿ ಆವರಣ ರಣರಂಗವಾಗಿತ್ತು. ಸೈಫುಲ್ಲಾ ಅವರ ಮನವೊಲಿಸಲು ಪ್ರಯತ್ನಗಳು ನಡೆದವು. 'ಬಿ' ಫಾರಂ ಇದ್ದ ಸೂಟ್‌ಕೇಸ್ ಕಿತ್ತುಕೊಳ್ಳುವ ಪ್ರಯತ್ನವೂ ನಡೆಯಿತು. 3 ಗಂಟೆಗೆ ಕೆಲವೇ ನಿಮಿಷಗಳಿದ್ದಾಗ 'ಸೈಫುಲ್ಲಾ ಅವರಿಗೆ 'ಬಿ' ಫಾರಂ ನೀಡಬೇಕು' ಎಂದು ಹೈಕಮಾಂಡ್‌ನಿಂದ ದೂರವಾಣಿ ಆದೇಶ ಬಂತು. ತಕ್ಷಣವೇ 'ಬಿ' ಫಾರಂ ತೆಗೆದ ಭಂಡಾರಿ ಅವರು, ಅದರಲ್ಲಿ ಸೈಫುಲ್ಲಾ ಹೆಸರು ಬರೆದು ಅವರ ಕೈಗೆ ನೀಡಿದರು.

ಆ ವೇಳೆಗೆ ಸೈಫುಲ್ಲಾ ತೀವ್ರ ಒತ್ತಡಕ್ಕೆ ಸಿಲುಕಿದ್ದರು. ಅವರು ತಮ್ಮ ಹೆಸರಿನ ಕೆಳಗೆ ಮಲ್ಲಿಕಾರ್ಜುನ್ ಅವರ ಹೆಸರನ್ನೂ ಬರೆದರು. ಇಬ್ಬರ ಹೆಸರು ಒಂದೇ ಫಾರಂನಲ್ಲಿ ಇರಬಾರದು ಎಂದು ಮಾಹಿತಿ ದೊರೆತ ತಕ್ಷಣವೇ, 'ನಿಮ್ಮ ಹೆಸರನ್ನು ತೆಗೆಯಿರಿ' ಎಂದು ಸೈಫುಲ್ಲಾ ಅವರಿಗೆ ಮಲ್ಲಿಕಾರ್ಜುನ್ ಸೂಚಿಸಿದರು. ಒಲ್ಲದ ಮನಸ್ಸಿನಿಂದಲೇ ತಮ್ಮ ಹೆಸರಿನ ಮೇಲೆ ಗೆರೆ ಎಳೆದ ಸೈಫುಲ್ಲಾ ಚುನಾವಣಾಧಿಕಾರಿಗೆ 'ಬಿ' ಫಾರಂ ಸಲ್ಲಿಸಿದರು. ಬಲಾಢ್ಯರ ಮುಂದೆ ಕಾಂಗ್ರೆಸ್ ಹೈಕಮಾಂಡ್‌ನ ಆದೇಶ ದೂಳೀಪಟವಾಗಿತ್ತು. ನಂತರದ ಬೆಳವಣಿಗೆಯಲ್ಲಿ, ಇಬ್ಬರ ನಾಮಪತ್ರಗಳೂ ತಿರಸ್ಕೃತವಾಗಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯೇ ಇಲ್ಲದಂತಾಯಿತು. ಬಿಜೆಪಿ ಅನಾಯಾಸವಾಗಿ ಗೆಲುವು ಸಾಧಿಸಿತು.

ಈಗ 2026ರ ಏಪ್ರಿಲ್‌ನಲ್ಲಿ ನಡೆಯಲಿರುವ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಪಾತ್ರಧಾರಿಗಳು ಹಾಗೂ ಸನ್ನಿವೇಶ ಬದಲಾಗಿದ್ದರೂ ಪರಿಸ್ಥಿತಿ ಬದಲಾಗಿಲ್ಲ. ಉತ್ತರದಲ್ಲಿನ 'ರಾಜಕೀಯ' ದಕ್ಷಿಣದಲ್ಲಿ ನಡೆದಿದೆ. ಉಪಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್‌ನಿಂದ ಸ್ಪರ್ಧಿಸಲು ಅಲ್ಪಸಂಖ್ಯಾತರು ಆಕಾಂಕ್ಷಿಗಳಾಗಿದ್ದರು. ಸುಮಾರು 70 ಸಾವಿರ ಮುಸ್ಲಿಂ ಮತದಾರರು ಇರುವ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಅದೇ ಸಮುದಾಯದವರು ಟಿಕೆಟ್ ಕೇಳಿದ್ದು ಸಮರ್ಥನೀಯವಾಗಿತ್ತು. 'ನಮ್ಮವ' ವಿಧಾನಸಭೆಯಲ್ಲಿರಲಿ ಎನ್ನುವ ಅವರ ಆಸೆ ಸಹಜವಾದುದು. ಆದರೆ, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಅಲ್ಪಸಂಖ್ಯಾತ ಸಮುದಾಯದ ಶಾಸಕರು ಸೇರಿಕೊಂಡು, ಸಾದಿಕ್ ಪೈಲ್ವಾನ್ ಅವರ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ.



'ಪರಮಾತ್ಮ ಬಂದರೂ ಚುನಾವಣಾ ಕಣದಿಂದ ಹಿಂದೆ ಸರಿಯುವುದಿಲ್ಲ' ಎಂದಿದ್ದ ಪೈಲ್ವಾನ್ ತಮ್ಮ ಪಟ್ಟು ಸಡಿಲಿಸಿದ್ದಾರೆ. ಅಲ್ಪಸಂಖ್ಯಾತ ಸಮುದಾಯ ಮತ್ತೊಮ್ಮೆ 'ಟಿಕೆಟ್ ತ್ಯಾಗ' ಮಾಡಿದೆ. ತ್ಯಾಗ ಮಾಡುವುದು ಅಲ್ಪಸಂಖ್ಯಾತರಿಗೆ ಹೊಸತೇನೂ ಅಲ್ಲವಲ್ಲ.

ಪೈಲ್ವಾನ್ ಅವರಿಗೆ 'ಒಳ್ಳೆಯ ಹುದ್ದೆ' ನೀಡುವ ಭರವಸೆ ನೀಡಿರಬಹುದು ಎಂದು ಹೇಳಲಾಗುತ್ತಿದೆ. ಆದರೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾಯಿತ ಜನಪ್ರತಿನಿಧಿ ಆಗುವುದಕ್ಕೂ, ಪಕ್ಷ ನೀಡುವ ಹುದ್ದೆಗೂ ವ್ಯತ್ಯಾಸವಿದೆ.

ಬಿಜೆಪಿಯೊಂದಿಗೆ ಜೆಡಿಎಸ್ ನಂಟು ಬೆಳೆಸಿದ ಬಳಿಕ ಮುಸ್ಲಿಮರಿಗೆ ಕಾಂಗ್ರೆಸ್ ಸಖ್ಯ ಅನಿವಾರ್ಯ ಎನ್ನುವ ಸ್ಥಿತಿ ರಾಜ್ಯದಲ್ಲಿ ಸೃಷ್ಟಿಯಾಗಿದೆ. ಆದರೆ, 'ಕೈ' ಹಿಡಿಯಬೇಕಾದ ಕಾಂಗ್ರೆಸ್ ಈ ವಿಷಯದಲ್ಲಿ ದೃಢ ನಿಲುವು ಕೈಗೊಳ್ಳುತ್ತಿಲ್ಲ.

ಬಾಗಲಕೋಟೆ ಕ್ಷೇತ್ರದ ಉಪಚುನಾವಣೆಯ ಪರಿಸ್ಥಿತಿ ಸ್ವಲ್ಪ ಭಿನ್ನವಾದರೂ, ಸನ್ನಿವೇಶ ಇದೇ ರೀತಿಯದು. ಕುಟುಂಬ ರಾಜಕಾರಣದ ಪ್ರಾಬಲ್ಯದಲ್ಲಿ ಅಲ್ಲಿ ಬೇರೆಯವರಿಗೆ ಅವಕಾಶ ಇಲ್ಲದಂತಾಗಿದೆ. ಈ ಬೆಳವಣಿಗೆಗಳನ್ನು ನೋಡಿದರೆ, ಮುಂದೆ ನಡೆಯುವ ಚುನಾವಣೆಗಳಲ್ಲಿ, ಕುಟುಂಬ ರಾಜಕಾರಣ ಮತ್ತಷ್ಟು ಹೆಚ್ಚಬಹುದು. ಹಾಗಾದರೆ, ಫ್ಲೆಕ್ಸ್, ಬಂಟಿಂಗ್ಸ್ ಕಟ್ಟುವ ಕಾರ್ಯಕರ್ತ, ಅಲ್ಪಸಂಖ್ಯಾತರು, ಸಮಾಜದ ಕಟ್ಟಕಡೆಯ ವ್ಯಕ್ತಿ ಜನಪ್ರತಿನಿಧಿಯಾಗಿ ಆಯ್ಕೆ ಆಗುವುದಾದರೂ ಹೇಗೆ?

ಶಾಸಕ ಸ್ಥಾನಕ್ಕೆ ಆಯ್ಕೆಯಾಗುವ ವ್ಯಕ್ತಿಗೆ ಬೇರುಮಟ್ಟದ ಸಮಸ್ಯೆಗಳು ಗೊತ್ತಿರಬೇಕು. ಮೊದಲಿಗೆ, ಗ್ರಾಮ ಪಂಚಾಯಿತಿ ಸೇರಿದಂತೆ ಸ್ಥಳೀಯ ಸಂಸ್ಥೆಗಳಿಗೆ ಆಯ್ಕೆಯಾಗಿ, ಅಲ್ಲಿ ಕಾರ್ಯ ನಿರ್ವಹಿಸಿದರೆ ಜನರ ನಾಡಿಮಿಡಿತ ಅರಿಯಲು ಸಾಧ್ಯವಾಗುತ್ತದೆ. ನಂತರದ ಹಂತದಲ್ಲಿ ಶಾಸಕ ಸ್ಥಾನಕ್ಕೆ ಸ್ಪರ್ಧಿಸಬಹುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವರು ಪ್ರಾಥಮಿಕ ಹಂತಗಳನ್ನು ದಾಟಿಯೇ ಉನ್ನತ ಸ್ಥಾನಕ್ಕೆ ಬಂದು ತಲಪಿದ್ದಾರೆ.

'ಸಾಮಾನ್ಯ ಕಾರ್ಯಕರ್ತನಿಗೆ ಟಿಕೆಟ್ ಕೊಡಬಹುದು. ಆದರೆ, ಅವನಿಗೆ ಚುನಾವಣೆ ಎದುರಿಸುವ 'ಶಕ್ತಿ' ಇದೆಯೇ?' ಎನ್ನುವುದು ಈಗ ಎಲ್ಲ ಪಕ್ಷಗಳಲ್ಲಿ ಕೇಳಿಬರುವ ಮಾತು. ಪಕ್ಷ ಮನಸ್ಸು ಮಾಡಿದರೆ ಜಾತಿ, ಹಣಬಲ ಇಲ್ಲದವರು ಚುನಾವಣೆಗಳಲ್ಲಿ ಆಯ್ಕೆಯಾದ ಉದಾಹರಣೆಗಳಿವೆ. ಆದರೆ, ಪಕ್ಷ ಗೆಲುವಿಗಾಗಿ ಸುಲಭದ ದಾರಿಗಳನ್ನು ಹಿಡಿಯುತ್ತದೆ. ಸಜ್ಜನಿಕೆ, ಪಕ್ಷನಿಷ್ಠೆ, ಮೌಲ್ಯಯುತ ರಾಜಕಾರಣ, ಸಾಮಾಜಿಕ ನ್ಯಾಯ, ಇತ್ಯಾದಿಗಳನ್ನು ಪರಿಗಣಿಸದೆ, ಜಾತಿ–ಹಣಬಲದ ಲೆಕ್ಕಾಚಾರಕ್ಕೆ ಜೋತುಬೀಳುತ್ತದೆ. ಇದರ ಪರಿಣಾಮವೇ ದೇಶದ ರಾಜಕೀಯ ಇಂದು ತಲಪಿರುವ ಅಧೋಗತಿ. ಪ್ರಜಾಪ್ರಭುತ್ವದ ಅಣಕದಲ್ಲಿ ಎಲ್ಲ ರಾಜಕೀಯ ಪಕ್ಷಗಳದೂ ಪಾಲಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಜೀಂ ಪ್ರೇಮ್‌ಜಿ ವಿ.ವಿ. ಅಧ್ಯಯನ; ಯುವಜನರ ಶೈಕ್ಷಣಿಕ ಮತ್ತು ಉದ್ಯೋಗ ಸ್ಥಿತಿಗತಿಗಳ ವರದಿ

ಪದವೀಧರರೂ ಹೆಚ್ಚು ನಿರುದ್ಯೋಗವೂ ಹೆಚ್ಚು



ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ 'ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ– 2026' ಭಾರತದಲ್ಲಿನ ವಿದ್ಯಾಭ್ಯಾಸ ಮತ್ತು ಉದ್ಯೋಗ ಸ್ಥಿತಿಗತಿಯ ಬಗ್ಗೆ ಹಲವು ಒಳನೋಟಗಳನ್ನು ಬೀರಿದೆ. ದೇಶದಲ್ಲಿ ವಿದ್ಯಾವಂತರ ಪ್ರಮಾಣ ಹೆಚ್ಚುತ್ತಿದೆ. ಅದರಲ್ಲೂ ವಿವಿಧ ಜಾತಿ, ಲಿಂಗ, ಪ್ರದೇಶಗಳ ಜನ ವಿದ್ಯಾಭ್ಯಾಸ ಪಡೆಯುವ ವಿಚಾರದಲ್ಲಿ ದಶಕಗಳಿಂದ ಇದ್ದ ಹಲವು ರೀತಿಯ ಕೊರತೆ–ಅಂತರಗಳು ಕಡಿಮೆ ಆಗಿವೆ. ಆದರೆ, ಪದವೀಧರರ ಪ್ರಮಾಣಕ್ಕೆ ತಕ್ಕಂತೆ ಉದ್ಯೋಗ ಸೃಷ್ಟಿ ಆಗದೇ ದೇಶದಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚಾಗಿದೆ. ಉದ್ಯೋಗಿಗಳ ಪ್ರಮಾಣ, ಕೌಶಲಕ್ಕೆ ತಕ್ಕಂತೆ ಎಂಥ ಉದ್ಯೋಗಗಳನ್ನು ಮುಂದಿನ ದಿನಗಳಲ್ಲಿ ಸೃಷ್ಟಿಸಲಾಗುತ್ತದೆ ಎನ್ನುವುದರ ಮೇಲೆ ದೇಶವು ಎಂಥ ಆರ್ಥಿಕತೆ ಆಗಲಿದೆ ಎನ್ನುವುದು ನಿರ್ಧಾರವಾಗುತ್ತದೆ ಎಂದು ವರದಿ ಹೇಳಿದೆ

ಪ್ರಜಾವಾಣಿ ವಾರ್ತೆ

ಭಾರತದಲ್ಲಿ ಪ್ರಪಂಚದಲ್ಲಿಯೇ ಅತಿ ಹೆಚ್ಚಿನ ಯುವಜನರಿದ್ದಾರೆ (15 ಮತ್ತು 29 ವರ್ಷದ ನಡುವೆ ಇರುವವರು). ಉದ್ಯೋಗ ಮಾಡುವ ಸಾಮರ್ಥ್ಯವುಳ್ಳ ದೇಶದ ಜನರಲ್ಲಿ ಇವರ ಪ್ರಮಾಣವು ಮೂರನೇ ಒಂದರಷ್ಟಿದೆ (ಶೇ 33). ಈ ಬೃಹತ್ ವಿದ್ಯಾವಂತ ಯುವಪಡೆಯಲ್ಲಿ ಎಷ್ಟು ಮಂದಿಯನ್ನು ಉದ್ಯೋಗ ಮಾರುಕಟ್ಟೆ ಒಳಗೊಳ್ಳುತ್ತದೆ ಎನ್ನುವುದು ದೇಶದ ಯುವಶಕ್ತಿಯು ಯಾವ ರೀತಿಯ ಆರ್ಥಿಕಶಕ್ತಿಯಾಗಿ ಮಾರ್ಪಾಡಾಗುತ್ತದೆ ಎನ್ನುವುದನ್ನು ನಿರ್ಧರಿಸುತ್ತದೆ. ಆದರೆ, ಪ್ರಸ್ತುತ ದೇಶದ ಪದವೀಧರರಲ್ಲಿ ನಿರುದ್ಯೋಗ ತೀವ್ರವಾಗಿದ್ದು, 15ರಿಂದ 25 ವರ್ಷದೊಳಗಿನ ಶೇ 40ರಷ್ಟು ಮಂದಿ, 25ರಿಂದ 29 ವರ್ಷದೊಳಗಿನ ಪದವೀಧರರಲ್ಲಿ ಶೇ 20ರಷ್ಟು ನಿರುದ್ಯೋಗಿಗಳಾಗಿದ್ದಾರೆ. 20ರಿಂದ 29 ವರ್ಷದೊಳಗಿನ 1.1 ಕೋಟಿ ಪದವೀಧರರಿಗೆ ಉದ್ಯೋಗ ಇಲ್ಲ ಎಂದು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ 'ಸ್ಟೇಟ್ ಆಫ್ ವರ್ಕಿಂಗ್ ಇಂಡಿಯಾ–2026' ವರದಿ ಹೇಳಿದೆ. ಸರ್ಕಾರದ ವಿವಿಧ ಮಾಹಿತಿಗಳ ಮೂಲಗಳನ್ನು ಆಧರಿಸಿ 40 ವರ್ಷಗಳ (1983ರಿಂದ 2023) ವಿದ್ಯಾಭ್ಯಾಸ ಮತ್ತು ಉದ್ಯೋಗದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲಾಗಿದೆ.

ಸ್ವಾತಂತ್ರ್ಯದ ನಂತರ ದೇಶದಲ್ಲಿ ವಿದ್ಯಾಭ್ಯಾಸ ಪಡೆಯುವವರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಲೇ ಇದೆ. ವಿದ್ಯಾಭ್ಯಾಸ ಪಡೆಯುವ ವಿಚಾರದಲ್ಲಿ ಬಡವರು, ಹಿಂದುಳಿದವರು, ಮಹಿಳೆಯರು, ಗ್ರಾಮೀಣ ಪ್ರದೇಶದವರು ಹೀಗೆ ಹಿಂದಿನಿಂದಲೂ ಇರುವ ಸಾಮಾಜಿಕ ಆರ್ಥಿಕ ಅಂತರಗಳು ಕಡಿಮೆಯಾಗಿವೆ. ಆದರೆ, ವಿದ್ಯಾಭ್ಯಾಸದಲ್ಲಿ ಅಸಮಾನತೆ ಇನ್ನೂ ಗಮನಾರ್ಹವಾಗಿಯೇ ಇದೆ. ಬಡವರು ಮತ್ತು ಶ್ರೀಮಂತರ ನಡುವೆ ಕೋರ್ಸ್‌ಗಳ ಆಯ್ಕೆ, ಗುಣಮಟ್ಟದ ವಿದ್ಯಾಭ್ಯಾಸದ ಲಭ್ಯತೆ ಇತ್ಯಾದಿ ವಿಚಾರಗಳಲ್ಲಿ ಅಂತರ ಇದೆ. ಇದರ ನಡುವೆಯೂ ದೇಶದಲ್ಲಿ ಪದವೀಧರರ ಸಂಖ್ಯೆಯು ಹೆಚ್ಚಾಗಿದೆ. ಆದರೆ, ಮುಖ್ಯ ಸಮಸ್ಯೆ ಏನೆಂದರೆ, ಪದವೀಧರರಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚಾಗಿದೆ. ಪದವೀಧರರಿಗೆ ಉದ್ಯೋಗ ಸಿಗುವುದು ಅನಿಶ್ಚಿತವಾಗಿದೆ, ಪದವಿಯು ಉದ್ಯೋಗವಾಗಿ ಮಾರ್ಪಾಡುಗುತ್ತಿಲ್ಲ ಎಂದು ವರದಿ ಹೇಳಿದೆ.

ಕಳೆದೊಂದು ದಶಕದಲ್ಲಿ ಉದ್ಯೋಗ ಸೃಷ್ಟಿ ಸಮರ್ಪಕವಾಗಿ ಆಗಿಲ್ಲ. ಕೋವಿಡ್ ನಂತರದಲ್ಲಿ ದೇಶದಲ್ಲಿ ಉದ್ಯೋಗಸ್ಥರ ಸಂಖ್ಯೆಯು 49 ಕೋಟಿಯಿಂದ 57.2 ಕೋಟಿಗೆ ಹೆಚ್ಚಾಗಿದೆ. 2021–22 ಮತ್ತು 2023–24ರ ನಡುವೆ ಉದ್ಯೋಗಸ್ಥ ಪುರುಷರ ಪ್ರಮಾಣವು ಶೇ 71ರಿಂದ ಶೇ 74ಕ್ಕೆ ಹೆಚ್ಚಾಗಿದ್ದರೆ, ಉದ್ಯೋಗಸ್ಥ ಮಹಿಳೆಯರಪ್ರಮಾಣವುಶೇ26ರಿಂದಶೇ34ಕ್ಕೆ ಏರಿದೆ.

ಹೆಚ್ಚು ಉದ್ಯೋಗ ಸೃಷ್ಟಿ ಆಗಿರುವುದು ಕೃಷಿ ಕ್ಷೇತ್ರದಲ್ಲಿ; 2021–22 ಮತ್ತು 2023–24ರ ನಡುವೆ 4 ಕೋಟಿ ಉದ್ಯೋಗಗಳು ಸೃಷ್ಟಿಯಾಗಿದ್ದು, ಇದರಲ್ಲಿ ಮಹಿಳೆಯರ ಸಂಖ್ಯೆಯು 3.8 ಕೋಟಿ ಆಗಿದೆ. ಬಹುತೇಕ ಪುರುಷರು ಮತ್ತು ಮಹಿಳೆಯರ ಸಂಬಳದ ಆದಾಯ ಮತ್ತು ಸ್ವಯಂ ಉದ್ಯೋಗದ ಆದಾಯವು ಏರಿಕೆಯಾಗಿಯೇ ಇಲ್ಲ. ದೇಶದಲ್ಲಿ ಆರ್ಥಿಕ ಬೆಳವಣಿಗೆಯು ಅಸಮಾನತೆಯಿಂದ ಕೂಡಿದ್ದು, ಉದ್ಯೋಗಕ್ಕಾಗಿ ಯುವಜನರು ವಲಸೆ ಹೋಗುವುದು ಮುಖ್ಯ ವಿದ್ಯಮಾನವಾಗಿದೆ ಎಂದೂ ವರದಿ ಹೇಳಿದೆ.

ವರದಿಯ ಪ್ರಮುಖಾಂಶ

- ಪದವೀಧರರು ಉದ್ಯೋಗ ಪಡೆಯುವುದು ದೇಶದಲ್ಲಿ ಬಹುದೊಡ್ಡ ಸವಾಲಾಗಿದೆ. ಪದವಿ ಪಡೆದ ವರ್ಷದೊಳಗೆ ಉದ್ಯೋಗ ಗಳಿಸುವವರ ಪ್ರಮಾಣವು ತೀರಾ ಕಡಿಮೆ ಇದೆ
- ಪದವೀಧರರ ಪ್ರಮಾಣವು ತೀವ್ರಗತಿಯಲ್ಲಿ ಏರುತ್ತಿದ್ದು, ಅದಕ್ಕೆ ತಕ್ಕಂತೆ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ. 2004ರಿಂದ 2023ರ ನಡುವೆ ಪ್ರತಿವರ್ಷ 50 ಲಕ್ಷ ಮಂದಿ ಪದವೀಧರರಾಗಿದ್ದಾರೆ. ಈ ಪೈಕಿ 28 ಲಕ್ಷ ಮಂದಿ ಮಾತ್ರ ಉದ್ಯೋಗ ಪಡೆದಿದ್ದಾರೆ. ಇವರಲ್ಲಿ ಭದ್ರತೆ ಇರುವ ಉದ್ಯೋಗ ಪಡೆದವರ ಸಂಖ್ಯೆ ತುಂಬಾ ಕಡಿಮೆ
- ಪದವೀಧರರು ಉದ್ಯೋಗ ಪಡೆದ ಆರಂಭದಲ್ಲಿ ಪಡೆಯುವ ಸಂಬಳವು ಪದವೀಧರರಲ್ಲದವರ ಆದಾಯಕ್ಕಿಂತ ಎರಡು ಪಟ್ಟು ಹೆಚ್ಚಿರುತ್ತದೆ. ಇದು ಅವರ ಜೀವಿತಾವಧಿಯಲ್ಲಿ ಹೆಚ್ಚಾಗುತ್ತಲೇ ಹೋಗುತ್ತದೆ
- ಪುರುಷರ ಆದಾಯವು ಬಹುತೇಕ ಸ್ಥಿರಗೊಂಡಿದೆ. ಉದ್ಯೋಗಸ್ಥರಾದ ನಂತರವೂ ಅವರ ಸಂಬಳವು ನಿಧಾನಗತಿಯಲ್ಲಿ ಹೆಚ್ಚಾಗುತ್ತಿದೆ. ಇದೇ ವೇಳೆ, ಉದ್ಯೋಗ ಮಾರುಕಟ್ಟೆಯಲ್ಲಿ ಮಹಿಳೆಯರು ಮತ್ತು ಪುರುಷರ ಅಂತರ ಕಡಿಮೆ ಆಗಿರುವುದು ಸಕಾರಾತ್ಮಕ ಬೆಳವಣಿಗೆ
- ತಮ್ಮ ಸಾಮಾಜಿಕ ಹಿನ್ನೆಲೆಗೆ ತಕ್ಕಂತೆ ಯುವಜನರು ವೃತ್ತಿಗಳನ್ನು ಕೈಗೊಳ್ಳುವ ಪ್ರವೃತ್ತಿ ಕ್ಷೀಣಿಸುತ್ತಿದೆ. ಎಸ್‌ಸಿ/ಎಸ್‌ಟಿ ಸಮುದಾಯಗಳ ಯುವಜನರು ತಮ್ಮ ಕುಲ/ಸಮುದಾಯ ಸಂಬಂಧಿ ವೃತ್ತಿಗಳಲ್ಲಿ ಭಾಗಿಯಾಗುವ ಪ್ರಮಾಣ ಕಡಿಮೆಯಾಗಿದೆ. 1983ರಲ್ಲಿ ಎಸ್‌ಸಿ/ಎಸ್‌ಟಿ ಜನರ ಪೈಕಿ ಶೇ 40 ಮಂದಿ ಚರ್ಮ ಮತ್ತು ಪಾದರಕ್ಷೆ ಉದ್ಯಮದಲ್ಲಿ ತೊಡಗಿದ್ದರು. 2023ರ ಹೊತ್ತಿಗೆ ಈ ಪ್ರಮಾಣವು ಶೇ 24ಕ್ಕೆ ಕುಸಿದಿದೆ
- ಪ್ರಾದೇಶಿಕ ಅಭಿವೃದ್ಧಿಯಲ್ಲಿ ಅಸಮಾನತೆ ಮತ್ತು ಉದ್ಯೋಗ ಅವಕಾಶಗಳ ಬಯಕೆಯಿಂದ ಯುವಜನರು ವಲಸೆ ಹೋಗುವ ಪ್ರವೃತ್ತಿ ಹೆಚ್ಚಾಗಿದೆ. ಯುವಜನರು ಹೆಚ್ಚಾಗಿರುವ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ರಾಜ್ಯಗಳಿಂದ ಮುಂದುವರಿದ ರಾಜ್ಯಗಳಿಗೆ ವಲಸೆ ಹೆಚ್ಚುತ್ತಿದೆ. ಮುಂದುವರಿದ ರಾಜ್ಯಗಳು ತಮ್ಮ ಕಾರ್ಮಿಕ ಅಗತ್ಯಗಳಿಗಾಗಿ ವಲಸೆಗಾರರನ್ನೇ ಅವಲಂಬಿಸಿವೆ

2030ರ ಬಳಿಕ ಯುವಜನರ ಸಂಖ್ಯೆ ಕುಸಿತ



ಜಗತ್ತಿನಲ್ಲಿರುವ ಯುವ ಆರ್ಥಿಕತೆಯಲ್ಲಿ ಭಾರತವೂ ಒಂದು. ದೇಶದಲ್ಲಿ 15ರಿಂದ 29 ವರ್ಷ ವಯಸ್ಸಿನ ಜನಸಂಖ್ಯೆ 36.7 ಕೋಟಿಯಷ್ಟಿದೆ. ಅಂದರೆ ದುಡಿಯುವ ವಯಸ್ಸಿನ ಜನಸಂಖ್ಯೆಯ ಮೂರನೇ ಒಂದರಷ್ಟು. ಶಿಕ್ಷಣ ಪಡೆಯುತ್ತಿರುವ ಯುವ ಸಮುದಾಯದವರನ್ನು ಬಿಟ್ಟರೆ ಈ ಸಂಖ್ಯೆ 26.3 ಕೋಟಿಯಷ್ಟಾಗುತ್ತದೆ. ಇದು ದೇಶದ ಸಂಭಾವ್ಯ ಕಾರ್ಮಿಕ ಬಲವಾಗಿದೆ. ಭಾರತದಲ್ಲಿ ಈ ಮಟ್ಟಿಗೆ ಶಿಕ್ಷಣ ಪಡೆದ ಮತ್ತು ಕೌಶಲ ಹೊಂದಿದ ಯುವಜನರನ್ನು ಇದುವರೆಗೆ ಕಂಡಿಲ್ಲ. 2023ರಲ್ಲಿ ದೇಶದಲ್ಲಿ ಉದ್ಯೋಗದಲ್ಲಿರುವ ಜನಸಂಖ್ಯೆಯು ಒಟ್ಟು ಜನಸಂಖ್ಯೆಯ ಶೇ 70ರಷ್ಟು ಇತ್ತು. ಜನಸಂಖ್ಯೆಯ ಲಾಭವನ್ನು ಗರಿಷ್ಠ ಪ್ರಮಾಣದಲ್ಲಿ ದೇಶ ಪಡೆಯಬೇಕು ಎಂದಿದ್ದರೆ, ಈ ಯುವ ಜನಾಂಗಕ್ಕೆ ಉದ್ಯೋಗ ಸಿಗಬೇಕು ಎಂದು ವರದಿ ಹೇಳಿದೆ.

ಸದ್ಯ, ದೇಶಕ್ಕೆ ಜನಸಂಖ್ಯೆಯಿಂದ ಆಗುತ್ತಿರುವ ಪ್ರಯೋಜನಗಳು ಅತಿ ಹೆಚ್ಚಿದ್ದು, ಇದು ಅಂತಿಮ ಘಟ್ಟದಲ್ಲಿದೆ. 2030ರ ನಂತರ ಯುವ ಸಮುದಾಯದ ಜನಸಂಖ್ಯೆ ಕಡಿಮೆಯಾಗಿ, ವಯಸ್ಕರ ಸಂಖ್ಯೆ ಹೆಚ್ಚಾಗುವುದರಿಂದ, ದುಡಿಯುವ ವಯಸ್ಸಿನ ಜನಸಂಖ್ಯೆ ಕಡಿಮೆಯಾಗಿ ಅವರನ್ನು ಅವಲಂಬಿಸಿರುವ ಜನಸಂಖ್ಯೆಯ ಹೆಚ್ಚಾಗುವ ನಿರೀಕ್ಷೆ ಇದೆ. ಇದರಿಂದಾಗಿ ಜನಸಂಖ್ಯೆಯಿಂದಾಗುವ ಲಾಭ ಇಳಿಮುಖವಾಗಲಿದೆ ಎಂದು ವರದಿ ವಿವರಿಸಿದೆ.

ಐಟಿ, ಶಿಕ್ಷಣ, ಆರೋಗ್ಯ ಕ್ಷೇತ್ರಗಳಲ್ಲಿ ಮಹಿಳೆಯರು

ಪುರುಷರು ಮತ್ತು ಮಹಿಳೆಯರು ಕೃಷಿಯೇತರ ಉದ್ಯೋಗಗಳಲ್ಲಿ ತೊಡಗಿಕೊಳ್ಳುತ್ತಿರುವುದೂ ಹೆಚ್ಚುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಯುವ ಮಹಿಳೆಯರು ತಯಾರಿಕಾ ವಲಯದಲ್ಲಿ ಹೆಚ್ಚು ಕೆಲಸ ಮಾಡುತ್ತಿದ್ದಾರೆ. ಅದರಲ್ಲೂ ಜವಳಿ ಉದ್ದಿಮೆಗಳಲ್ಲಿ ಉದ್ಯೋಗಿಗಳಾಗಿದ್ದಾರೆ. ಹಿರಿಯ ಮಹಿಳೆಯರು ಸಮುದಾಯ ಕ್ಷೇತ್ರಗಳಲ್ಲಿ ತೊಡಗಿಕೊಂಡಿದ್ದಾರೆ. ಪುರುಷರಲ್ಲಿ ಯುವಕರು ವ್ಯಾಪಾರ, ಸಾರಿಗೆ, ಕಟ್ಟಡ ನಿರ್ಮಾಣದಲ್ಲಿ ತೊಡಗಿಕೊಂಡಿದ್ದಾರೆ.

ಕಂಪ್ಯೂಟರ್, ಮಾಹಿತಿ ತಂತ್ರಜ್ಞಾನದ ಬಳಕೆ ಹೆಚ್ಚಾಗುತ್ತಿದ್ದಂತೆಯೇ, ಆ ಕ್ಷೇತ್ರದಲ್ಲಿ ಉದ್ಯೋಗಕ್ಕೆ ಸೇರುತ್ತಿರುವ ಯುವಕ–ಯುವತಿಯರ ಸಂಖ್ಯೆ ಜಾಸ್ತಿಯಾಗುತ್ತಿದೆ. 2023ರಲ್ಲಿ ಕಂಪ್ಯೂಟರ್, ಮಾಹಿತಿ ತಂತ್ರಜ್ಞಾನ, ಆರೋಗ್ಯ, ಶಿಕ್ಷಣ ಕ್ಷೇತ್ರಗಳಲ್ಲಿ ಯುವ ಸಮುದಾಯ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ಪಡೆದಿತ್ತು. ಕಂಪ್ಯೂಟರ್ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳಲ್ಲಿ ತೊಡಗಿಕೊಂಡಿದ್ದ ಯುವಕರ ಪ್ರಮಾಣ ಶೇ 12.9ರಷ್ಟು ಇದ್ದಿದ್ದರೆ, ಮಹಿಳೆಯರ ಪ್ರಮಾಣ ಶೇ 18.1ರಷ್ಟಿತ್ತು.

ಶಿಕ್ಷಣ ಕ್ಷೇತ್ರದಲ್ಲಿ ಗರಿಷ್ಠ ಶೇ 23.1ರಷ್ಟು ಯುವ ಮಹಿಳೆಯರು 2023ರಲ್ಲಿ ಉದ್ಯೋಗದಲ್ಲಿದ್ದರು. ಈ ಕ್ಷೇತ್ರದಲ್ಲಿದ್ದ ಯುವ ಪುರುಷರ ಪ್ರಮಾಣ ಶೇ 5.4ರಷ್ಟು ಮಾತ್ರ. ಆರೋಗ್ಯ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಶೇ 13.5ರಷ್ಟು ಯುವತಿಯರು ಉದ್ಯೋಗದಲ್ಲಿದ್ದರು. ಯುವಕರು ಶೇ 13.9ರಷ್ಟು ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ತೊಡಗಿಕೊಂಡಿದ್ದರು.

ಯುವಕರು ಕೃಷಿಯಿಂದ ವಿಮುಖ

ಬೇರೆ ಬೇರೆ ಕ್ಷೇತ್ರಗಳಲ್ಲಿ ಆಗಿರುವ ಉದ್ಯೋಗ ಸೃಷ್ಟಿಯನ್ನು ಗಮನಿಸಿದರೆ, ಈಗಲೂ ಕೃಷಿ ಕ್ಷೇತ್ರವೇ ಹೆಚ್ಚು ಜನರಿಗೆ ಉದ್ಯೋಗ ನೀಡಿದೆ. ವಯಸ್ಸಿನ ಭೇದವಿಲ್ಲದೆ, ಉದ್ಯೋಗ ಮಾಡುವ ವಯೋಮಾನದ ವ್ಯಾಪ್ತಿಯಲ್ಲಿ ಬರುವ ಪುರುಷರು ಮತ್ತು ಮಹಿಳೆಯರಲ್ಲಿ ಹೆಚ್ಚಿನವರು ಕೃಷಿ ಚಟುವಟಿಕೆಯನ್ನೇ ಸಂಪಾದನೆಯ ಮೂಲವನ್ನಾಗಿಸಿಕೊಂಡಿದ್ದಾರೆ.

ಹಾಗಿದ್ದರೂ, 20ರಿಂದ 29 ವರ್ಷದೊಳಗಿನ ಯುವ ಪುರುಷರು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. 2017ರಿಂದ ಈ ಪ್ರವೃತ್ತಿ ಹೆಚ್ಚು ಕಂಡು ಬರುತ್ತಿದೆ. ಕೃಷಿಯಲ್ಲಿ ತೊಡಗಿಕೊಂಡಿರುವ 30ರಿಂದ 64 ವರ್ಷದೊಳಗಿನ ಪುರುಷರ ಸಂಖ್ಯೆ ಕಡಿಮೆಯಾಗುತ್ತಿದ್ದರೂ, ಅದು ಗಮನಾರ್ಹ ಪ್ರಮಾಣದಲ್ಲಿಲ್ಲ. ಕೃಷಿಯನ್ನೇ ಗಳಿಕೆಯ ಮೂಲವನ್ನಾಗಿಸಿಕೊಂಡ ಯುವ ಮತ್ತು ವಯಸ್ಕ ಮಹಿಳೆಯರ ಸಂಖ್ಯೆ ಹೆಚ್ಚಾಗುತ್ತಿದೆ.



ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ದೇಶದಲ್ಲಿ ಇನ್ನು ಎರಡು ದಿನಗಳಿಗೆ ಆಗುವಷ್ಟು ಮಾತ್ರ ಪೆಟ್ರೋಲ್ ಇದೆ ಎಂದು ಪೆಟ್ರೋಲಿಯಂ ಸಚಿವಾಲಯ ಹೇಳಿದೆ ಎಂದು ಅನುಷಿ ತಿವಾರಿ ಎಂಬ ಎಕ್ಸ್ ಬಳಕೆದಾರರು ಪೋಸ್ಟ್ ಮಾಡಿದ್ದಾರೆ. ಹೊಸ ತೈಲ ಭಾರತಕ್ಕೆ ಬರಲು ಎಂಟು ದಿನಗಳು ಬೇಕು ಎಂದೂ ಅದರಲ್ಲಿ ಉಲ್ಲೇಖಿಸಲಾಗಿದೆ. ಮೋದಿ ನೇತೃತ್ವದ ವಿಫಲ ಸರ್ಕಾರವು 150 ಕೋಟಿ ಜನರ ಬದುಕನ್ನು ಕಷ್ಟಕ್ಕೆ ದೂಡಿದೆ ಎಂದೂ ಪೋಸ್ಟ್‌ನಲ್ಲಿ ಹೇಳಲಾಗಿದೆ. ಪೆಟ್ರೋಲ್ ಬಂಕ್ ಬಳಿ ಭಾರಿ ಸಂಖ್ಯೆಯಲ್ಲಿ ಜನರು ತಮ್ಮ ದ್ವಿಚಕ್ರ ವಾಹನಗಳೊಂದಿಗೆ ಸರತಿ ಸಾಲಿನಲ್ಲಿ ನಿಂತಿರುವ ಫೋಟೊ ಕೂಡ ಅದರಲ್ಲಿದೆ. ಆದರೆ, ಇದು ಸುಳ್ಳು ಮಾಹಿತಿ.

ಪೆಟ್ರೋಲಿಯಂ ಸಚಿವಾಲಯವು ಈ ರೀತಿಯ ಘೋಷಣೆ ಮಾಡಿದೆಯೇ ಎಂಬುದನ್ನು ತಿಳಿಯಲು ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಲಾಯಿತು. ಆದರೆ, ಅಧಿಕೃತ ಮಾಹಿತಿ ಅಥವಾ ಮಾಧ್ಯಮ ವರದಿಗಳು ಎಲ್ಲೂ ಸಿಗಲಿಲ್ಲ. ಇನ್ನಷ್ಟು ಹುಡುಕಿದಾಗ, ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಅವರು ಸುದ್ದಿಗೋಷ್ಠಿಯಲ್ಲಿ ನೀಡಿದ್ದ ಹೇಳಿಕೆಯ ವರದಿ ಇದೇ 24ರಂದು ದಿ ಹಿಂದೂನಲ್ಲಿ ಪ್ರಕಟವಾಗಿದ್ದು ಸಿಕ್ಕಿತು. 'ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದಾಸ್ತಾನು ಅಗತ್ಯವಿರುವಷ್ಟು ಇದೆ' ಎಂದು ಹೇಳಿದ್ದರು. ಮತ್ತಷ್ಟು ಹುಡುಕಾಡಿದಾಗ ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ ಅಧಿಕೃತ 'ಎಕ್ಸ್' ಖಾತೆಯಲ್ಲಿ ವದಂತಿಗಳ ಬಗ್ಗೆ ನೀಡಿದ ಸ್ಪಷ್ಟನೆಯೂ ಸಿಕ್ಕಿತು. ಹಾಗಾಗಿ, ಎರಡೇ ದಿನದಲ್ಲಿ ಪೆಟ್ರೋಲ್ ಮುಗಿಯಲಿದೆ ಎಂಬರ್ಥದ 'ಎಕ್ಸ್' ಪೋಸ್ಟ್ ಸುಳ್ಳು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಇಮಾಂ ಎಂಬ ಬೆಳಕು

ದಾದಾಪೀರ್ ನವಿಲೇಹಾಳ್

ಇವರು ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಸ್ಥಾನದಲ್ಲಿ ಸಚಿವರಾಗಿದ್ದ ದಿನಗಳು. ಪರಿಚಿತರೊಬ್ಬರ ಮಗ ತನ್ನ ಗೆಳೆಯನ ಜೊತೆಯಲ್ಲಿ ಇವರನ್ನು ಕಾಣಲು ಬಂದು 'ನನ್ನ ಮಿತ್ರನಾದ ಇವನು ಬಡವ, ದಲಿತ. ಹಾಜರಾತಿ ಕಡಿಮೆ ಇರುವ ಕಾರಣಕ್ಕೆ ಇವನಿಗೆ ಪರೀಕ್ಷೆ ಬರೆಯಲು ಅನುಮತಿ ಸಿಕ್ಕಿಲ್ಲ. ನೀವು ಮೈಸೂರು ವಿಶ್ವವಿದ್ಯಾಲಯದ ಕುಲಸಚಿವರಿಗೆ ಹೇಳಿ ಅನುಮತಿ ಕೊಡಿಸಬೇಕು' ಅಂತ ಮನವಿ ಮಾಡಿದರು. ಕುಲಸಚಿವರು ಮುಜುಗರ ಪಟ್ಟುಕೊಳ್ಳಬಹುದು, ನನ್ನ ಮಾತನ್ನು ಕೇಳಲೂಬಹುದು. ಆದರೆ ಮಂತ್ರಿಗಳು ಹೀಗೆ ಹೇಳಿದರಲ್ಲಾ ಅನ್ನುವ ಭಾವನೆಯೊಂದು ಅವರಲ್ಲಿ ಕಡೆಯವರೆಗೂ ಉಳಿದುಬಿಡುತ್ತದೆ ಎಂದು ಯೋಚಿಸಿದ ಮಂತ್ರಿಗಳು 'ಒಂದು ಕೆಲಸ ಮಾಡಿ. ನೀವು ಮುಂದಿನ ವರ್ಷ ಮತ್ತೆ ತರಗತಿಗೆ ತಪ್ಪದೆ ಹೋಗಿ ಪರೀಕ್ಷೆ ಕಟ್ಟಿ ಬರೆಯಿರಿ. ನಿಮ್ಮ ಒಂದು ವರ್ಷದ ಊಟ ವಸತಿ ಪರೀಕ್ಷೆ ಫೀಜು ಸೇರಿದಂತೆ ಎಲ್ಲ ವೆಚ್ಚವನ್ನು ಪೂರ್ತಿಯಾಗಿ ನಾನು ಭರಿಸುತ್ತೇನೆ' ಎಂದು ಹೇಳಿ ಅದರಂತೆ ನಡೆದುಕೊಂಡರು.

ಮುಂದೆ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದ ಇವರು ಮತಯಾಚನೆ ಮಾಡುತ್ತಾ ಧನಿಕರೊಬ್ಬರ ಮನೆಗೆ ಬಂದರು. ತಮ್ಮ ವಿಶಾಲವಾದ ಮನೆಯ ಜಗಲಿಯಲ್ಲಿ ಕುಳಿತಿದ್ದ ಶ್ರೀಮಂತರು ಇವರನ್ನು ನೋಡಿ, 'ಬಾರಪ್ಪಾ ಬಾ, ಬಹಳ ದಿನಗಳ ಮೇಲೆ ಬಂದೆಯಲ್ಲಾ ಏನು ಸಮಾಚಾರ?' ಎಂದರು. ಅದಕ್ಕೆ ಅಭ್ಯರ್ಥಿಯು, 'ನಮ್ಮಂಥವರು ಯಾಕ್ ಬರ್ತಾರಪ್ಪಾ, ಚುನಾವಣೆ ಬಂತಲ್ಲಾ, ಓಟು ಕೇಳೋಕೆ ಬಂದಿದೀನಿ' ಅಂದರು. ತಕ್ಷಣ ಆ ಧನಿಕರು 'ಅಯ್ಯಯ್ಯೋ, ಎಂಥ ಕೆಲಸ ಆಯ್ತಲ್ಲ ಮಾರಾಯ, ನಿನ್ನೆದುರಿಗೆ ಯಾರೋ ನಿಂತಿದಾನಂತಲ್ಲಾ, ಅವನು ಬಂದಿದ್ದ, ಅವನಿಗೆ ಓಟು ಕೊಡ್ತೀನಿ ಅಂತ ಮಾತು ಕೊಟ್ಟುಬಿಟ್ಟೆನಲ್ಲಪ್ಪಾ' ಅಂದರು. ಆ ಧನಿಕರನ್ನು ಬಾಚಿ ತಬ್ಬಿಕೊಂಡು ಬೆನ್ನು ತಟ್ಟುತ್ತಾ 'ನಿನ್ನ ಮಾತು ಉಳಿಸಿಕೋ, ಅವನಿಗೇ ಓಟು ಕೊಡು' ಎಂದು ಗೆಲುವಾದ ಮುಖದಿಂದ ಮುಂದಿನ ಮನೆಗಳತ್ತ ತಮ್ಮ ಮತಯಾಚನೆ ಕಾರ್ಯವನ್ನು ಮುಂದುವರಿಸಿದರು. ಆ ಚುನಾವಣೆಯಲ್ಲಿ ಇವರು ಗೆದ್ದು ಲೋಕಸಭೆ ಪ್ರವೇಶಿಸಿದರು. ಇವರು ಜಗಳೂರು ಮಹಮದ್ ಇಮಾಂ.

ಹೋಟೆಲ್, ಮಾರ್ಕೆಟ್, ಬಸ್ ನಿಲ್ದಾಣ ಎಲ್ಲೇ ಇರಲಿ, ಜನ ರಾಜಕೀಯವನ್ನೇ ಮಾತಾಡುತ್ತಿರುತ್ತಾರೆ. ಒಂದು ಜಾತಿಗೆ ಸೇರಿದವರು ತಂತಮ್ಮ ಜಾತಿಯ ನಾಯಕನ ಪ್ರಭಾವ, ಸಂಪತ್ತನ್ನು ಕುರಿತು ಅಭಿಮಾನದಿಂದ ಹೇಳುತ್ತಾ ಅನ್ಯಜಾತಿಯ ನಾಯಕರನ್ನು ಬಯ್ಯುತ್ತಾ ಖುಷಿಪಡುತ್ತಾರೆ. ಆ ಗುಂಪಿನಲ್ಲಿ ಬೇರೆ ಜಾತಿ, ಧರ್ಮದವರು ಇದ್ದರೆ ಅವರ ಚರ್ಚೆ ಜಾತಿ ಧರ್ಮ ಮೀರಿ ವಿಶ್ವಮಾನವನ ಸಂದೇಶ ಸಾರುತ್ತದೆ. ಇಂತಹ ಆಷಾಢಭೂತಿಗಳನ್ನು ಇಂದಿನ ರಾಜಕಾರಣ ರೂಪಿಸಿಬಿಟ್ಟಿದೆ.

ಅದೊಂದು ಕಾಲವಿತ್ತು. ರಾಜಕಾರಣವನ್ನು ಜನರ ಸೇವೆಗೆ ಮೀಸಲಾಗಿಟ್ಟ, ರಾಜ್ಯಾಧಿಕಾರವನ್ನು ಸ್ವಜನಪಕ್ಷಪಾತದಿಂದ ದೂರವಿಟ್ಟ ಕಾಲ. ಸಾರ್ವಜನಿಕ ಹಣಕಾಸನ್ನು ಲೋಕದ ಜನರಿಗಾಗಿಯೇ ಬಳಸುತ್ತಿದ್ದ ಕಾಲ. ಕುಟುಂಬದ ಮತ್ತೊಬ್ಬರನ್ನು ರಾಜಕಾರಣದ ಬಾಗಿಲಿಗೆ ತರಲು ಹೇಸುತ್ತಿದ್ದ ಕಾಲ. ಚರಿತ್ರೆ, ರಾಜನೀತಿ, ಸಾಹಿತ್ಯ, ತತ್ವಜ್ಞಾನಗಳನ್ನೆಲ್ಲ ಓದುತ್ತಾ ರಾಜಕೀಯಕ್ಕೆ ಬೌದ್ಧಿಕ ಘನತೆ ತುಂಬುತ್ತಿದ್ದ ಕಾಲ.

ಇಮಾಂ ಅವರ ಸಮಕಾಲೀನ ರಾಜಕಾರಣ ಹೀಗೆಯೇ ಇತ್ತು. ಯಾವಾಗಲೂ ವಿರೋಧ ಪಕ್ಷದಲ್ಲಿದ್ದ ಅವರನ್ನು ರಾಜ್ಯಪಾಲರನ್ನಾಗಿ ಮಾಡುತ್ತೇವೆ ಎಂದರೆ ನಯವಾಗಿ ನಿರಾಕರಿಸಿದರು. ಜಾತ್ಯತೀತತೆಯ ಮಾದರಿಯಂತಿದ್ದ ಅವರು ಆಸ್ಪತ್ರೆಯಲ್ಲಿದ್ದಾಗ ತರಳಬಾಳು ಹಿರಿಯ ಗುರುಗಳು ಆರೋಗ್ಯ ವಿಚಾರಿಸಲು ಬಂದು 'ಈಗಿನ ರಾಜಕಾರಣದ ಬಗ್ಗೆ ನಿಮಗೇನನ್ನಿಸುತ್ತದೆ?' ಅಂತ ಕೇಳುತ್ತಾರೆ. 'ಕ್ಯಾಕರಿಸಿ ಉಗೀಬೇಕು ಅನಿಸುತ್ತೆ' ಎನ್ನುತ್ತಾರೆ ಇಮಾಂ. ಎಂಬತ್ತರ ದಶಕದಲ್ಲಿ ಆಡಿದ ಈ ಮಾತು ಇಮಾಂ ಅವರ ಸಾತ್ವಿಕ ಸಿಟ್ಟಿನ ಪ್ರತೀಕ, ನೈತಿಕ ನೋವಿನ ಸಂಕೇತ. ನಾವು ನಮ್ಮ ರಾಜಕಾರಣವನ್ನು ಮತ್ತೆ ಮಾನವೀಯಗೊಳಿಸಲು ಇಮಾಂ ಅಂತಹವರ ಇತಿಹಾಸವನ್ನು ನೆನೆಯುತ್ತಿರಬೇಕು. ❖

ಪದಬಂಧ 6358

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಇದು ಇಹಲೋಕಕ್ಕೆ ಸಂಬಂಧಿಸಿದ್ದು (3)
4. ಪುಸ್ತಕದ ಬಳಿಯಿರಿಸಿದ ತಲೆ (3)
6. ಸೂರ್ಯನ ರಶ್ಮಿಯಿದು (5)
7. ತಡಸಲನ್ನು ಸೇರುವಾಗಲೇ ನಿಧಾನ! (2)
9. ಶಹನಾಯಿಯನ್ನು ಮೂಸುತ್ತಿರುವ ಶುನಕ (2)
10. ನಾಗರಿಕನ ಹತ್ತಿರವಿರುವ ಸ್ತ್ರೀ (2)
11. ಕಲಾವಿದನಿಗಾಗಿ ತೆರೆದ ಬಾಗಿಲು (2)
16. ಮನುಷ್ಯನನ್ನು ತಿನ್ನುವ ಪ್ರಾಣಿ (5)
17. ಕಮಂಡಲು ಹಿಡಿದು ನೋಡಿದ ಸಮುದ್ರ (3)
18. ಸಂಪೂರ್ಣ ನಾಶವಿದು (3)

ಮೇಲಿಂದ ಕೆಳಕ್ಕೆ

1. ಇಂದ್ರನ ಆನೆಯಿದು (4)
2. ಕಡಿಯಲು ಬಂದಿರುವ ಭಲ್ಲೂಕ (3)
3. ಕಿಣಿ ಕಿಣಿ ಶಬ್ದ ಮಾಡುವ ಕಿರುಗೆಜ್ಜೆ (3)
4. ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
5. ಇನ್ನೂ ಬಲಿಯದಿರುವ ಕಾಯಿ (4)
8. ಅಗಲ ಬಾಯುಳ್ಳ ಲೋಹದ ಪಾತ್ರೆ (3)
9. ದೇವರನ್ನು ನಂಬದವನು (3)
10. ನಡುವೆ ಗರಿ ಹಿಡಿದಿರುವ ಸುಸಂಸ್ಕೃತ (4)
12. ಹತ್ತನೆಯ ಒಂದು ಭಾಗ (4)
13. ಪ್ರವಾಹ ಅಥವಾ ನದಿಯೂ ಆದೀತು (3)
14. ಭವದಲ್ಲಿ ಕೊನೆಗೊಂದಿರುವ ಹುಟ್ಟು (3)
15. ಈತ ಕೆಟ್ಟ ಕವಿ (3)



6357ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

3. ಅನುರಾಗ 5. ರಾವಣ 6. ವಾತಾಯನ 8. ತಡಸಲು 12. ಜನಹಿತ 14. ಪರಧನ 15. ನಜರು 16. ರಸಾಯನ

ಮೇಲಿಂದ ಕೆಳಕ್ಕೆ:

1. ವರಾನ್ವೇಷಣೆ 2. ಗುಣವಂತ 3. ಅಹವಾಲು 4. ಗಹನ 7. ಯಮಿ 9. ಸಜ್ಜನ 10. ಮಂದ ಮಾರುತ 11. ವಾರ 12. ಜನಮನ 13. ತಲ್ಲೀನತೆ 14. ಪಗಾರ

ಸುಡೊಕು 6742

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	6				8			5
1		3		6		8		4
	8		5					
	9			7			5	
		5	9		3	4		
7				1				9
	7		8		1		4	
4		9				5		7
	3		4		7		1	2

6741 ಸುಡೊಕು

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

30 ಮಾರ್ಚ್ 2026 ಸೋಮವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ದ್ವಾದಶಿ ಗಂ. 7-10 ನಕ್ಷತ್ರ: ಮಘ ಗಂ. 14-48 ಯೋಗ: ಶೂಲ ಗಂ. 16-51 ಕರಣ: ಬಾಲವ ಗಂ 7-10 ಮೀನ ಮಾಸದ 15 ನೇ ದಿನ. ಮಳೆ ನಕ್ಷತ್ರ : ಉತ್ತರಾಭಾದ್ರ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00 , ಸೂರ್ಯೋದಯ : 06-31 ಸೂರ್ಯಾಸ್ತ : 06-39, ಮುಸ್ಲಿಂ ದಿನಾಂಕ : 10 ಶವ್ವಾಲ್ , ಅದೃಷ್ಟ ಸಂಖ್ಯೆ : 9, 2

ಮೇಷ: ಹಿಂದಿನಿಂದ ಬಂದ ಕಷ್ಟ ಕಾರ್ಪಣ್ಯಗಳಿಗೆ ಮಾರ್ಗದರ್ಶಕರ ಮೂಲಕ ದಾರಿ ಸಿಗುವುದು ನಿಶ್ಚಿತ. ರಸ ಪದಾರ್ಥಗಳ ವ್ಯಾಪಾರಸ್ಥರಿಗೆ ಅನುಕೂಲಕರ ದಿನ.

ವೃಷಭ: ಗುತ್ತಿಗೆದಾರರು ಹಣ ಉಳಿಸುವ ಪ್ರಯತ್ನಕ್ಕಿಂತ ಹೆಸರು ಸಂಪಾದಿಸುವ ವಿಷಯಕ್ಕೆ ಗಮನನೀಡಿ. ಹಣಕಾಸಿನ ವಿಚಾರದಲ್ಲಿ ದಾಕ್ಷಿಣ್ಯ ಸ್ವಭಾವ ಹೊಂದಿದರೆ ನಷ್ಟ ಸಂಭವಿಸಲಿದೆ. ಯಾತ್ರೆಯ ಯೋಚನೆ ಬರಲಿದೆ.

ಮಿಥುನ: ಸ್ವ ಉದ್ಯೋಗ ಪ್ರಾರಂಭಿಸುವ ಯೋಚನೆಗೆ ನಿಯೋಜಿತ ರೀತಿಯಲ್ಲಿ ತಯಾರಿಯ ಹಂತ ಪ್ರಾರಂಭವಾಗುವುದು. ಉದಯೋನ್ಮುಖ ತಾರೆಯರಿಗೆ ಅವಕಾಶ ಸಿಗಲಿದೆ.

ಕರ್ಕಾಟಕ: ಅನಿವಾರ್ಯ ಪರಿಸ್ಥಿತಿಗೂ ಯಾರಿಗೂ ಸಾಲ ಕೊಡಬೇಡಿ. ಅವಿವಾಹಿತರಿಗೆ ಸೋದರ ಮಾವನ ಸಹಾಯದಿಂದ ವಿವಾಹ ಸಂಬಂಧಗಳು ಕೂಡಿ ಬರಲಿವೆ.

ಸಿಂಹ: ತಾಂತ್ರಿಕ ಉದ್ಯೋಗಿಗಳಿಗೆ ವೃತ್ತಿ ತಾತ್ಕಾಲಿಕ ಸಮಾಧಾನವನ್ನು ತಂದರೂ ಬದಲಾವಣೆಗೆ ಅವಕಾಶ ಇರುತ್ತದೆ. ಬಂದ ಅವಕಾಶವನ್ನು ಬಳಸಿಕೊಳ್ಳಿ. ಚಿನ್ನಾಭರಣ ವ್ಯಾಪಾರಿಗಳಿಗೆ ಲಾಭ.

ಕನ್ಯಾ: ನಕಾರಾತ್ಮಕ ಆಲೋಚನೆಗಳನ್ನು ಬಿಟ್ಟು ಸಕಾರಾತ್ಮಕವಾಗಿ ಯೋಚಿಸಿದರೆ ಅಭಿವೃದ್ಧಿಯ ಹಾದಿ ಹಿಡಿಯುವಿರಿ. ಉಪನ್ಯಾಸಕರಿಗೆ, ಸಂಗೀತಗಾರರಿಗೆ ಸನ್ಮಾನದಂತಹ ಗೌರವ ಸಿಗಲಿದೆ.

ತುಲಾ: ವೈಯಕ್ತಿಕ ಹಾಗೂ ವೃತ್ತಿ ಚಟುವಟಿಕೆಯಲ್ಲಿ ಯಶಸ್ಸು ಸಾಧಿಸಲು ಕೊಂಚ ಶ್ರಮ ವಹಿಸಬೇಕಾದೀತು. ಚಾಲಕ ವೃತ್ತಿಯವರು ಕೆಲಸದಲ್ಲಿ ಒತ್ತಡ ಎದುರಿಸಬೇಕಾಗುವುದು. ಆರೋಗ್ಯ ಉತ್ತಮವಾಗಿರುತ್ತದೆ.

ವೃಶ್ಚಿಕ: ಸ್ನೇಹಿತರಲ್ಲಿ ಸಂಶಯ, ಅಪನಂಬಿಕೆ ಬಾರದಂತೆ ಮನಸ್ಥಿತಿ ಕಾಪಾಡಿಕೊಳ್ಳಿ. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಅಗತ್ಯಗಳನ್ನು ಪೂರೈಸಿ. ಸಿದ್ಧಿವಿನಾಯಕನಿಗೆ ಸೇವೆ ಮಾಡುವುದರಿಂದ ಶುಭ.

ಧನು: ಮೃದು ಮನಸ್ಸು ವೃತ್ತಿಯಲ್ಲಿ ಹೊಂದಿಕೊಳ್ಳಲು ಉಪಯೋಗವಾಗುವುದು. ಸಮಸ್ಯೆಗಳನ್ನು ನಾಜೂಕಾಗಿ ಬಗೆಹರಿಸಿಕೊಳ್ಳುವ ಬಗ್ಗೆ ಗಮನ ನೀಡಿ. ಆಲಸ್ಯತನವನ್ನು ದೂರಮಾಡಿ. \

ಮಕರ: ಮನೆಯ ವಿಷಯಗಳತ್ತ, ದೈನಂದಿನ ಆಗುಹೋಗುವ ಬಗ್ಗೆ ಹೆಚ್ಚಿನ ಗಮನಹರಿಸ ಬೇಕಾಗುವುದು. ಆತ್ಮೀಯರೊಂದಿಗೆ ಮನಸ್ಸಿನ ಭಾವನೆಗಳನ್ನು ಹಂಚಿಕೊಳ್ಳುವಿರಿ. ಸಹೋದರರೊಂದಿಗೆ ಕಾಲ ಕಳೆಯುವಿರಿ.

ಕುಂಭ: ದೇವತಾನುಗ್ರಹದ ಕೊರತೆ, ಮನುಷ್ಯ ಪ್ರಯತ್ನವೂ ಇಲ್ಲದ ಕಾರಣ ಯತ್ನಿಸಿದ ಕಾರ್ಯ ವಿಳಂಬವಾಗುವುದು. ಉದ್ಯೋಗದಲ್ಲಿ ಎದುರಾಗಿದ್ದ ಚಿಂತೆ ದೂರಾಗುವುದು. ಕೆಲಸಕ್ಕೆ ನೇರ ಆಯ್ಕೆಗೊಳ್ಳುವ ಸಂಭವವಿದೆ.

ಮೀನ: ಮುಂದಾಲೋಚನೆ ಇಲ್ಲದೇ ಭರವಸೆಯನ್ನೂ ನೀಡಬೇಡಿ. ಆಡಿದ ಮಾತನ್ನು ಉಳಿಸಿಕೊಳ್ಳುವುದು ಕಷ್ಟವಾಗಲಿದೆ. ಸಣ್ಣ-ಪುಟ್ಟ ವಿಚಾರಕ್ಕೂ ನೆರೆಹೊರೆಯವರ ಕಿರಿಕಿರಿ ತಪ್ಪದು.

ಗುಂಡಣ್ಣ



₹1.16 ಲಕ್ಷ ಕೋಟಿ ವಾಪಸ್

ಸಂಘರ್ಷದಿಂದ ಹೂಡಿಕೆ ಹಿಂಪಡೆದ ವಿದೇಶಿ ಹೂಡಿಕೆದಾರರು

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದ ಸಂಘರ್ಷದಿಂದಾಗಿ ಮಾರ್ಚ್ ತಿಂಗಳ ಆರಂಭದಿಂದ 27ರವರೆಗೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಪೇಟೆಯಿಂದ ₹1.16 ಲಕ್ಷ ಕೋಟಿ (ಸುಮಾರು 12.3 ಬಿಲಿಯನ್ ಡಾಲರ್) ಬಂಡವಾಳವನ್ನು ವಾಪಸ್ ಪಡೆದಿದ್ದಾರೆ.

ರೂಪಾಯಿ ಮೌಲ್ಯ ಇಳಿಕೆ ಮತ್ತು ದೇಶದ ಬೆಳವಣಿಗೆಯ ಮೇಲೆ ಕಚ್ಚಾ ತೈಲದ ದರ ಹೆಚ್ಚಳವು ಪರಿಣಾಮ ಬೀರಬಹುದು ಎಂಬ ಆತಂಕವು ವಿದೇಶಿ ಬಂಡವಾಳದ ಹೊರಹರಿವಿಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

2024ರ ಅಕ್ಟೋಬರ್ ತಿಂಗಳಿನಲ್ಲಿ ವಿದೇಶಿ ಹೂಡಿಕೆದಾರರು ದೇಶದ ಷೇರುಪೇಟೆಯಿಂದ ₹94,017 ಕೋಟಿ ಬಂಡವಾಳ ವಾಪಸ್ ಪಡೆದಿದ್ದರು. ಇದು ಇಲ್ಲಿಯವರೆಗಿನ ಅತ್ಯಧಿಕ ಹೊರಹರಿವಾಗಿತ್ತು. ಆದರೆ, ಪ್ರಸಕ್ತ ವರ್ಷದ ಮಾರ್ಚ್‌ನಲ್ಲಿ ಇದಕ್ಕಿಂತಲೂ ಹೆಚ್ಚಿನ ಬಂಡವಾಳ ಹೊರಹರಿವಾಗಿದೆ.

2026ರ ಆರಂಭದಿಂದ ಮಾರ್ಚ್ 27ರವರೆಗೆ ಒಟ್ಟು ₹1.27 ಲಕ್ಷ ಕೋಟಿ ಬಂಡವಾಳ ವಾಪಸ್ ಆಗಿದೆ ಎಂದು ಎನ್‌ಎಸ್‌ಡಿಎಲ್ ಅಂಕಿ–ಅಂಶಗಳು ತಿಳಿಸಿವೆ.

ಫೆಬ್ರುವರಿಯಲ್ಲಿ ₹22,615 ಕೋಟಿ ಬಂಡವಾಳ ಒಳಹರಿವಾಗಿತ್ತು. ಇದು ಕಳೆದ 17 ತಿಂಗಳಿನಲ್ಲಿಯೇ ಅತಿ ಹೆಚ್ಚು.

ಎಂ–ಕ್ಯಾಪ್: ₹1.75 ಲಕ್ಷ ಕೋಟಿ ಇಳಿಕೆ

ಕಳೆದ ವಾರ ನಡೆದ ಷೇರುಪೇಟೆ ವಹಿವಾಟಿನಲ್ಲಿ ಸೂಚ್ಯಂಗಳು ಇಳಿಕೆ ಕಂಡಿದ್ದರಿಂದ ದೇಶದ ಪ್ರಮುಖ 10 ಕಂಪನಿಗಳ ಪೈಕಿ 7 ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯ (ಎಂ–ಕ್ಯಾಪ್) ₹1.75 ಲಕ್ಷ ಕೋಟಿ ಕರಗಿದೆ.

ರಿಲಯನ್ಸ್ ಇಂಡಸ್ಟ್ರೀಸ್‌ನ ಎಂ–ಕ್ಯಾಪ್ ₹89,720 ಕೋಟಿ ಕರಗಿದೆ. ಕಂಪನಿಯ ಒಟ್ಟು ಎಂ–ಕ್ಯಾಪ್ ₹18.24 ಲಕ್ಷ ಕೋಟಿಯಷ್ಟಾಗಿದೆ. ಎಚ್‌ಡಿಎಫ್‌ಸಿ ಬ್ಯಾಂಕ್ ₹37,248 ಕೋಟಿ, ಎಸ್‌ಬಿಐ ₹35,399 ಕೋಟಿ, ಐಸಿಐಸಿಐ ಬ್ಯಾಂಕ್ ₹8,121 ಕೋಟಿ, ಭಾರ್ತಿ ಏರ್‌ಟೆಲ್ ₹2,480 ಕೋಟಿ, ಹಿಂದೂಸ್ತಾನ್ ಯೂನಿಲಿವರ್ ₹2,091 ಕೋಟಿ ಮತ್ತು ಟಿಸಿಎಸ್ ಮಾರುಕಟ್ಟೆ ಬಂಡವಾಳ ಮೌಲ್ಯ ₹271 ಕೋಟಿ ಕರಗಿದೆ. ಲಾರ್ಸೆನ್ ಆ್ಯಂಡ್ ಟೊಬ್ರೊ ಎಂ–ಕ್ಯಾಪ್‌ಗೆ ₹18,051 ಕೋಟಿ, ಬಜಾಜ್ ಫೈನಾನ್ಸ್ ₹8,680 ಕೋಟಿ ಮತ್ತು ಇನ್ಫೊಸಿಸ್‌ಗೆ ₹6,245 ಕೋಟಿ ಸೇರ್ಪಡೆಯಾಗಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು
ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

13ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಲಕ್ಷ್ಮೀದೇವಿ
ನಿಧನ : 30.03.2013
ನೀವು ನಮ್ಮನ್ನ ಅಗಲಿ ಇಂದಿಗೆ ಹದಿಮೂರು ವರ್ಷ ತುಂಬಿದೆ ನಿಮ್ಮ ಸವಿನೆನಪು ಸದಾ ಹಸಿರಾಗಿ ನಮ್ಮ ಮನದಲ್ಲಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ಇಂತಿ ಪತಿ - ವಿ. ಕೃಷ್ಣಪ್ಪ
ಮಕ್ಕಳು ಹಾಗೂ ಮೊಮ್ಮಕ್ಕಳು
ಕುಟುಂಬವರ್ಗ ಹಾಗೂ ಬಂಧು-ಮಿತ್ರರು
ತ್ಯಾಗರಾಜನಗರ, ಬೆಂ-28.
9341373739, 9900444777
ದಿನಾಂಕ 30.03.2026

ಚಿರಸ್ಮರಣೆ



ಶ್ರೀ ಹೆಚ್.ಎಂ.ಹುಚ್ಚೇಗೌಡರು
ನಿಧನ: 30-03-1999
ನೀವು ನಮ್ಮನ್ನು ಅಗಲಿ ಇಪ್ಪತ್ತೇಳು ವರ್ಷವಾಯಿತು, ನಿಮ್ಮ ಸವಿನೆನಪು ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ, ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ಧರ್ಮಪತ್ನಿ: ಕಮಲಮ್ಮ, ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು

'ವಿಮೆ ವ್ಯವಹಾರಕ್ಕೆ ಜೆಎಫ್‌ಎಸ್'

ಮುಂಬೈ (ಪಿಟಿಐ): ರಿಲಯನ್ಸ್ ಸಮೂಹಕ್ಕೆ ಸೇರಿರುವ ಜಿಯೊ ಫೈನಾನ್ಶಿಯಲ್ ಸರ್ವಿಸಸ್ (ಜೆಎಫ್‌ಎಸ್) ಕಂಪನಿಯು ಪ್ರಸಕ್ತ ವರ್ಷದಲ್ಲಿ ಜೀವ ವಿಮೆ ಮತ್ತು ಸಾಮಾನ್ಯ ವಿಮಾ ವ್ಯವಹಾರ ವನ್ನು ಆರಂಭಿಸುವ ನಿರೀಕ್ಷೆ ಇದೆ ಎಂದು ಕಂಪನಿಯ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2026ರಲ್ಲಿ ವಿಮೆ ವ್ಯವಹಾರ ಪ್ರಾರಂಭಿಸುವ ನಿರೀಕ್ಷೆ ಇದೆ. ಇದಕ್ಕಾಗಿ ನಿಯಂತ್ರಕ ಘಟಕಗಳ ಅನುಮೋದನೆ ಬೇಕಿದೆ ಎಂದು ಕಂಪನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕ ಹಿತೇಷ್ ಸೇಥಿಯಾ ಹೇಳಿದ್ದಾರೆ.

ಕಂಪನಿಯು ಸಾಮಾನ್ಯ ಹಾಗೂ ಜೀವ ವಿಮೆ ವ್ಯವಹಾರಕ್ಕಾಗಿ ಫ್ರಾನ್ಸ್‌ನ ಕಂಪನಿ ಯೊಂದಿಗೆ ಪಾಲುದಾರಿಕೆ ಮಾಡಿ ಕೊಳ್ಳಲಿದೆ. ಕಂಪನಿಯು ವಿಮಾ ಕ್ಷೇತ್ರಕ್ಕೆ ಅಗತ್ಯವಾದ ತಂಡಗಳನ್ನು ನಿರ್ಮಿಸು ವತ್ತ ಕೆಲಸ ಮಾಡುತ್ತಿದೆ ಎಂದಿದ್ದಾರೆ.

ವಿಜಯಪತ್ ಸಿಂಘಾನಿಯಾ ನಿಧನ

ಮುಂಬೈ (ಪಿಟಿಐ): ರೇಮಂಡ್ ಸಮೂಹದ ಮಾಜಿ ಅಧ್ಯಕ್ಷ ವಿಜಯಪತ್ ಸಿಂಘಾನಿಯಾ (87) ಅನಾರೋಗ್ಯದಿಂದ ಶನಿವಾರ ನಿಧನರಾಗಿದ್ದು, ಇಲ್ಲಿನ ಚಂದನವಾಡಿ ಚಿತಾಗಾರದಲ್ಲಿ ಅವರ ಅಂತ್ಯಕ್ರಿಯೆ ಭಾನುವಾರ ನಡೆಯಿತು.



ವಿಜಯಪತ್ ಸಿಂಘಾನಿಯಾ

ವಿಜಯಪತ್ ಸಿಂಘಾನಿಯಾ ಮಗನಾದ ಗೌತಮ್ ಸಿಂಘಾನಿಯಾ ಅಂತಿಮ ಸಂಸ್ಕಾರದ ವಿಧಿ ವಿಧಾನಗಳನ್ನು ನೆರವೇರಿಸಿದರು.

ಅನಾರೋಗ್ಯದಿಂದ ಬಳಲುತ್ತಿದ್ದ ವಿಜಯಪತ್ ಸಿಂಘಾನಿಯಾ ಅವರನ್ನು ಇತ್ತೀಚಿನ ತಿಂಗಳುಗಳಲ್ಲಿ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ದಾಖಲಿಸಲಾಗಿತ್ತು ಎಂದು ಗೌತಮ್ ಸಿಂಘಾನಿಯಾ ಪತ್ನಿ ನವಾಜ್ ಮೋದಿ ಹೇಳಿದ್ದಾರೆ.

1980ರಿಂದ ಎರಡು ದಶಕಗಳ ಕಾಲ ರೇಮಂಡ್ ಸಮೂಹದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿದ್ದ ವಿಜಯಪತ್ ಸಿಂಘಾನಿಯಾ ಅವರು, ಸಮೂಹದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅಲ್ಲದೆ, ಜವಳಿ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆ ತಂದಿದ್ದರು. 2000ನೇ ಇಸವಿಯಲ್ಲಿ ಗೌತಮ್ ಸಿಂಘಾನಿಯಾಗೆ ಸಮೂಹದ ಜವಾಬ್ದಾರಿಯನ್ನು ಹಸ್ತಾಂತರಿಸಿದ್ದರು.

ತಂದೆ ಮತ್ತು ಮಗನ ನಡುವೆ ಕೆಲವು ವಿವಾದಗಳು ಉಂಟಾಗಿದ್ದವು. ಬಳಿಕ ಅವು ಇತ್ಯರ್ಥವಾಗಿವೆ ಎನ್ನಲಾಗಿದೆ.

ಎಂಜಿನ್ ಪರೀಕ್ಷೆ ನಡೆಸಿದ ಉತ್ತರ ಕೊರಿಯಾ

ಸೋಲ್ (ಎಪಿ): ಅಮೆರಿಕದ ನೆಲವನ್ನು ಗುರಿಯಾಗಿಸುವ ಸಾಮರ್ಥ್ಯದ ಕ್ಷಿಪಣಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಉತ್ತರ ಕೊರಿಯಾ ಎಂಜಿನ್ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ.

ಉತ್ತರ ಕೊರಿಯಾ ನಾಯಕ ಕಿಮ್ ಜಾಂಗ್ ಉನ್ ಅವರು ಎಂಜಿನ್ ಪರೀಕ್ಷೆ ವೀಕ್ಷಿಸಿದ್ದು, 'ದೇಶದ ಮಿಲಿಟರಿ ಸಾಮರ್ಥ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಇದು ಮಹತ್ವದ ಮೈಲಿಗಲ್ಲು' ಎಂದು ಶ್ಲಾಘಿಸಿರುವುದಾಗಿ ಸರ್ಕಾರಿ ಸ್ವಾಮ್ಯದ ಕೊರಿಯನ್ ಸೆಂಟ್ರಲ್ ನ್ಯೂಸ್ ಭಾನುವಾರ ವರದಿ ಮಾಡಿದೆ.

ಇದೀಗ ಪರೀಕ್ಷಿಸಿರುವ ಎಂಜಿನ್‌ನ ಗರಿಷ್ಠ ನೂಕುಬಲ (ಥ್ರಸ್ಟ್) 2,500 ಕಿಲೊ ಟನ್ ಆಗಿದೆ ಎಂದು ವರದಿ ತಿಳಿಸಿದೆ. ಕಳೆದ ಸೆಪ್ಟೆಂಬರ್‌ನಲ್ಲಿ ಉತ್ತರ ಕೊರಿಯಾ ಇದೇ ರೀತಿಯ ಎಂಜಿನ್ ಪರೀಕ್ಷೆ ನಡೆಸಿದ್ದು, ಅದರ ಗರಿಷ್ಠ ಥ್ರಸ್ಟ್ 1,970 ಕಿಲೊ ಟನ್ ಆಗಿತ್ತು.

ಅಮೆರಿಕದ ನೆಲ ತಲುಪಬಲ್ಲ ಕ್ಷಿಪಣಿ ಅಭಿವೃದ್ಧಿಪಡಿಸುವ ಗುರಿಯನ್ನು ಉತ್ತರ ಕೊರಿಯಾ ಹೊಂದಿದ್ದು, ಆ ಯೋಜನೆಯ ಭಾಗವಾಗಿ ಈ ಪರೀಕ್ಷೆ ನಡೆದಿದೆ. ಎಂಜಿನ್ ಪರೀಕ್ಷೆ ಎಲ್ಲಿ ಮತ್ತು ಯಾವಾಗ ನಡೆಯಿತು ಎಂಬುದನ್ನು ವರದಿಯು ಬಹಿರಂಗಪಡಿಸಿಲ್ಲ.

ಮೊಟ್ಟೆ ಧಾರಣೆ (ಎನ್‌ಇಸಿಸಿ)		
ಬೆಂಗಳೂರು	100 ಕ್ಕೆ	₹440
	12 ಕ್ಕೆ	₹60
ಮೈಸೂರು:	100 ಕ್ಕೆ	₹440

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹522-733
ದ್ವಿತಳಿ (ಬಿ.ವಿ)	₹302-812

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ. ಬೆಂಗಳೂರು-76 ಸಂಬಳ: 17,000/- ರಿಂದ 25,000/- ತಕ್ಷಣ ಸಂಪರ್ಕಿಸಿ: 9008835841, 9148525233

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ತಕ್ಷಣ ಬೇಕಾಗಿದ್ದಾರೆ ಕಂಪನಿಗಳಿಗೆ ಮನೆಯಿಂದಲೇ ಕೆಲಸ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ, ವಯಸ್ಕರಿಗೆ ಮೊದಲ ಆದ್ಯತೆ 19,000-25,000 ಸಂಪಾದಿಸಿ ಕೊರಿಯರ್ ಸೌಲಭ್ಯವಿದೆ. 9964322833.

'ಭೂ ದಾಳಿಗೆ ಸಿದ್ಧತೆ'

ಒಂದನೇ ಪುಟದಿಂದ...

ತಕ್ಕ ಉತ್ತರ: 'ಅಮೆರಿಕದ ಸೈನಿಕರು ಇರಾನ್‌ಗೆ ಬಂದಿಳಿಯುವ ಕ್ಷಣಕ್ಕಾಗಿ ನಮ್ಮ ಯೋಧರು ಕಾಯುತ್ತಿದ್ದಾರೆ. ಅವರು ನಮ್ಮ ನೆಲಕ್ಕೆ ಕಾಲಿಟ್ಟರೆ ಸುಟ್ಟು ಬೂದಿ ಮಾಡುತ್ತೇವೆ. ಅವರ ಮಿತ್ರ ರಾಷ್ಟ್ರಗಳನ್ನೂ ಶಿಕ್ಷಿಸುತ್ತೇವೆ' ಎಂದು ಖಾಲೀಬಾಫ್ ಭಾನುವಾರ ಎಚ್ಚರಿಸಿದ್ದಾರೆ.

'ಅಮೆರಿಕವು ಸಾರ್ವಜನಿಕವಾಗಿ ಕದನ ವಿರಾಮದ ಬಗ್ಗೆ ಮಾತನಾಡುತ್ತಿದೆಯಾದರೂ, ಇರಾನ್ ಮೇಲೆ ಭೂದಾಳಿ ನಡೆಸಲು ರಹಸ್ಯವಾಗಿ ಯೋಜನೆ ರೂಪಿಸುತ್ತಿದೆ' ಎಂದು ಅವರು ಆರೋಪಿಸಿದ್ದಾರೆ.

ಟೆಹರಾನ್‌ನಲ್ಲಿ ಸ್ಫೋಟ: ಇಸ್ರೇಲ್ ಸೇನೆಯು ಇರಾನ್ ಮೇಲಿನ ದಾಳಿ ಮುಂದುವರಿಸಿದ್ದು, ಭಾನುವಾರ ಟೆಹರಾನ್‌ನಲ್ಲಿ ದೊಡ್ಡ ಸ್ಫೋಟಗಳ ಸದ್ದು ಕೇಳಿಬಂದಿದೆ. ದಾಳಿಯಿಂದ ತನ್ನ ಕಚೇರಿಯಿರುವ ಕಟ್ಟಡಕ್ಕೆ ಹಾನಿಯಾಗಿದೆ ಎಂದು ಕತಾರ್‌ನಲ್ಲಿ ಕೇಂದ್ರ ಕಚೇರಿ ಹೊಂದಿರುವ 'ಅಲ್ ಅರಬಿ' ಸುದ್ದಿವಾಹಿನಿ ವರದಿ ಮಾಡಿದೆ.

ಬಹರೇನ್ ಮತ್ತು ಯುಎಇಯಲ್ಲಿರುವ ಎರಡು ದೊಡ್ಡ ಅಲ್ಯುಮಿನಿಯಂ ಘಟಕಗಳನ್ನು ಗುರಿಯಾಗಿಸಿ ಇರಾನ್ ಸೇನೆ ಕ್ಷಿಪಣಿ ದಾಳಿ ನಡೆಸಿದೆ. ಅಮೆರಿಕದ ಸೇನೆಯ ಜತೆ ನಂಟು ಹೊಂದಿರುವ ಕೈಗಾರಿಕೆಗಳು ಎಂಬ ಕಾರಣ ಈ ತಾಣಗಳನ್ನು ಗುರಿಯಾಗಿಸಲಾಗಿದೆ ಎಂದು ಇರಾನ್ ರೆವಲ್ಯೂಷನರಿ ಗಾರ್ಡ್ಸ್ (ಐಆರ್‌ಜಿಸಿ) ಹೇಳಿದೆ.

ಪಶ್ಚಿಮ ಏಷ್ಯಾ ಸಂಘರ್ಷವನ್ನು ಖಂಡಿಸಿ ಇಸ್ರೇಲ್‌ನ ಟೆಲ್ ಅವೀವ್‌ನಲ್ಲಿ ಪ್ರತಿಭಟನೆ ನಡೆಯಿತು –ಎಎಫ್‌ಪಿ ಚಿತ್ರ

ಇರಾನ್ ನಡೆಸಿದ ದಾಳಿಯಲ್ಲಿ ತನ್ನ ಆರು ಸಿಬ್ಬಂದಿ ಗಾಯಗೊಂಡಿದ್ದು, ಘಟಕಕ್ಕೆ ಹಾನಿಯಾಗಿದೆ ಎಂದು ಎಮಿರೇಟ್ಸ್ ಗ್ಲೋಬಲ್ ಅಲ್ಯುಮಿನಿಯಂ (ಇಜಿಎ) ಹೇಳಿದೆ. ತನ್ನ ಇಬ್ಬರು ಸಿಬ್ಬಂದಿ ಗಾಯಗೊಂಡಿರುವುದಾಗಿ ಅಲ್ಯುಮಿನಿಯಂ ಬಹರೇನ್ (ಎಲ್‌ಬಿಎ) ತಿಳಿಸಿದೆ.

ಪಾಕ್ ಮಧ್ಯಸ್ಥಿಕೆಯಲ್ಲಿ ಸಭೆ

ಇಸ್ಲಾಮಾಬಾದ್ (ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷಕ್ಕೆ ಅಂತ್ಯಹಾಡುವ ನಿಟ್ಟಿನಲ್ಲಿ ಪಾಕಿಸ್ತಾನ, ಸೌದಿ ಅರೇಬಿಯಾ, ಈಜಿಪ್ಟ್ ಮತ್ತು ಟರ್ಕಿಯ ವಿದೇಶಾಂಗ ಸಚಿವರು ಭಾನುವಾರ ಇಲ್ಲಿ ಮಾತುಕತೆ ನಡೆಸಿದರು. ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ನಡೆಯುತ್ತಿರುವ ಸಭೆ ಸೋಮವಾರವೂ ಮುಂದುವರಿಯಲಿದೆ.

ವಿದೇಶಾಂಗ ಸಚಿವರಾದ ಪಾಕಿಸ್ತಾನದ ಇಶಾಕ್ ದಾರ್, ಸೌದಿಯ ಫೈಸಲ್ ಬಿನ್ ಫರ್ಹಾನ್ ಅಲ್ ಸೌದ್, ಟರ್ಕಿಯ ಹಕನ್ ಫಿದಾನ್ ಮತ್ತು ಈಜಿಪ್ಟ್‌ನ ಬದ್ರ್ ಅಬ್ದಲತಿ ಅವರು ಸಭೆಯಲ್ಲಿ ಪಾಲ್ಗೊಂಡಿದ್ದಾರೆ.

ಅಮೆರಿಕ ಮತ್ತು ಇರಾನ್ ನಡುವೆ 'ನೇರ ಸಂವಾದ'ಕ್ಕೆ ದಾರಿ ಕಂಡುಕೊಳ್ಳುವುದು ಈ ಸಭೆಯ ಗುರಿಗಳಲ್ಲೊಂದು ಎಂದು ಈಜಿಪ್ಟ್‌ನ ಬದ್ರ್ ಅಬ್ದಲತಿ ತಿಳಿಸಿದ್ದಾರೆ.

ಅಮೆರಿಕ ಈಗಾಗಲೇ ಇರಾನ್ ಮುಂದಿಟ್ಟಿರುವ 15 ಅಂಶಗಳ ಕದನ ವಿರಾಮ ಒಪ್ಪಂದ ಮಾತುಕತೆ ಪ್ರಸ್ತಾವದ ಕುರಿತೂ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

90 ದಿನದಲ್ಲಿ ಕ್ರೆಡಿಟ್ ಅಂಕ ಹೆಚ್ಚಳ ಹೇಗೆ?

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.
ಚಾರ್ಟರ್ಡ್ ಅಕೌಂಟೆಂಟ್

ನೀವು ಕಾರು ಅಥವಾ ಮನೆ ಖರೀದಿಸಲು ಬ್ಯಾಂಕ್‌ಗೆ ಹೋದಾಗ, ನಿಮ್ಮ ಕನಸಿಗೆ ಅಡ್ಡಗಾಲಾಗುವುದು ನಿಮ್ಮ ಕ್ರೆಡಿಟ್ ಅಂಕ (ಸಿಬಿಲ್ ಸ್ಕೋರ್). ನಾನು ಸಾಲವನ್ನೇ ಮಾಡಿಲ್ಲ, ಆದರೂ ಅಂಕ ಕಡಿಮೆ ಇದೆ ಅಥವಾ ಎಲ್ಲಾ ಬಿಲ್ ಸಮಯಕ್ಕೆ ಕಟ್ಟಿದರೂ ಅಂಕ 650 ದಾಟುತ್ತಿಲ್ಲ ಏಕೆ? ಎನ್ನುವುದು ಬಹುತೇಕರ ಅಳಲು. ಆದರೆ ನೆನಪಿಡಿ, ಕ್ರೆಡಿಟ್ ಅಂಕ ಎನ್ನುವುದು ಕೇವಲ ಸಾಲ ತೀರಿಸುವುದಷ್ಟೇ ಅಲ್ಲ, ಅದು ಬ್ಯಾಂಕ್‌ಗಳು ಬಳಸುವ ಒಂದು ಸಂಕೀರ್ಣ ಲೆಕ್ಕಾಚಾರ. ಕೇವಲ 90 ದಿನಗಳಲ್ಲಿ ನಿಮ್ಮ ಅಂಕವನ್ನು ರಿಜೆಕ್ಟೆಡ್ ಹಂತದಿಂದ 850ಕ್ಕೆ ಏರಿಸಲು ಏನು ಮಾಡಬೇಕು ಎಂಬುದು ತಿಳಿಯುವುದು ಅಗತ್ಯ.

ಅಂಕದ ತಪಾಸಣೆ ಮತ್ತು ತಪ್ಪು ಕಲ್ಪನೆಗಳು: ನಮ್ಮಲ್ಲಿ ಅನೇಕರು ಕ್ರೆಡಿಟ್ ಅಂಕವನ್ನು ಪದೇ ಪದೇ ವೀಕ್ಷಿಸಿದರೆ ಅಂಕಗಳು ಕಡಿಮೆಯಾಗುತ್ತವೆ ಎಂಬ ಆತಂಕ ಹೊಂದಿದ್ದಾರೆ. ಆದರೆ ಇದು ಕೇವಲ ಒಂದು ಮಿಥ್ಯೆ. ವಾಸ್ತವವಾಗಿ ಇದರಲ್ಲಿ ಎರಡು ವಿಧದ ತಪಾಸಣೆಗಳಿರುತ್ತವೆ. ಮೊದಲನೆಯದಾಗಿ, ನೀವು ವಿವಿಧ ಆ್ಯಪ್‌ಗಳ ಮೂಲಕ ಅಥವಾ ಅಧಿಕೃತ ವೆಬ್‌ಸೈಟ್ ಮೂಲಕ ನಿಮ್ಮ ಅಂಕವನ್ನು ನೀವೇ ನೋಡಿಕೊಳ್ಳುವುದಕ್ಕೆ 'ಮೃದು ತಪಾಸಣೆ' ಎನ್ನಲಾಗುತ್ತದೆ. ಇದರಿಂದ ನಿಮ್ಮ ಕ್ರೆಡಿಟ್ ಅಂಕಕ್ಕೆ ಯಾವುದೇ ರೀತಿಯ ಹಾನಿಯಾಗುವುದಿಲ್ಲ. ನಿಮ್ಮ ಹೆಸರಿನಲ್ಲಿ ನಡೆಯಬಹುದಾದ ಆರ್ಥಿಕ ವಂಚನೆಗಳನ್ನು ತಡೆಯಲು ಈ ರೀತಿಯ ಪರಿಶೀಲನೆ ಅತಿ ಅಗತ್ಯ. ಎರಡನೆಯದಾಗಿ, ನೀವು ಸಾಲ ಅಥವಾ ಕ್ರೆಡಿಟ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿದಾಗ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳು ನಿಮ್ಮ ವರದಿಯನ್ನು ಪರಿಶೀಲಿಸುವುದನ್ನು 'ಕಠಿಣ ತಪಾಸಣೆ' ಎನ್ನಲಾಗುತ್ತದೆ. ಅಲ್ಪಾವಧಿಯಲ್ಲಿ ಪದೇ ಪದೇ ಸಾಲಕ್ಕಾಗಿ ಅರ್ಜಿ ಸಲ್ಲಿಸಿದರೆ, ಬ್ಯಾಂಕ್‌ಗಳು ಈ ತಪಾಸಣೆ ನಡೆಸುತ್ತವೆ ಮತ್ತು ಇದರಿಂದ ನಿಮ್ಮ ಕ್ರೆಡಿಟ್ ಅಂಕ ಕುಸಿಯುವ ಸಾಧ್ಯತೆ ಇರುತ್ತದೆ.

ಅಂಕ ನಿರ್ಧರಿಸುವ ಪಂಚ ಅಂಶಗಳು: ಕ್ರೆಡಿಟ್ ಅಂಕ ಎಂಬುದು ಐದು ಪ್ರಮುಖ ಅಂಶಗಳ ಆಧಾರದ ಮೇಲೆ ಸಿದ್ಧವಾಗುವ ಒಂದು ಅರ್ಹತಾ ಸಂಖ್ಯೆ. ಸಾಲಕ್ಕೆ ನೀವು ಎಷ್ಟು ಅರ್ಹರು ಮತ್ತು ವಿಶ್ವಾಸಾರ್ಹರು ಎನ್ನುವುದನ್ನು ಇದು ನಿರ್ಧರಿಸುತ್ತದೆ. ಈ ಅಂಕದ ಲೆಕ್ಕಾಚಾರದಲ್ಲಿ ಸಾಲ ಮರುಪಾವತಿಯ ಇತಿಹಾಸವು ಸಿಂಹಪಾಲು (ಶೇ 35) ಹೊಂದಿದೆ. ಒಂದೇ ಒಂದು ಕಂತು (ಇಎಂಐ) ಪಾವತಿ ವಿಳಂಬವಾದರೂ ನಿಮ್ಮ ಅಂಕ ಭಾರಿ ಪ್ರಮಾಣದಲ್ಲಿ ಇಳಿಕೆಯಾಗುತ್ತದೆ. ಎರಡನೆಯದಾಗಿ, ಸಾಲದ ಬಳಕೆಯ ಮಿತಿಯು ಪ್ರಮುಖವಾಗಿದ್ದು, ನಿಮ್ಮ ಒಟ್ಟು ಕ್ರೆಡಿಟ್ ಮಿತಿಯ ಕೇವಲ ಶೇ 30ರಷ್ಟು ಮಾತ್ರ ಬಳಸುವುದು ಉತ್ತಮ. ಪೂರ್ಣ ಮಿತಿ ಬಳಕೆ ನಿಮ್ಮ ಆರ್ಥಿಕ ಅಸ್ಥಿರತೆಯನ್ನು ತೋರಿಸುತ್ತದೆ. ಇನ್ನು ನಿಮ್ಮ ಹಳೆಯ ಕ್ರೆಡಿಟ್ ಕಾರ್ಡ್ ಅಥವಾ ಸಾಲದ ಖಾತೆಗಳನ್ನು ಮುಚ್ಚಬೇಡಿ. ಸಾಲದ ಇತಿಹಾಸ ಎಷ್ಟು ಹಳೆಯದೋ, ಅಷ್ಟು ಅಂಕ ಹೆಚ್ಚುತ್ತದೆ. ಹಳೆಯ ಖಾತೆಗಳ ಮಹತ್ವ ಶೇ 15ರಷ್ಟು ಕ್ರೆಡಿಟ್ ಅಂಕದಲ್ಲಿ ಸಿಗುತ್ತದೆ. ಇದಲ್ಲದೆ ಕೇವಲ ಕ್ರೆಡಿಟ್ ಕಾರ್ಡ್, ವೈಯಕ್ತಿಕ ಸಾಲ ಮಾತ್ರವಲ್ಲದೆ ಚಿನ್ನದ ಸಾಲ ಅಥವಾ ವಾಹನ ಸಾಲದಂತಹ ಸುರಕ್ಷಿತ ಸಾಲಗಳ ಸಮತೋಲನವನ್ನು (ಶೇ 10) ಕಾಪಾಡಿಕೊಳ್ಳುವುದು ನಿಮ್ಮ ವಿಶ್ವಾಸಾರ್ಹತೆ ಹೆಚ್ಚಿಸುತ್ತದೆ. ಕೊನೆಯದಾಗಿ, ಅತಿಯಾಗಿ ಹೊಸ ಸಾಲದ ಅರ್ಜಿಗಳನ್ನು ಸಲ್ಲಿಸದಿರುವುದು (ಶೇ 10) ನಿಮ್ಮ ಅಂಕವನ್ನು ದೃಢವಾಗಿರಿಸಲು ಸಹಾಯ ಮಾಡುತ್ತದೆ.

ಕ್ರೆಡಿಟ್ ಅಂಕ ಸುಧಾರಿಸುವುದು ಹೇಗೆ?: ನಿಮ್ಮ ಅಂಕವನ್ನು ಉತ್ತಮಪಡಿಸಿಕೊಳ್ಳಲು ಶಿಸ್ತುಬದ್ಧವಾದ 90 ದಿನಗಳ ಯೋಜನೆಯನ್ನು ರೂಪಿಸಿಕೊಳ್ಳುವುದು ಅಗತ್ಯ. ಮೊದಲ 30 ದಿನಗಳಲ್ಲಿ, ಯಾವುದೇ ಹೊಸ ಸಾಲಕ್ಕಾಗಿ ಅರ್ಜಿ ಸಲ್ಲಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸಿ ಮತ್ತು ನಿಮ್ಮ ಎಲ್ಲಾ ಬಿಲ್‌ಗಳನ್ನು ನಿಗದಿತ ದಿನಾಂಕಕ್ಕಿಂತ ಕನಿಷ್ಠ 10 ದಿನಗಳ ಮುಂಚಿತವಾಗಿಯೇ ಪಾವತಿಸುವ ಅಭ್ಯಾಸ ಮಾಡಿಕೊಳ್ಳಿ. ಮುಂದಿನ 31ರಿಂದ 60 ದಿನಗಳ ಅವಧಿಯಲ್ಲಿ, ನಿಮ್ಮ ಕ್ರೆಡಿಟ್ ಕಾರ್ಡ್ ಬಳಕೆಯನ್ನು ಒಟ್ಟು ಮಿತಿಯ ಶೇ 30ಕ್ಕಿಂತ ಕೆಳಕ್ಕೆ ಇಳಿಸಿ, ಸಾಧ್ಯವಾದರೆ ಬ್ಯಾಂಕ್ ಸಂಪರ್ಕಿಸಿ ನಿಮ್ಮ ಕ್ರೆಡಿಟ್ ಮಿತಿಯನ್ನು ಹೆಚ್ಚಿಸಲು ಕೋರಿ, ಇದರಿಂದ ನಿಮ್ಮ ಬಳಕೆಯ ಅನುಪಾತ ತಾನಾಗಿಯೇ ಕಡಿಮೆಯಾಗುತ್ತದೆ. ಕೊನೆಯ 61ರಿಂದ 90 ದಿನಗಳವರೆಗೆ ಇದೇ ಆರ್ಥಿಕ ಶಿಸ್ತನ್ನು ಮುಂದುವರಿಸಿದರೆ, ನಿಮ್ಮ ಅಂಕದಲ್ಲಿ ಗಮನಾರ್ಹ ಏರಿಕೆ ಕಂಡು ಬರುತ್ತದೆ. ನೆನಪಿಡಿ, 800ಕ್ಕೂ ಅಧಿಕ ಅಂಕ ಹೊಂದುವುದರಿಂದ ನೀವು ಬ್ಯಾಂಕ್‌ಗಳ ಜೊತೆ ಚೌಕಾಶಿ ನಡೆಸಿ ಅತ್ಯಂತ ಕಡಿಮೆ ಬಡ್ಡಿದರದಲ್ಲಿ ಸಾಲ ಪಡೆಯಬಹುದು. ಇದು ನಿಮ್ಮ ಜೀವಮಾನದ ಗಳಿಕೆಯಲ್ಲಿ ಲಕ್ಷಾಂತರ ರೂಪಾಯಿಗಳನ್ನು ಉಳಿಸಲು ನೆರವಾಗುತ್ತದೆ.

ಬ್ಯಾಂಕ್‌ನಿಂದಾಗುವ ದೋಷಕ್ಕೆ ಹೊಸ ನಿಯಮ

ನಿಮ್ಮ ಅಂಕ ಕಡಿಮೆ ಇರಲು ಬ್ಯಾಂಕ್‌ನ ತಪ್ಪುಗಳೂ ಕಾರಣ ಇರಬಹುದು. ನೀವು ತೀರಿಸಿದ ಸಾಲ ಇನ್ನೂ ಸಕ್ರಿಯ ಎಂದು ತೋರಿಸುತ್ತಿರಬಹುದು. ಆರ್‌ಬಿಐ ಹೊಸ ನಿಯಮದಂತೆ, ನೀವು ದೂರು ನೀಡಿದ 30 ದಿನಗಳಲ್ಲಿ ಸಿಬಿಲ್ ಅದನ್ನು ಸರಿಪಡಿಸದಿದ್ದರೆ, ಅವರು ನಿಮಗೆ ಪ್ರತಿದಿನ ₹100 ದಂಡ ನೀಡಬೇಕು. ತಕ್ಷಣ ನಿಮ್ಮ ಪೂರ್ತಿ ವರದಿ ಪರಿಶೀಲಿಸಿ, ತಪ್ಪುಗಳಿದ್ದರೆ ದೂರು ಸಲ್ಲಿಸಿ. ಕ್ರೆಡಿಟ್ ಅಂಕದ ವರದಿಯಲ್ಲಿನ ತಪ್ಪುಗಳನ್ನು ಸರಿಪಡಿಸುವುದು ಹೇಗೆ? ನಿಮ್ಮ ಕ್ರೆಡಿಟ್ ವರದಿಯಲ್ಲಿ ಸಾಲದ ಮಾಹಿತಿ ತಪ್ಪಾಗಿದ್ದರೆ ಅಥವಾ ನೀವು ತೀರಿಸಿದ ಸಾಲ ಇನ್ನೂ ಬಾಕಿ ಎಂದು ತೋರಿಸುತ್ತಿದ್ದರೆ, ಈ ಕೆಳಗಿನ ಹಂತಗಳನ್ನು ಅನುಸರಿಸಿ.

- **ಸಿಬಿಲ್ ವರದಿ ಡೌನ್‌ಲೋಡ್ ಮಾಡಿ:** ಮೊದಲು www.cibil.com ಗೆ ಭೇಟಿ ನೀಡಿ ನಿಮ್ಮ ಇತ್ತೀಚಿನ ಕ್ರೆಡಿಟ್ ವರದಿಯನ್ನು ಪಡೆಯಿರಿ. ಅದರಲ್ಲಿರುವ (ಒಂಬತ್ತು ಅಂಕಿಗಳ ಸಂಖ್ಯೆ) ಅನ್ನು ಗುರುತು ಮಾಡಿಕೊಳ್ಳಿ
- **ದೂರು ವಿಭಾಗಕ್ಕೆ ಭೇಟಿ ನೀಡಿ:** ಸಿಬಿಲ್ ವೆಬ್‌ಸೈಟ್‌ನಲ್ಲಿರುವ ಕನ್ಸ್ಯೂಮರ್ ಡಿಸ್ಪ್ಯೂಟ್ ರೆಸಲ್ಯೂಷನ್ (Consumer Dispute Resolution) ವಿಭಾಗಕ್ಕೆ ಹೋಗಿ. ಅಲ್ಲಿ ನಿಮ್ಮ ವೈಯಕ್ತಿಕ ವಿವರಗಳನ್ನು ನೀಡಿ ಲಾಗ್-ಇನ್ ಆಗಿ
- **ತಪ್ಪುಗಳನ್ನು ಗುರುತಿಸಿ:** ನಿಮ್ಮ ವರದಿಯಲ್ಲಿ ಯಾವ ವಿಭಾಗದಲ್ಲಿ (ಉದಾಹರಣೆಗೆ: ವೈಯಕ್ತಿಕ ಮಾಹಿತಿ, ಸಾಲದ ಖಾತೆ ಅಥವಾ ಬಾಕಿ ಮೊತ್ತ) ತಪ್ಪಿದೆ ಎಂಬುದನ್ನು ಆಯ್ಕೆ ಮಾಡಿ
- **ದೂರು ದಾಖಲಿಸಿ:** ತಪ್ಪಾದ ಮಾಹಿತಿಯ ಮುಂದೆ ಇರುವ ಡಿಸ್ಪ್ಯೂಟ್ (Dispute) ಬಟನ್ ಒತ್ತಿ. ಸರಿಯಾದ ಮಾಹಿತಿ ಏನಿರಬೇಕು ಎಂಬುದನ್ನು ಅಲ್ಲಿ ನಮೂದಿಸಿ
- **ದಾಖಲೆಗಳನ್ನು ಒದಗಿಸಿ:** ನೀವು ಸಾಲ ತೀರಿಸಿದ್ದರೆ ಅದರ ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ (No Objection Certificate) ಅಥವಾ ಪಾವತಿಯ ರಸೀದಿಯನ್ನು ಅಪ್‌ಲೋಡ್ ಮಾಡಿ
- **ಪರಿಶೀಲನೆ ಮತ್ತು ತೀರ್ಪು:** ನೀವು ದೂರು ನೀಡಿದ ನಂತರ ಸಿಬಿಲ್ ಸಂಸ್ಥೆಯು ಸಂಬಂಧಪಟ್ಟ ಬ್ಯಾಂಕ್ ಅನ್ನು ಸಂಪರ್ಕಿಸುತ್ತದೆ. ಬ್ಯಾಂಕ್ ಇದನ್ನು ಒಪ್ಪಿಕೊಂಡರೆ, 30 ದಿನಗಳೊಳಗೆ ನಿಮ್ಮ ಸ್ಕೋರ್ ಅಪ್‌ಡೇಟ್ ಆಗುತ್ತದೆ

ದೆಹಲಿ ಏಮ್ಸ್‌ನ ಹಳೆಯ ವಿದ್ಯಾರ್ಥಿನಿ ಈಗ ನೇಪಾಳದ ಆರೋಗ್ಯ ಸಚಿವೆ

ನವದೆಹಲಿ (ಪಿಟಿಐ): ದೆಹಲಿಯ ಏಮ್ಸ್‌ನ ನರ್ಸಿಂಗ್ ಕಾಲೇಜಿನಲ್ಲಿ ಅಧ್ಯಯನ ಮಾಡಿರುವ ನಿಶಾ ಮೆಹ್ತಾ ಅವರು ನೇಪಾಳದ ಆರೋಗ್ಯ ಸಚಿವರಾಗಿ ನೇಮಕಗೊಂಡಿರುವ ಕುರಿತು ಏಮ್ಸ್ ಅಧಿಕೃತ ಪ್ರಕಟಣೆಯನ್ನು ಭಾನುವಾರ ಹೊರಡಿಸಿದೆ.

'ಈ ಸಾಧನೆಯು ನಮ್ಮ ಸಂಸ್ಥೆಗೆ ಹೆಮ್ಮೆಯ ಕ್ಷಣವಾಗಿದೆ. ಶುಶ್ರೂಷಕಿಯಾಗಿ ಸೇವೆ ಸಲ್ಲಿಸುತ್ತಿದ್ದ ನಿಶಾ ಈಗ ಪ್ರಮುಖ ನೀತಿಗಳನ್ನು ರೂಪಿಸಬಲ್ಲಂತಹ ಸ್ಥಾನಕ್ಕೆ ಏರಿದ್ದಾರೆ. ಅವರ ಈ ಪ್ರಯಾಣವು ನರ್ಸಿಂಗ್‌ನ ವಿಸ್ತರಿಸುತ್ತಿರುವ ವ್ಯಾಪ್ತಿ ಮತ್ತು ನಾಯಕತ್ವದ ಸಾಮರ್ಥ್ಯವನ್ನು ಪ್ರತಿಬಿಂಬಿಸುತ್ತದೆ' ಎಂದು ಏಮ್ಸ್ ಹೇಳಿಕೆಯಲ್ಲಿ ತಿಳಿಸಿದೆ.

> ನಿಶಾ ಸಾಧನೆಯು, ರೋಗಿಗಳ ಆರೈಕೆ ಮಾತ್ರವಲ್ಲದೇ, ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟದಲ್ಲಿ ಆರೋಗ್ಯ ನೀತಿಗಳು ಹಾಗೂ ವ್ಯವಸ್ಥೆಗಳನ್ನು ರೂಪಿಸುವಲ್ಲಿ ಶುಶ್ರೂಷಕಿಯರ ಪಾತ್ರವನ್ನು ಬಲಪಡಿಸುತ್ತದೆ
> **ಏಮ್ಸ್,** ದೆಹಲಿ

'ಏಮ್ಸ್‌ನಲ್ಲಿದ್ದ ಸಂದರ್ಭದಲ್ಲಿ ನಿಶಾ ಅವರು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಉತ್ತಮ ನಾಯಕತ್ವ ಗುಣಗಳನ್ನು ಹೊಂದಿದ್ದರು ಹಾಗೂ ಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತಿದ್ದರು. ಈ ಗುಣಗಳು ಉನ್ನತ ನಾಯಕತ್ವ ಹಾಗೂ ಸಾರ್ವಜನಿಕ ಸೇವೆಯತ್ತ ಅವರ ಹಾದಿಯನ್ನು ಸುಗಮಗೊಳಿಸಿವೆ' ಎಂದೂ ಶ್ಲಾಘಿಸಿದೆ.

2006– 2010ರ ಅವಧಿಯಲ್ಲಿ ನಿಶಾ ಅವರು ಇಲ್ಲಿ ನರ್ಸಿಂಗ್ ಪದವಿ ಕೋರ್ಸ್‌ನಲ್ಲಿ ಅಧ್ಯಯನ ಮಾಡಿದ್ದಾರೆ. ಮಾರ್ಚ್ 27ರಂದು ನಿಶಾ ಅವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ನೇಪಾಳದ ಸಾರ್ವಜನಿಕ ಆರೋಗ್ಯ ಕ್ಷೇತ್ರಕ್ಕೆ ಉತ್ತಮ ಕೊಡುಗೆಗಳನ್ನು ನೀಡುವಂತೆ ಹಾಗೂ ಯಶಸ್ವಿ ಅಧಿಕಾರಾವಧಿಯನ್ನು ಹೊಂದುವಂತೆ ನಿಶಾ ಅವರಿಗೆ ಏಮ್ಸ್‌ನ ನರ್ಸಿಂಗ್ ಕಾಲೇಜು ಶುಭ ಹಾರೈಸಿದೆ.

ನೇಪಾಳದ ಮಾಜಿ ಸಚಿವ ಬಂಧನ

ಕಠ್ಮಂಡು (ಪಿಟಿಐ): ಹಣ ಅಕ್ರಮ ವರ್ಗಾವಣೆ ಆರೋಪದಡಿ ದಾಖಲಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ನೇಪಾಳದ ಮಾಜಿ ಇಂಧನ ಸಚಿವ ಹಾಗೂ ನೇಪಾಳಿ ಕಾಂಗ್ರೆಸ್ ಪಕ್ಷದ ನಾಯಕ ದೀಪಕ್ ಖಡ್ಕಾ ಅವರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಹಣ ಅಕ್ರಮ ವರ್ಗಾವಣೆ ತನಿಖಾ ಇಲಾಖೆಯ ಮನವಿ ಬಳಿಕ, ನೇಪಾಳದ ಕೇಂದ್ರೀಯ ತನಿಖಾ ದಳ (ಸಿಬಿಐ) ಪೊಲೀಸರು ಖಡ್ಕಾ ಅವರನ್ನು ಭಾನುವಾರ ಬಂಧಿಸಿದ್ದಾರೆ. ಅವರನ್ನು ವಿಚಾರಣೆಗೆ ಒಳಪಡಿಸಲಿದ್ದಾರೆ ಎನ್ನಲಾಗಿದೆ.

ಕಳೆದ ವರ್ಷ ನೇಪಾಳದಲ್ಲಿ ನಡೆದ ಜೆನ್–ಝಿ ಪ್ರತಿಭಟನೆಯ ಸಂದರ್ಭದಲ್ಲಿ ಖಡ್ಕಾ, ಮಾಜಿ ಪ್ರಧಾನಿಗಳಾದ ಶೇರ್ ಬಹದ್ದೂರ್ ದೇವುಬಾ, ಪುಷ್ಪ ಕಮಲ್ ದಹಲ್ ಅವರ ನಿವಾಸಗಳಲ್ಲಿ ಸುಟ್ಟ ನೋಟುಗಳ ವಿಡಿಯೊ ಮತ್ತು ಚಿತ್ರಗಳು ಜಾಲತಾಣಗಳಲ್ಲಿ ಹರಿದಾಡಿದ್ದವು.

ಇಂಧನ, ಜಲಸಂಪನ್ಮೂಲ ಮತ್ತು ನೀರಾವರಿ ಸಚಿವರಾಗಿದ್ದ ವೇಳೆ, ಪರವಾನಗಿ ನೀಡಲು ಹಾಗೂ ಯೋಜನೆಗಳ ಕಾಮಗಾರಿ ಗಳನ್ನು ಗುತ್ತಿಗೆಗೆ ಕೊಡಲು ಹಣ ಪಡೆದುಕೊಂಡಿರುವ ಆರೋಪ ಖಡ್ಕಾ ಮೇಲಿದೆ.

ಜೆನ್–ಝಿ ಪ್ರತಿಭಟನೆಯನ್ನು ಹತ್ತಿಕ್ಕಿ, 76 ಮಂದಿಯ ಸಾವಿಗೆ ಕಾರಣರಾಗಿದ್ದಾರೆ ಎಂಬ ಆರೋಪದಲ್ಲಿ ಮಾಜಿ ಪ್ರಧಾನಿ ಕೆ.ಪಿ. ಶರ್ಮಾ ಒಲಿ ಮತ್ತು ಅಂದಿನ ಗೃಹ ಸಚಿವ ರಮೇಶ್ ಲೇಖಕ್ ಅವರನ್ನು ಶನಿವಾರ ಬಂಧಿಸಲಾಗಿದೆ.

ಯುರೋಪ್, ಅಮೆರಿಕದಾದ್ಯಂತ ರ‍್ಯಾಲಿಗಳ ಆಯೋಜನೆ

'ನೋ ಕಿಂಗ್ಸ್': ಟ್ರಂಪ್ ವಿರುದ್ಧ ಪ್ರತಿಭಟನೆ

ಸೇಂಟ್ ಪೌಲ್ (ಮಿನ್ನೆಸೋಟ) (ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕ್ರಮಗಳು ಹಾಗೂ ಇರಾನ್‌ನಲ್ಲಿ ನಡೆಯುತ್ತಿರುವ ಯುದ್ಧವನ್ನು ವಿರೋಧಿಸಿ ಅಮೆರಿಕ ಹಾಗೂ ಯುರೋಪ್‌ನಾದ್ಯಂತ ಶನಿವಾರ 'ನೋ ಕಿಂಗ್ಸ್' ಹೆಸರಿನಡಿ ಪ್ರತಿಭಟನಾಕಾರರು ರ‍್ಯಾಲಿಗಳನ್ನು ನಡೆಸಿದ್ದಾರೆ.

ಟ್ರಂಪ್ ಅವರ ವಲಸೆ ನೀತಿಗಳನ್ನು ವಿರೋಧಿಸಿ ಮಿನ್ನೆಸೋಟದಲ್ಲಿ ಬೃಹತ್ ರ‍್ಯಾಲಿ ನಡೆದಿದ್ದು, ಸಾವಿರಾರು ಮಂದಿ ಭಾಗಿಯಾಗಿದ್ದರು. ಅಮೆರಿಕದ ಖ್ಯಾತ ಗಾಯಕ ಬ್ರೂಸ್ ಸ್ಪ್ರಿಂಗ್‌ಸ್ಟಿನ್ ಕೂಡ ರ‍್ಯಾಲಿಯಲ್ಲಿ ಪಾಲ್ಗೊಂಡು, ಪ್ರತಿಭಟನಕಾರರ ಪರವಾಗಿ ಬೆಂಬಲ ವ್ಯಕ್ತಪಡಿಸಿದರು.

ನ್ಯೂಯಾರ್ಕ್ ನಗರದಿಂದ ದಕ್ಷಿಣ ಐಡೊಹು ಪ್ರಾಂತ್ಯದ ಡ್ರಿಗ್ಸ್‌ವರೆಗೂ ರ‍್ಯಾಲಿ ನಡೆಸಲಾಗಿದ್ದು, ಇದರಲ್ಲಿ ಸುಮಾರು 85 ಲಕ್ಷ ಮಂದಿ ಪಾಲ್ಗೊಂಡಿದ್ದರು ಎನ್ನಲಾಗಿದೆ.

ಅಮೆರಿಕದ 50 ರಾಜ್ಯಗಳಾದ್ಯಂತ ರ‍್ಯಾಲಿ ನಡೆದಿದ್ದು ಒಟ್ಟು 3,100 ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು 'ನೋ ಕಿಂಗ್ಸ್' ರ‍್ಯಾಲಿಯ ಆಯೋಜಕರು ಹೇಳಿದ್ದಾರೆ. ಜತೆಗೆ ಈ ಹಿಂದೆ ಜೂನ್‌ನಲ್ಲಿ ನಡೆದ ರ‍್ಯಾಲಿಯಲ್ಲಿ 50 ಲಕ್ಷ ಮಂದಿ, ಅಕ್ಟೋಬರ್‌ನಲ್ಲಿ ನಡೆದ ರ‍್ಯಾಲಿಯಲ್ಲಿ 70 ಲಕ್ಷ ಮಂದಿ ಪಾಲ್ಗೊಂಡಿದ್ದರು ಎಂದೂ ಅವರು ಮಾಹಿತಿ ನೀಡಿದ್ದಾರೆ.

ಯುರೋಪ್‌ನಿಂದ ಲ್ಯಾಟಿನ್ ಅಮೆರಿಕ, ಆಸ್ಟ್ರೇಲಿಯಾವರೆಗೆ 12ಕ್ಕೂ ಹೆಚ್ಚು ದೇಶಗಳಲ್ಲೂ 'ನೋ ಕಿಂಗ್ಸ್' ರ‍್ಯಾಲಿ ನಡೆಸಲಾಗಿದೆ ಎಂದೂ ಆಯೋಜಕರು ತಿಳಿಸಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀತಿಗಳನ್ನು ವಿರೋಧಿಸಿ 'ನೋ ಕಿಂಗ್ಸ್' ಹೆಸರಿನಡಿ ವಾಷಿಂಗ್ಟನ್‌ನಲ್ಲಿ ಭಾನುವಾರ ಪ್ರತಿಭಟನೆ ನಡೆಯಿತು –ಎಪಿ ಚಿತ್ರ

'ಭಾರತಕ್ಕೆ ಧನ್ಯವಾದ'

ಕೊಲಂಬೊ (ಪಿಟಿಐ): ಪಶ್ಚಿಮ ಏಷ್ಯಾ ಸಂಘರ್ಷದಿಂದ ಉಂಟಾದ ತೈಲ ಬಿಕ್ಕಟ್ಟು ಬಗೆಹರಿಸಲು ನೆರವು ನೀಡಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ದಿಸ್ಸನಾಯಕೆ ಅವರು ಧನ್ಯವಾದ ಸಲ್ಲಿಸಿದ್ದಾರೆ.

20 ಸಾವಿರ ಟನ್‌ಷ್ಟು ಡೀಸೆಲ್, 18 ಸಾವಿರ ಟನ್ ಪೆಟ್ರೋಲ್ ಸೇರಿ ಒಟ್ಟು 38 ಸಾವಿರ ಟನ್‌ನಷ್ಟು ತೈಲ ತುಂಬಿದ್ದ ಭಾರತದ ಹಡಗು ಶನಿವಾರ ಕೊಲಂಬೊ ಬಂದರು ತಲುಪಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಮತ್ತು ಶ್ರೀಲಂಕಾದ ಐಒಸಿ ಸಹಯೋಗದಲ್ಲಿ ಈ ತುರ್ತು ಕಾರ್ಯಾಚರಣೆ ನಡೆದಿದೆ ಎಂದು ಅವರು ಹೇಳಿದ್ದಾರೆ.

'ಭಾರತದ ತುರ್ತು ನೆರವಿಗಾಗಿ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರಿಗೂ ಧನ್ಯವಾದ ಅರ್ಪಿಸುತ್ತೇನೆ' ಎಂದು ದಿಸ್ಸನಾಯಕೆ ಸಾಮಾಜಿಕ ಜಾಲತಾಣದಲ್ಲಿ ಹೇಳಿದ್ದಾರೆ.

'ದೇವರ ಹೆಸರಲ್ಲಿ ಯುದ್ಧ ಸಮರ್ಥಿಸಲಾಗದು'

ರೋಮ್ (ಎಪಿ): 'ಜೀಸಸ್ ಶಾಂತಿಯ ಸಂಕೇತ. ಅವರು ಯಾವ ಯುದ್ಧವನ್ನೂ ಬೆಂಬಲಿಸುವುದಿಲ್ಲ. ಯೇಸು ಬೆಂಬಲದ ಹೆಸರಿನಲ್ಲಿ ಯಾರೂ ಯುದ್ಧವನ್ನು ಸಮರ್ಥಿಸಲಾಗದು' ಎಂದು ಪೋಪ್ 14ನೇ ಲಿಯೊ ಹೇಳಿದ್ದಾರೆ.

ಪೋಪ್ 14ನೇ ಲಿಯೊ

'ಗರಿಗಳ ಭಾನುವಾರ' ಆಚರಣೆಯ ಅಂಗವಾಗಿ ವ್ಯಾಟಿಕನ್ ಸೇಂಟ್ ಪೀಟರ್ಸ್ ಸ್ಕ್ವೇರ್‌ನಲ್ಲಿ ಸೇರಿದ್ದ ಅಪಾರ ಸಂಖ್ಯೆಯ ಜನರನ್ನು ಉದ್ದೇಶಿಸಿ ಸಂದೇಶ ನೀಡಿದ ಅವರು, 'ದೇವರು ಹಿಂಸೆಯನ್ನು ಒಪ್ಪುವುದಿಲ್ಲ, ಯುದ್ಧ ಮಾಡುವರ ಪ್ರಾರ್ಥನೆ ಯನ್ನೂ ಅವರು ಆಲಿಸುವುದಿಲ್ಲ, ಜೀಸಸ್, ತುಳಿತಕ್ಕೊಳಗಾದವರನ್ನು ಸಾಂತ್ವನಗೊಳಿಸುವ ದೇವರು. ಯುದ್ಧವು ಮನುಕುಲದ ಘೋರ ದುರಂತ' ಎಂದು ಹೇಳಿದರು.

ಪಶ್ಚಿಮ ಏಷ್ಯಾ ಸಂಘರ್ಷವನ್ನು ಇಸ್ರೇಲ್, ಅಮೆರಿಕ, ಇರಾನ್‌ನ ಮುಖಂಡರು ಧರ್ಮದ ಹೆಸರಿನಲ್ಲಿ ಸಮರ್ಥಿಸಿಕೊಂಡಿದ್ದಾರೆ. 'ಮಿಲಿಟರಿ ಶಕ್ತಿಯಿಂದ ತನ್ನ ಶತ್ರುರಾಷ್ಟ್ರವನ್ನು ಮಣಿಸಲು ಪ್ರಯತ್ನಿಸುತ್ತಿರುವ ಕ್ರಿಶ್ಚಿಯನ್ ರಾಷ್ಟ್ರ ಅಮೆರಿಕ' ಎಂದು ಅಲ್ಲಿನ ರಕ್ಷಣಾ ಕಾರ್ಯದರ್ಶಿ ಹೆಗ್ಸೆತ್ ಹೇಳಿದ್ದಾರೆ. ರಷ್ಯಾದ ಆರ್ಥೊಡೆಕ್ಸ್ ಚರ್ಚ್ ಕೂಡ, ಉಕ್ರೇನ್ ವಿರುದ್ಧದ ಯುದ್ಧವನ್ನು 'ಪವಿತ್ರ ಯುದ್ಧ' ಎಂದು ಕರೆದಿದೆ.

ಶುಭ ಶುಕ್ರವಾರ ಮತ್ತು ಈಸ್ಟರ್ ಹಬ್ಬದ ಪೂರ್ವಭಾವಿಯಾಗಿ 'ಗರಿಗಳ ಭಾನುವಾರ' ಆಚರಣೆ ನಡೆಯುತ್ತದೆ. ಪೋಪ್ ಲಿಯೊ ಅವರು, ಯುದ್ಧದಿಂದಾಗಿ ಪಶ್ಚಿಮ ಏಷ್ಯಾ ರಾಷ್ಟ್ರಗಳಲ್ಲಿ ಸಂಕಷ್ಟ ಎದುರಿಸುತ್ತಿರುವ ಕ್ರೈಸ್ತರಿಗಾಗಿಯೂ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

'ಯುದ್ಧದಿಂದಾಗಿ ಪ್ರಚಂಡಾದ್ಯಂತ ಎಷ್ಟೊಂದು ಜನರು ತೊಂದರೆ ಅನುಭವಿಸುತ್ತಿದ್ದಾರೆ ಎನ್ನುವುದನ್ನು ಕ್ರೈಸ್ತರು ಮರೆಯಬಾರದು. ಯುದ್ಧ ಕೊನೆಗೊಳ್ಳಲು ದೇವರ ಬಳಿ ನಿಮ್ಮ ಪ್ರಾರ್ಥನೆ ಸಲ್ಲಿಸಿ' ಎಂದು ಅವರು ಮನವಿ ಮಾಡಿದರು.

ಭಗವಾನ್ ಮಹಾವೀರ: ಜೀವನ, ತತ್ವಶಾಸ್ತ್ರ

● ಶಾಂತಿಲಾಲ್ ಬೋಹ್ರಾ

ಜೈನ ಧರ್ಮ ಮತ್ತು ತತ್ವಶಾಸ್ತ್ರವು ಅನಾದಿ ಕಾಲದಿಂದಲೂ ಹರಿಯುತ್ತಿದೆ. ಪ್ರತಿ ಯುಗದಲ್ಲಿ, ಕ್ರಮವಾಗಿ ಒಂದರಿಂದ ಇಪ್ಪತ್ತನಾಲ್ಕು ತೀರ್ಥಂಕರರು ಭಾರತದ ಈ ಪವಿತ್ರ ಭೂಮಿಗೆ ಇಳಿದು ದೈವಿಕ ಧರ್ಮವನ್ನು ಘೋಷಿಸುತ್ತಾರೆ. ಪ್ರಸ್ತುತ ಯುಗದಲ್ಲಿ, ಭಗವಾನ್ ಶ್ರೀ ವೃಷಭದೇವನಿಂದ ಭಗವಾನ್ ಮಹಾವೀರ ಪೂರ್ಣಗೊಂಡಿದ್ದಾರೆ. ಕೊನೆಯ ತೀರ್ಥಂಕರರಾದ ಭಗವಾನ್ ಮಹಾವೀರ ಪ್ರಭುಗಳು ಕ್ರಿ.ಪೂ. 599ರಲ್ಲಿ ಚೈತ್ರ ಶುಕ್ಲ ತ್ರಯೋದಶಿಯ ಪವಿತ್ರ ದಿನದಂದು ಜನಿಸಿದರು. ಈ ಶುಭಸಂದರ್ಭವನ್ನು ಪ್ರಪಂಚದಾದ್ಯಂತ 'ಮಹಾವೀರ ಜನ್ಮಕಲ್ಯಾಣಕ್' ಎಂದು ಭಕ್ತಿ ಮತ್ತು ಸಂತೋಷದಿಂದ ಆಚರಿಸಲಾಗುತ್ತದೆ.

ಭಗವಾನ್ ಮಹಾವೀರರ ಜನನದ ಸಮಯದಲ್ಲಿ, ದೇಶದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಪರಿಸ್ಥಿತಿ ಅತ್ಯಂತ ಅನಿಶ್ಚಿತವಾಗಿತ್ತು. ಆಚರಣೆಗಳು, ಯಜ್ಞಗಳು ಮತ್ತು ತ್ಯಾಗದ ಆಚರಣೆಯು ವ್ಯಾಪಕವಾಗಿತ್ತು. ಪ್ರಾಣಿಗಳು, ಮಹಿಳೆಯರು ಮತ್ತು ಕೆಳವರ್ಗದವರನ್ನು ದಮನಿಸಲಾಗುತ್ತಿತ್ತು. ಧರ್ಮದ ಸ್ವರೂಪವು ಬಾಹ್ಯ ಆಡಂಬರ ಮತ್ತು ಪ್ರದರ್ಶನದಲ್ಲಿ ಸಿಲುಕಿಕೊಂಡಿತ್ತು ಮತ್ತು ಜಾತಿವಾದದ ಪ್ರಭಾವವು ಬೆಳೆಯುತ್ತಿತ್ತು. ಅಂತಹ ಕಷ್ಟದ ಸಮಯದಲ್ಲಿ, ಭಗವಾನ್ ಮಹಾವೀರರ ಹೊರಹೊಮ್ಮುವಿಕೆ ಇಡೀ ಜಗತ್ತಿಗೆ ಒಂದು ವರದಾನವೆಂದು ಸಾಬೀತಾಯಿತು.

ಮಹಾವೀರರು ಎಲ್ಲ ಜೀವಿಗಳನ್ನು ಒಬ್ಬರ ಸ್ವಂತ ಆತ್ಮವೆಂದು ಅನುಭವಿಸುವ ಸಂದೇಶವನ್ನು ಬೋಧಿಸಿದರು. ಎಲ್ಲ ಜೀವಿಗಳ ನಡುವೆ ಪರಸ್ಪರ ಸಹಬಾಳ್ವೆ ಮತ್ತು ಸಹಕಾರದ ಸಂದೇಶವನ್ನು ತಿಳಿಸಿದರು. ಭಗವಾನ್ ಮಹಾವೀರರ ಜೀವನವು

ಬೋಧನೆಗಳಿಗೆ ಸೀಮಿತವಾಗಿರಲಿಲ್ಲ. ಅದು ಸ್ವಯಂ-ಸಾಕ್ಷಾತ್ಕಾರಗೊಂಡ ಸತ್ಯವಾಗಿತ್ತು. ಅವರು ನಡವಳಿಕೆಗೆ ಆದ್ಯತೆ ನೀಡಿದರು ಮತ್ತು ಜ್ಞಾನ, ತತ್ವಶಾಸ್ತ್ರ, ಚಾರಿತ್ರ್ಯ ಮತ್ತು ತಪಸ್ಸಿಯನ್ನು ಧಾರ್ಮಿಕ ಆಚರಣೆಯ ಮೂಲಭೂತ ಅಡಿಪಾಯವೆಂದು ಘೋಷಿಸಿದರು. ರಾಜಮನೆತನದ ಸುಖಭೋಗಗಳು, ಕುಟುಂಬ ಮತ್ತು ಎಲ್ಲಾ ಲೌಕಿಕ ಸುಖಗಳನ್ನು ತ್ಯಜಿಸಿ, ಅವರು 30ನೇ ವಯಸ್ಸಿನಲ್ಲಿ ತ್ಯಾಗದ ಮಾರ್ಗವನ್ನು ಸ್ವೀಕರಿಸಿದರು.

ಇಂದು ಮಹಾವೀರ ಜಯಂತಿ

ಹನ್ನೆರಡುವರೆ ವರ್ಷಗಳ ಕಾಲ, ಅವರು ಕಠಿಣ ತಪಸ್ಸು, ಧ್ಯಾನ ಮತ್ತು ಮೌನ ಧ್ಯಾನದ ಮೂಲಕ ಆತ್ಮಶುದ್ಧಿಯ ಮಾರ್ಗವನ್ನು ಅನುಸರಿಸಿದರು. ಈ ಅವಧಿಯಲ್ಲಿ, ಅವರು ಸಮಚಿತ್ತದಿಂದ ಲೆಕ್ಕವಿಲ್ಲದಷ್ಟು ಕಷ್ಟಗಳನ್ನು ಸಹಿಸಿಕೊಂಡು ಅಂತಿಮವಾಗಿ ಜ್ಞಾನವನ್ನು ಸಂಪಾದಿಸಿ ಸರ್ವಜ್ಞರಾದರು. ನಂತರ 30 ವರ್ಷಗಳ ಕಾಲ ಜನರ ಕಲ್ಯಾಣಕ್ಕಾಗಿ ಬೋಧಿಸಿದರು. ಅವರ ಅಹಿಂಸೆ, ಸ್ವಾಧೀನವಿಲ್ಲದಿರುವುದು ಮತ್ತು ಬಹುತ್ವದ ಸಂದೇಶವು ಎಲ್ಲಾ ಮಾನವೀಯತೆಗೆ ಮಾರ್ಗದರ್ಶಿಯಾಯಿತು. ಅವರ ಬೋಧನೆಗಳಿಂದ ಪ್ರೇರಿತರಾಗಿ, ಸಾವಿರಾರು ಜನರು ತ್ಯಾಗದ ಮಾರ್ಗವನ್ನು ಅಳವಡಿಸಿಕೊಂಡರು ಮತ್ತು ಲಕ್ಷಾಂತರ ಗೃಹಸ್ಥರು ಶ್ರಾವಕ-ಶ್ರಾವಿಕ ಧರ್ಮವನ್ನು ಅನುಸರಿಸಿದರು.

ಭಗವಾನ್ ಮಹಾವೀರರು ತಮ್ಮ ಧಾರ್ಮಿಕ ಕ್ರಮದೊಳಗೆ ಗಣ ಮತ್ತು ಗಣಧರ ಸಂಪ್ರದಾಯಗಳನ್ನು ಸ್ಥಾಪಿಸಿದರು. ಶಿಸ್ತು ಮತ್ತು ಸಮನ್ವಯದ ವಿಶಿಷ್ಟ ಉದಾಹರಣೆಯನ್ನು ನೀಡಿದರು. ಅವರು ಸಮಾಜದ ಪ್ರತಿಯೊಂದು ವರ್ಗವನ್ನು ರಾಜರಿಂದ ಹಿಡಿದು ಸಾಮಾನ್ಯ ಜನರವರೆಗೆ ಸಮಾನವಾಗಿ ನೀತಿಯ ಮಾರ್ಗಕ್ಕೆ ಮಾರ್ಗದರ್ಶನ ಮಾಡಿದರು.

72ನೇ ವಯಸ್ಸಿನಲ್ಲಿ, ತಮ್ಮ ಅಂತಿಮ ಧರ್ಮೋಪದೇಶವನ್ನು ನೀಡುತ್ತಾ, ದೀಪಾವಳಿಯ ಪವಿತ್ರ ರಾತ್ರಿಯಂದು ಭಗವಂತನು ನಿರ್ವಾಣವನ್ನು ಪಡೆದರು. 'ಬದುಕು ಮತ್ತು ಬದುಕಲು ಬಿಡಿ' ಎಂಬ ಅವರ ಸಂದೇಶವು ಮಾನವೀಯತೆಗೆ ಶಾಶ್ವತ ಸ್ಫೂರ್ತಿಯಾಗಿ ಉಳಿದಿದೆ.

ಭಗವಾನ್ ಮಹಾವೀರರ ಈ ಪವಿತ್ರ 2625ನೇ ಜನ್ಮದಿನಾಚರಣೆಯ ಶುಭಸಂದರ್ಭದಲ್ಲಿ, ಅವರ ಅಹಿಂಸೆ, ಸತ್ಯ ಮತ್ತು ಸದ್ಭಾವನೆಯ ಸಂದೇಶವನ್ನು ಸಮಾಜದ ಪ್ರತಿಯೊಂದು ವರ್ಗಕ್ಕೂ ಹರಡಲು ನಿರಂತರವಾಗಿ ಶ್ರಮಿಸುತ್ತಿರುವ ಬೆಂಗಳೂರಿನ ಜೈನ ಯುವ ಸಂಘಟನೆಯು, ವಿವಿಧ ಸಾಮಾಜಿಕ ಸಂಸ್ಥೆಗಳೊಂದಿಗೆ ತೊಡಗಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಏಕತೆ ಮತ್ತು ಸಮನ್ವಯದ ಮನೋಭಾವವನ್ನು ಬಲಪಡಿಸಲು ಶ್ರಮಿಸುತ್ತಿದೆ. ಸಂಘಟನೆಯ ಈ ಪವಿತ್ರ ಪ್ರಯತ್ನವು ಸ್ಫೂರ್ತಿ ನೀಡಲಿ.

ಲೇಖಕ ಶಿಕ್ಷಕ, ಬೆಂಗಳೂರು

ಅಸ್ಸಾಂ: ಐದು ಗ್ಯಾರಂಟಿ ಘೋಷಿಸಿದ 'ಕೈ'

ಮುಖ್ಯಮಂತ್ರಿ ಹಿಮಂತ ವಿರುದ್ಧ ಖರ್ಗೆ ವಾಗ್ದಾಳಿ
ಬಿಜೆಪಿ ಪರ ಕೇಂದ್ರ ಗೃಹ ಸಚಿವ ಅಮಿತ್ ಶಾ ಪ್ರಚಾರ

ನವೊಬೊಯಿಚಾ (ಪಿಟಿಐ): ಆರೋಗ್ಯ ವಿಮೆ, ಭೂ ಹಕ್ಕು, ಮಹಿಳೆಯರಿಗೆ ಆರ್ಥಿಕ ನೆರವು ಮತ್ತು ಗಾಯಕ ಜುಬಿನ್ ಗರ್ಗ್ ಸಾವಿಗೆ ಸಂಬಂಧಿಸಿ ನ್ಯಾಯದಾನ ಸೇರಿ ಕಾಂಗ್ರೆಸ್ ಪಕ್ಷವು ಒಟ್ಟು ಐದು ಗ್ಯಾರಂಟಿಗಳನ್ನು ಅಸ್ಸಾಂ ಜನತೆಗೆ ನೀಡಿದೆ. ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಗ್ಯಾರಂಟಿಗಳನ್ನು ಘೋಷಿಸಿದರು.

ಇಲ್ಲಿ ಭಾನುವಾರ ನಡೆದ ಸಾರ್ವಜನಿಕ ರ‍್ಯಾಲಿಯಲ್ಲಿ ಮಾತನಾಡಿದ ಖರ್ಗೆ, 'ದೆಹಲಿಯಲ್ಲಿನ ತಮ್ಮ ನಾಯಕರು ಮತ್ತು ಅವರ ಕುಟುಂಬದವರ ಬೊಕ್ಕಸವನ್ನು ತುಂಬಿಸಲು ಇಲ್ಲಿನ 'ಡಬಲ್ ಎಂಜಿನ್' ಬಿಜೆಪಿ ಸರ್ಕಾರವು ತೀವ್ರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಅಸ್ಸಾಂ ಅನ್ನು ಲೂಟಿ ಹೊಡೆಯುತ್ತಿದೆ. ಭ್ರಷ್ಟಾಚಾರದಲ್ಲಿ ಬಿಜೆಪಿ ನಾಯಕರ ಕುಟುಂಬದವರೂ ಸೇರಿಕೊಂಡಿದ್ದಾರೆ' ಎಂದು ಆರೋಪಿಸಿದರು.

'ಅಸ್ಸಾಂನ ಒಂದೇ ಕುಟುಂಬದ ಬಳಿ 12 ಸಾವಿರ ಎಕರೆ ಜಮೀನು ಇದೆ. ರಾಜ್ಯದ ನೆಲವನ್ನು ಅದಾನಿ ಮತ್ತು ರಾಮ್‌ದೇವ್ ಅವರಿಗೆ ನೀಡಲಾಗಿದೆ. ಸರ್ಕಾರಿ ಭೂಮಿಯನ್ನು ಲೂಟಿ ಮಾಡಲಾಗುತ್ತಿದೆ. ಅಲಿ ಬಾಬಾ ಮತ್ತು 40 ಕಳ್ಳರು ಲೂಟಿ ಮಾಡುವುದನ್ನು ತಡೆಯಬೇಕು. ದೆಹಲಿಯಲ್ಲಿ ಅಲಿ ಬಾಬಾ ಕುಳಿತಿದ್ದಾರೆ. ರಾಜ್ಯದ ವಿವಿಧೆಡೆ 40 ಕಳ್ಳರು ವ್ಯಾಪಿಸಿಕೊಂಡಿದ್ದಾರೆ' ಎಂದರು.

ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರನ್ನು ಟೀಕಿಸಿದ ಖರ್ಗೆ, 'ಶರ್ಮಾ ಅವರು ನಕಲಿ ಮುಖ್ಯಮಂತ್ರಿ. ಸರ್ಬಾನಂದ ಸೋನೊವಾಲ್ ಅವರ ನೇತೃತ್ವದಲ್ಲಿ 2021ರ ಚುನಾವಣೆಯನ್ನು ಪಕ್ಷವು ನಡೆಸಿತ್ತು. ಆದರೆ, ಚುನಾವಣೆ ಆದ ಮೇಲೆ ಬುಡಕಟ್ಟು ನಾಯಕರಾದ ಸೋನೊವಾಲ್ ಅವರನ್ನು ಕಿತ್ತು ಹಾಕಿ ತಾವೇ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತುಕೊಂಡರು' ಎಂದು ಅವರು ಹೇಳಿದರು.

'ದಲಿತರು ಸೇವೆ ಮಾಡುವುದಕ್ಕಾಗಿಯೇ ಜನಿಸಿದವರು' ಎಂದು ಶರ್ಮಾ ಅವರು 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದರು. ಬಳಿಕ ಅದನ್ನು ಅಳಿಸಿ ಹಾಕಿದರಾದರೂ ಅವರ ಮನಃಸ್ಥಿತಿಯನ್ನು ಈ ಪೋಸ್ಟ್ ತೋರಿಸುತ್ತದೆ. ಇಂಥವರನ್ನು ಬಿಜೆಪಿ ಮುಖ್ಯಮಂತ್ರಿಯನ್ನಾಗಿ ಮಾಡಿದೆ. ದ್ವೇಷ ಭಾಷಣದಲ್ಲಿ ಶರ್ಮಾ ಅವರು ದೇಶದಲ್ಲೇ ಮುಂಚೂಣಿಯಲ್ಲಿದ್ದಾರೆ' ಎಂದು ಲೇವಡಿ ಮಾಡಿದರು.

ಯಾವುದೆಲ್ಲಾ ಐದು ಗ್ಯಾರಂಟಿಗಳು?

- ರಾಜ್ಯದ ಪ್ರತೀ ಮಹಿಳೆಗೆ ಮಾಸಿಕ ಆರ್ಥಿಕ ನೆರವು. ಮಹಿಳೆಯರು ಉದ್ಯಮವನ್ನು ಆರಂಭಿಸುತ್ತಾರೆ ಅಥವಾ ವಿಸ್ತರಿಸುತ್ತಾರೆ ಎಂದರೆ, ಹೆಚ್ಚುವರಿಯಾದ ₹50 ಸಾವಿರ ನೆರವು
- ಎಲ್ಲ ಕುಟುಂಬಗಳಿಗೂ ₹25 ಲಕ್ಷ ಆರೋಗ್ಯ ವಿಮೆ
- ಹಿರಿಯ ನಾಗರಿಕರಿಗೆ ಮಾಸಿಕ ₹1,250 ಪಿಂಚಣಿ. ಹಿರಿಯ ನಾಗರಿಕರಿಗಾಗಿಯೇ ಪ್ರತ್ಯೇಕ ಸಚಿವಾಲಯ
- ಬುಡಕಟ್ಟುಗಳ 100 ಕುಟುಂಬಗಳ ಭೋಗ್ಯ ಕರಾರು ಪಟ್ಟಾ ಜಮೀನನ್ನು ಮಾಲೀಕತ್ವ ಬದಲಾವಣೆ ಪಟ್ಟಾವಾಗಿ ಬದಲಾಯಿಸಿ ಕೊಡುವ ಭೂಮಿ ಹಕ್ಕು ಯೋಜನೆ
- ಅಧಿಕಾರಕ್ಕೆ ಬಂದ 100 ದಿನಗಳ ಒಳಗೆ ಗಾಯಕ ಜುಬಿನ್ ಗರ್ಗ್ ಸಾವಿನ ಪ್ರಕರಣದಲ್ಲಿ ನ್ಯಾಯದಾನ

ನವೊಬೊಯಿಚಾದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಅಸ್ಸಾಂನ ಕಾಂಗ್ರೆಸ್ ನಾಯಕರು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಭಾನುವಾರ ಸ್ಮರಣಿಕೆ ನೀಡಿದರು — ಪಿಟಿಐ ಚಿತ್ರ

> ಶರ್ಮಾ ಅವರ ಸರ್ಕಾರವು ತನ್ನ ವಿರೋಧಿಗಳನ್ನು ಜೈಲಿಗೆ ಹಾಕಿ ಭಯದ ವಾತಾವರಣ ಸೃಷ್ಟಿಸುತ್ತಿದೆ. ಬುಲ್ಡೋಜರ್ ಅನ್ನು ಬಳಸಿ ರಾಜ್ಯದ ಜನರನ್ನು ವಿಭಜಿಸುವ ಯತ್ನ ನಡೆಸುತ್ತಿದೆ
> **ಮಲ್ಲಿಕಾರ್ಜುನ ಖರ್ಗೆ,** ಕಾಂಗ್ರೆಸ್ ಅಧ್ಯಕ್ಷ

> ಅಸ್ಸಾಂನಲ್ಲಿ ಬಿಜೆಪಿಯು ಹ್ಯಾಟ್ರಿಕ್ ಸಾಧನೆ ಮಾಡಲಿದೆ. ಸೋನೊವಾಲ್ ಅವರ ನೇತೃತ್ವದಲ್ಲಿ ಮೊದಲು ನಾವು ಸರ್ಕಾರ ರಚಿಸಿದೆವು. ಈಗ ಶರ್ಮಾ ಅವರ ನೇತೃತ್ವದಲ್ಲಿ ಮೂರನೇ ಬಾರಿಗೆ ಸರ್ಕಾರ ರಚಿಸಲಿದ್ದೇವೆ
> **ನಿತಿನ್ ನವೀನ್,** ಬಿಜೆಪಿ ಅಧ್ಯಕ್ಷ

ಒಳನುಸುಳುಕೋರರಿಗೆ ತಡೆ: 10 ವರ್ಷ ಸಾಲಲಿಲ್ಲ- ಶಾ

- ಒಳನುಸುಳುಕೋರರು ಅಸ್ಸಾಂ ಮೂಲಕ ಭಾರತವನ್ನು ಪ್ರವೇಶಿಸುವುದನ್ನು ಕಳೆದ 10 ವರ್ಷಗಳಲ್ಲಿ ಬಿಜೆಪಿ ಸರ್ಕಾರವು ತಡೆದಿದೆ. ಆದರೆ, ಇದು ಸಾಕಾಗುವುದಿಲ್ಲ. ಪ್ರತಿಯೊಬ್ಬ ಅಕ್ರಮ ವಲಸಿಗನನ್ನೂ ಇಲ್ಲಿಂದ ಹೊರದಬ್ಬಬೇಕು. ಇದಕ್ಕಾಗಿ ಇನ್ನೂ ಐದು ವರ್ಷ ನಮಗೆ ಬೇಕು
- ನಿರ್ದಿಷ್ಟ ಸಮುದಾಯವೊಂದರ ಜನರು ನಾಲ್ಕು ಮದುವೆ ಆಗುತ್ತಾರೆ. ಇದನ್ನು ತಡೆಯಲು ನಾವು ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿ ಮಾಡುತ್ತೇವೆ
- ಕಾಂಗ್ರೆಸ್ ತನ್ನ ಆಡಳಿತಾವಧಿಯಲ್ಲಿ ದೇಶದ ಭದ್ರತೆಯನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಪಾಕಿಸ್ತಾನದ ಭಯೋತ್ಪಾದಕರು ನಮ್ಮ ದೇಶದ ಜನರನ್ನು ಹತ್ಯೆ ಮಾಡಲು ಅವರು (ಕಾಂಗ್ರೆಸ್) ಉತ್ತೇಜನ ನೀಡಿದರು. ಕಾಂಗ್ರೆಸ್ ಹಿಂದಿನಿಂದಲೂ ಅಸ್ಸಾಂ ವಿರೋಧಿ. ಭಾರತ–ಚೀನಾ ಯುದ್ಧದಲ್ಲಿ ನೆಹರೂ ಅವರು ಅಸ್ಸಾಂ ಅನ್ನು ಅದರ ಹಣೆಬರಹಕ್ಕೆ ಬಿಟ್ಟುಬಿಟ್ಟಿದ್ದರು
- ಈಗ ಬಾಂಗ್ಲಾದೇಶಕ್ಕೆ ಸೇರಿರುವ ಕೆಲವು ಪ್ರದೇಶಗಳನ್ನೂ ಸೇರಿ ಅಸ್ಸಾಂ ಅನ್ನು ನೆಹರೂ ಅವರು ಪಾಕಿಸ್ತಾನಕ್ಕೆ ನೀಡಲು ಬಯಸಿದ್ದರು. ಇದನ್ನು ಇಲ್ಲಿನ ಮೊದಲ ಮುಖ್ಯಮಂತ್ರಿ ಗೋಪಿನಾಥ್ ಬಾರ್ದೋಲೋಯಿ ಅವರು ವಿರೋಧಿಸಿದರು. ಇದಕ್ಕಾಗಿ ಗೋಪಿನಾಥ್ ಅವರಿಗೆ ಭಾರತ ರತ್ನ ನೀಡಲು ಕಾಂಗ್ರೆಸ್ ವಿರೋಧಿಸಿತು. ಬಳಿಕ, ವಾಜಪೇಯಿ ಅವರು ಇವರಿಗೆ ಭಾರತ ರತ್ನ ನೀಡಿದರು

ಅಮಿತ್ ಶಾ, ಕೇಂದ್ರ ಗೃಹ ಸಚಿವ
(ಸೋನಿತ್‌ಪುರ ಹಾಗೂ ತಿಹುವಿನಲ್ಲಿ ನಡೆದ ರ‍್ಯಾಲಿಗಳಲ್ಲಿ ಮಾಡಿದ ಭಾಷಣ)

₹8 ಸಾವಿರ ಕೂಪನ್ ಡಿಎಂಕೆ ಭರವಸೆ

ಎಂ.ಕೆ.ಸ್ಟಾಲಿನ್

ಚೆನ್ನೈ (ಪಿಟಿಐ): ಏಪ್ರಿಲ್‌ನಲ್ಲಿ ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ ಮಹಿಳೆಯರ ಮತಗಳನ್ನು ಸೆಳೆಯುವುದಕ್ಕಾಗಿ ಆಡಳಿತಾರೂಢ ಡಿಎಂಕೆ 'ಇಲ್ಲತ್ತರಸಿ' (ಗೃಹಿಣಿ) ಕೂಪನ್ ಯೋಜನೆಯನ್ನು ಭಾನುವಾರ ಘೋಷಿಸಿದೆ.

ವಿವಿಧ ಗೃಹೋಪಯೋಗಿ ವಸ್ತುಗಳನ್ನು ಖರೀದಿಸಲು ಅಥವಾ ಬದಲಾಯಿಸಲು ಗೃಹಿಣಿಯರಿಗೆ ಈ ಯೋಜನೆಯಡಿ ₹8 ಸಾವಿರ ಮೌಲ್ಯದ ಕೂಪನ್ ನೀಡಲಾಗುತ್ತದೆ.

ಪಕ್ಷದ ಪ್ರಣಾಳಿಕೆ ಬಿಡುಗಡೆ ಮಾಡಿ, ಈ ಯೋಜನೆ ಘೋಷಿಸಿದ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, 'ಪಕ್ಷವು ಮತ್ತೆ ಅಧಿಕಾರಕ್ಕೆ ಬಂದಾಗ ಶಿಕ್ಷಣ, ಕೈಗಾರಿಕೆ, ಕೃಷಿ ಸೇರಿ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿ ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುವುದು' ಎಂದರು.

'ಈ ಕೂಪನ್ ಬಳಸಿಕೊಂಡು ಮಹಿಳೆಯರು ಟಿ.ವಿ, ರೆಫ್ರಿಜರೇಟರ್, ಮಿಕ್ಸಿ, ಮೈಕ್ರೋವೇವ್ ಓವನ್, ಇಂಡಕ್ಷನ್ ಸ್ಟೌ ಸೇರಿ ವಿವಿಧ ಗೃಹೋಪಯೋಗಿ ವಸ್ತುಗಳನ್ನು ಖರೀದಿಸಬಹುದು. ಇಲ್ಲವೇ, ಈಗಾಗಲೇ ಇರುವ ಇಂತಹ ವಸ್ತುಗಳನ್ನು ವಿನಿಮಯ ಮಾಡಿ, ಬೇರೆ ವಸ್ತುಗಳನ್ನು ಖರೀದಿ ಮಾಡಬಹುದು' ಎಂದು ಹೇಳಿದರು.

'ಆದಾಯ ತೆರಿಗೆ ವ್ಯಾಪ್ತಿಗೆ ಒಳಪಡದ ಮಹಿಳೆಯರಿಗೆ ಈ ಹೊಸ ಯೋಜನೆಯಡಿ ಒಂದು ಬಾರಿ ಈ ಕೂಪನ್ ಕೊಡಲಾಗುವುದು' ಎಂದು ಸ್ಟಾಲಿನ್ ಹೇಳಿದರು.

'ಸಾಮಾನ್ಯವಾಗಿ ರಾಜ್ಯ ವಿಧಾನಸಭಾ ಚುನಾವಣೆ ವೇಳೆ ಡಿಎಂಕೆ ಪ್ರಕಟಿಸುವ ಪ್ರಣಾಳಿಕೆಯೇ 'ಹೀರೊ' ಆಗಿರುತ್ತದೆ. ಆದರೆ, ಈ ಬಾರಿಯ ನಮ್ಮ ಪ್ರಣಾಳಿಕೆ 'ಸೂಪರ್ ಸ್ಟಾರ್'' ಎಂದು ಬಣ್ಣಿಸಿದ ಅವರು, 'ಏಪ್ರಿಲ್ 23ರಂದು ನಡೆಯುವ ಚುನಾವಣೆಯಲ್ಲಿ 234 ಸ್ಥಾನಗಳಲ್ಲಿ ಪಕ್ಷವು 200 ಸ್ಥಾನಗಳಲ್ಲಿ ಗೆದ್ದು ಮತ್ತೆ ಅಧಿಕಾರಕ್ಕೆ ಬರಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಿ.ಎಂ ಆರೋಗ್ಯ ವಿಮಾ ಯೋಜನೆಯಡಿ ವಿಮಾ ಮೊತ್ತ ₹10 ಲಕ್ಷಕ್ಕೆ ಹೆಚ್ಚಳ, 50 ವರ್ಷ ಮೇಲ್ಪಟ್ಟ ವೃದ್ಧರು, ವಿಧವೆಯರು ಹಾಗೂ ಅವಿವಾಹಿತೆಯರಿಗೆ ನೀಡುವ ಪಿಂಚಣಿ ₹2 ಸಾವಿರಕ್ಕೆ ಹೆಚ್ಚಳ ಸೇರಿ ಹಲವು ಭರವಸೆಗಳನ್ನು ಪ್ರಣಾಳಿಕೆ ಒಳಗೊಂಡಿದೆ.

ಐದು ವಿಧಾನಸಭೆಗಳಿಗೆ ನಡೆಯುತ್ತಿರುವ ಚುನಾವಣಾ ಫಲಿತಾಂಶದ ಮೇಲೆ ಇಂಧನ ವ್ಯತ್ಯಯ ವಿಚಾರ ಪರಿಣಾಮ ಬೀರಲಿದೆಯೇ?

ಹೌದು ಇಲ್ಲ ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

'ಕೇರಳದಲ್ಲಿ ಬಿಜೆಪಿ ಸರ್ಕಾರ'

ಪಾಲಕ್ಕಾಡ್ (ಪಿಟಿಐ): 'ಕೇರಳದಲ್ಲಿ ಮುಂದಿನ ಸರ್ಕಾರ ರಚಿಸುವುದು ನಾವೇ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಭಾನುವಾರ ಇಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿ, 'ಕೇರಳದಲ್ಲಿ ಎನ್‌ಡಿಎ ಮೈತ್ರಿಕೂಟವು ಮುಂದಿನ ಸರ್ಕಾರ ರಚಿಸಲಿದೆ. ಇಲ್ಲಿನ ಎಲ್‌ಡಿಎಫ್ ಮತ್ತು ಯುಡಿಎಫ್ ಪರಸ್ಪರ ಒಪ್ಪಂದ ಮಾಡಿಕೊಂಡು ದಶಕಗಳಿಂದ ಜನರನ್ನು ಲೂಟಿ ಮಾಡುತ್ತಿವೆ. ಇವೆರಡು ಪಕ್ಷಗಳು ದಶಕಗಳಿಂದ ನಡೆಸುತ್ತಿರುವ ಭ್ರಷ್ಟಾಚಾರ ಮತ್ತು ರಾಜಕೀಯ ಅವಕಾಶವಾದದಲ್ಲಿ ಜನರು ಸಿಲುಕಿಕೊಂಡಿದ್ದಾರೆ' ಎಂದರು.

'ಇಲ್ಲಿ ಯುವಜನರು, ಮಹಿಳೆಯರು, ಕೃಷಿಕರು ಬಿಜೆಪಿಯತ್ತ ವಾಲುತ್ತಿದ್ದು, ಬದಲಾವಣೆ ಬಯಸುತ್ತಿದ್ದಾರೆ. ಬಿಜೆಪಿ ಉದಯವು ಎಲ್‌ಡಿಎಫ್ ಮತ್ತು ಯುಡಿಎಫ್‌ನಲ್ಲಿ ಹಗರಣಗಳು ಹೊರ ಬರುವ ಭಯ ಹುಟ್ಟಿಸಿದೆ' ಎಂದರು.

'ಎಲ್‌ಡಿಎಫ್ –ಯುಡಿಎಫ್ ನಡುವೆ ಪೈಪೋಟಿ ಇದ್ದರೆ ಇತರೆ ರಾಜ್ಯಗಳಲ್ಲಿ ಸ್ನೇಹ ಇದೆ. ಕಾಂಗ್ರೆಸ್ ಮತ್ತು ಸಿಪಿಎಂ ಮುಖಂಡರು ಪರಸ್ಪರ ಸುಳ್ಳು ನಿಂದನೆ ಮಾಡಿಕೊಳ್ಳುತ್ತಾರೆ. ಕೇರಳದ ಜನರು ಈ ಎರಡೂ ಪಕ್ಷಗಳ ವಿರುದ್ಧ ಎಚ್ಚರದಿಂದ ಇರಬೇಕು' ಎಂದು ಪ್ರಧಾನಿ ಹೇಳಿದರು

ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಕೇರಳದ ಪಾಲಕ್ಕಾಡ್‌ನಲ್ಲಿ ಸಾಂಪ್ರದಾಯಿಕ ಚೆಂಡೆ ಬಾರಿಸಿ ಚುನಾವಣಾ ರ‍್ಯಾಲಿಗೆ ಚಾಲನೆ ನೀಡಿದರು — ಪಿಟಿಐ ಚಿತ್ರ

ತ್ರಿಶ್ಯೂರ್‌ನಲ್ಲಿ ಪ್ರಧಾನಿ ರೋಡ್‌ಶೋ

ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಕೇರಳದ ಸಾಂಸ್ಕೃತಿಕ ರಾಜಧಾನಿ ತ್ರಿಶ್ಯೂರ್‌ನಲ್ಲಿ ವಿಧಾನಸಭಾ ಚುನಾವಣೆಯ ಅಂಗವಾಗಿ ರೋಡ್ ಶೋ ನಡೆಸಿದರು.

ತ್ರಿಶ್ಯೂರ್ ಜಿಲ್ಲೆಯ ಎನ್‌ಡಿಎ ಅಭ್ಯರ್ಥಿ ಪದ್ಮಜಾ ವೇಣುಗೋಪಾಲ್, ಕೇಂದ್ರ ಸಚಿವ ಸುರೇಶ್ ಗೋಪಿ ಮತ್ತಿತರರು ಭಾಗವಹಿಸಿದ್ದರು.

ಇದಕ್ಕೂ ಮುನ್ನ ಕುಟ್ಟನೆಲ್ಲೂರು ಹೆಲಿಪ್ಯಾಡ್‌ಗೆ ಬಂದಿಳಿದ ಪ್ರಧಾನಿ ಅವರಿಗೆ ಬಿಜೆಪಿ –ಎನ್‌ಡಿಎ ಮುಖಂಡರು ಸ್ವಾಗತ ಕೋರಿದರು.

ಟಿವಿಕೆ ಮುಖ್ಯಸ್ಥ ವಿಜಯ್ ಎರಡು ಕಡೆಗಳಲ್ಲಿ ಸ್ಪರ್ಧೆ

ವಿಜಯ್

ಚೆನ್ನೈ (ಪಿಟಿಐ): ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಮುಖ್ಯಸ್ಥ, ನಟ ವಿಜಯ್ ಅವರು ಏಪ್ರಿಲ್ 23ರಂದು ನಡೆಯಲಿರುವ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದಾರೆ.

ಚೆನ್ನೈನ ಪೆರಂಬೂರು ಮತ್ತು ತಿರುಚಿರಾಪಳ್ಳಿ ಪೂರ್ವ ಕ್ಷೇತ್ರಗಳಿಂದ ತಾವು ಕಣಕ್ಕಿಳಿಯುವುದಾಗಿ ಅವರು ಭಾನುವಾರ ಘೋಷಿಸಿದರು. ಇತರ ಕೆಲವು ಅಭ್ಯರ್ಥಿಗಳ ಪಟ್ಟಿಯನ್ನು ಇದೇ ವೇಳೆ ಬಿಡುಗಡೆ ಮಾಡಿದರು.

ವಿಜಯ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಎನ್.ಆನಂದ್, ಅಧವ್ ಅರ್ಜುನ, ಆರ್. ಅರುಣರಾಜ್, ಸಿಟಿಆರ್ ನಿರ್ಮಲ್ ಕುಮಾರ್ ಮತ್ತು ಕೆ.ಎ. ಸೆಂಗೊಟ್ಟೈಯನ್ ಅವರು ವಿವಿಧ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದಾರೆ.

ಶಬರಿಮಲೆ ಪ್ರಕರಣ ರಮೇಶ್ ಚೆನ್ನಿತ್ತಲ ಆರೋಪ

ಕೊಚ್ಚಿ (ಪಿಟಿಐ): 'ಶಬರಿಮಲೆ ಚಿನ್ನ ಕಳವು ಪ್ರಕರಣದಲ್ಲಿ ಸಿಪಿಎಂ ಕಣ್ಣಾಮುಚ್ಚಾಲೆ ಆಡುತ್ತಿದೆ' ಎಂದು ಕಾಂಗ್ರೆಸ್ ಮುಖಂಡ ರಮೇಶ್ ಚೆನ್ನಿತ್ತಲ ಆರೋಪಿಸಿದ್ದಾರೆ.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಶಬರಿಮಲೆ ಚಿನ್ನ ಕಳವು ಪ್ರಕರಣದ ಆರೋಪಿಗಳಾಗಿರುವ ಸಿಪಿಎಂ ಮುಖಂಡರನ್ನು ಈಗಲೂ ಸರ್ಕಾರ ರಕ್ಷಿಸುತ್ತಿದೆ' ಎಂದು ಆರೋಪಿಸಿದರು.

'ವಿ. ಕುಂಞಿಕೃಷ್ಣನ್ ಎಂಬುವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿದ್ದು ಬಿಟ್ಟರೆ ಉಳಿದ ಯಾರ ವಿರುದ್ಧವೂ ಸಿಪಿಎಂ ಕ್ರಮ ಕೈಗೊಂಡಿಲ್ಲ. ಶಬರಿಮಲೆ ದೇವಸ್ಥಾನದಿಂದ ಕಳುವಾಗಿರುವ ಚಿನ್ನ ಈಗ ಎಲ್ಲಿದೆ ಎನ್ನುವುದಕ್ಕೂ ಸರ್ಕಾರದ ಬಳಿ ಉತ್ತರ ಇಲ್ಲ' ಎಂದರು. 'ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕೇರಳವನ್ನು ಕಳೆದ 10 ವರ್ಷಗಳಿಂದ ಕತ್ತಲಲ್ಲಿ ಇಟ್ಟಿದ್ದಾರೆ'ಎಂದು ಚೆನ್ನಿತ್ತಲ ದೂರಿದರು.

'ಕಾಸಿಗಾಗಿ ಸೀಟು: ಉತ್ತರಿಸಿ'

ಮಲಪ್ಪುರಂ: 'ಹರಿಯಾಣದಲ್ಲಿ ಕಾಂಗ್ರೆಸ್ ಮುಖಂಡರ ವಿರುದ್ಧ ಕೇಳಿಬಂದಿರುವ 'ಕಾಸಿಗಾಗಿ ಸೀಟು' ಆರೋಪವು ಗಂಭೀರವಾದುದು. ವರಿಷ್ಠರು ಈ ಬಗ್ಗೆ ಉತ್ತರ ನೀಡಬೇಕು' ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದರು.

ಟಿಕೆಟ್ ಆಕಾಂಕ್ಷಿಗಳಿಂದ ಕಾಂಗ್ರೆಸ್ ಹಿರಿಯ ಮುಖಂಡರು ಮತ್ತು ಅವರ ಆಪ್ತರು ಭಾರಿ ಮೊತ್ತಕ್ಕೆ ಬೇಡಿಕೆ ಇಟ್ಟಿದ್ದಾರೆ. ಆರೋಪದ ಬಗ್ಗೆ ಪಕ್ಷ ಮೌನ ವಹಿಸಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ ಎಂದು ಅವರು ಹೇಳಿದ್ದಾರೆ.

ಬಿಜೆಪಿ ಪ್ರಾಯೋಜಿತ: 'ತಮ್ಮ ವಿರುದ್ಧ ದಾಖಲಾಗಿರುವ 'ಕಾಸಿಗಾಗಿ ಸೀಟು' ಪ್ರಕರಣವು ಬಿಜೆಪಿ–ಸಿಪಿಎಂ ಪ್ರಾಯೋಜಿತ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.

'ಚುನಾವಣಾ ಪ್ರಕ್ರಿಯೆಯ ಭಾಗವಾಗಿ ಈ ಪ್ರಕರಣವನ್ನು ಸೃಷ್ಟಿಸಲಾಗಿದೆ. ಯಾವುದೇ ಭಯವಿಲ್ಲ, ಕಾನೂನು ಪ್ರಕಾರ ಮುಂದುವರಿಯುತ್ತೇನೆ' ಎಂದು ಅವರು ಹೇಳಿದ್ದಾರೆ.

ಚೆನ್ನೈ: 13 ಕಡೆಗಳಲ್ಲಿ ಎಐಎಡಿಎಂಕೆ ಸ್ಪರ್ಧೆ

ಚೆನ್ನೈ (ಪಿಟಿಐ): ತಮಿಳುನಾಡಿನಲ್ಲಿ ವಿರೋಧ ಪಕ್ಷ ಎಐಎಡಿಎಂಕೆಯು ಚೆನ್ನೈ ನಗರದ ಹೆಚ್ಚಿನ ವಿಧಾನಸಭಾ ಕ್ಷೇತ್ರಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ನಿರ್ಧರಿಸಿದೆ.

ಚೆನ್ನೈ ಜಿಲ್ಲೆ ವ್ಯಾಪ್ತಿಯ 16 ವಿಧಾನಸಭಾ ಕ್ಷೇತ್ರಗಳ ಪೈಕಿ ಎಐಎಡಿಎಂಕೆ ಪಕ್ಷ 13 ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದು, ಡಿಎಂಕೆ ಜತೆ ನೇರ ಹಣಾಹಣಿಗೆ ಸಜ್ಜಾಗಿದೆ. ಇತರ ಮೂರು ಸ್ಥಾನಗಳನ್ನು ಮಿತ್ರ ಪಕ್ಷಗಳಾದ ಬಿಜೆಪಿ, ಎಎಂಎಂಕೆ ಮತ್ತು ಪಿಎಂಕೆಗೆ ಬಿಟ್ಟುಕೊಟ್ಟಿದೆ.

ಡಿಎಂಕೆಯ ಭದ್ರಕೋಟೆ ಚೆನ್ನೈ ನಗರದ ವ್ಯಾಪ್ತಿಯಲ್ಲಿ ಆಡಳಿತ ಪಕ್ಷವನ್ನು ಎದುರಿಸಲು ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ಮಾಜಿ ಸಚಿವರು, ಪಕ್ಷದ ಹಿರಿಯ ನಾಯಕರು ಮತ್ತು ಮಹಿಳೆಯರನ್ನು ಕಣಕ್ಕಿಳಿಸಿದ್ದಾರೆ.

ಮಾಜಿ ಸಚಿವರುಗಳಾದ ಬಿ.ವಲರ್ಮತಿ ಮತ್ತು ಗೋಕುಲ ಇಂದಿರಾ ಅವರಿಗೆ ಥೌಸಂಡ್ ಲೈಟ್ಸ್ ಮತ್ತು ಅಣ್ಣಾನಗರ ಕ್ಷೇತ್ರಗಳ ಟಿಕೆಟ್ ನೀಡಲಾಗಿದೆ. ಇವರು ಕ್ರಮವಾಗಿ ಡಿಎಂಕೆಯ ಹಾಲಿ ಶಾಸಕ ಎನ್.ಎಳಿಲನ್ ಮತ್ತು ಪಕ್ಷದ ನಾಯಕ ಎನ್. ಚಿತ್ರರಸು ಅವರನ್ನು ಎದುರಿಸಲಿದ್ದಾರೆ.

ಹಿರಿಯ ನಾಯಕರಾದ ಪಿ.ಸಂತಾನ ಕೃಷ್ಣನ್ ಮತ್ತು ಆದಿ ರಾಜಾರಾಮ್ ಅವರು ಕೊಳತ್ತೂರು ಹಾಗೂ ಚೆಪಾಕ್ ತಿರುವಲ್ಲಿಕೇನಿ ಕ್ಷೇತ್ರಗಳಲ್ಲಿ ಕ್ರಮವಾಗಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಮತ್ತು ಉಪ ಮುಖ್ಯಮಂತ್ರಿ ಉದಯನಿಧಿ ಅವರ ವಿರುದ್ಧ ಪೈಪೋಟಿ ನಡೆಸಲಿದ್ದಾರೆ. ಇಲ್ಲಿ ಎಐಎಡಿಎಂಕೆ–ಡಿಎಂಕೆ ಮಧ್ಯೆ ನೇರ ಹಣಾಹಣಿ ಏರ್ಪಟ್ಟಿದೆ.

ಶಾ ವಿರುದ್ಧವೇ ಆರೋಪ ಪಟ್ಟಿ ದಾಖಲಿಸಬೇಕು: ಮಮತಾ

ಪುರುಲಿಯಾ/ಸಿರಿಗುಡಿ/ಕೋಲ್ಕತ್ತ (ಪಿಟಿಐ): 'ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಾಡಿದ ಕರ್ಮಗಳಿಗಾಗಿ ಅವರ ವಿರುದ್ಧವೇ ಆರೋಪ ಪಟ್ಟಿ ದಾಖಲಿಸಬೇಕು' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದರು.

ಟಿಎಂಸಿ ಸರ್ಕಾರದ ವಿರುದ್ಧ ಅಮಿತ್ ಶಾ ಅವರು ಶನಿವಾರ ಮಾಧ್ಯಮಗೋಷ್ಠಿ ನಡೆಸಿ ಆರೋಪ ಪಟ್ಟಿ ಇದ್ದ ಪುಸ್ತಕವೊಂದನ್ನು ಬಿಡುಗಡೆ ಮಾಡಿದ್ದರು. ಈ ವೇಳೆ ಮಮತಾ ಅವರ ವಿರುದ್ಧ ಹಲವು ಆರೋಪಗಳನ್ನೂ ಮಾಡಿದ್ದರು. ಮಮತಾ ಅವರು ಪುರುಲಿಯಾದಲ್ಲಿ ನಡೆದ ಸಾರ್ವಜನಿಕ ರ‍್ಯಾಲಿಯೊಂದರಲ್ಲಿ ಭಾನುವಾರ ಈ ಎಲ್ಲದಕ್ಕೂ ತಿರುಗೇಟು ನೀಡಿದರು.

'ಒಂದು ವೇಳೆ ಬಿಜೆಪಿ ಅಧಿಕಾರಕ್ಕೆ ಬಂದರೆ, ಜನರು ಮೀನು, ಮಾಂಸ, ಮೊಟ್ಟೆಗಳನ್ನು ತಿನ್ನಲು ಅವಕಾಶ ನೀಡುವುದಿಲ್ಲ. ಅವರು 'ಲಕ್ಷ್ಮೀರ್ ಭಂಡಾರ್' (ಮಹಿಳೆಯರಿಗೆ ಮಾಸಿಕವಾಗಿ ಹಣ ನೀಡುವ ಯೋಜನೆ) ಯೋಜನೆಯನ್ನೂ ನಿಲ್ಲಿಸುತ್ತಾರೆ. ಜೊತೆಗೆ, ಚುನಾವಣೆಗೂ ಮುನ್ನ ಎಸ್‌ಐಆರ್ ನಡೆಸಲಾಗಿದೆ. ಈ ಮೂಲಕ ಸುಮಾರು 1.2 ಕೋಟಿ ಮತದಾರರ ಹೆಸರನ್ನು ಅಳಿಸಿ ಹಾಕಲಾಗಿದೆ' ಎಂದು ಆರೋಪಿಸಿದರು.

3ನೇ ಪೂರಕ ಪಟ್ಟಿ ಪ್ರಕಟ: ಎಸ್‌ಐಆರ್ ಪ್ರಕ್ರಿಯೆ ಮುಗಿದ ಬಳಿಕ, ಚುನಾವಣಾ ಆಯೋಗವು ಶನಿವಾರ ಮತದಾರರ ಮೂರನೇ ಪೂರಕ ಪಟ್ಟಿಯನ್ನು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟ ಮಾಡಿದೆ. ಆದರೆ, ಈ ಬಾರಿಯೂ ಪಟ್ಟಿಯಿಂದ ಎಷ್ಟು ಹೆಸರನ್ನು ಕೈಬಿಡಲಾಗಿದೆ ಅಥವಾ ಸೇರಿಸಲಾಗಿದೆ ಎಂಬ ಬಗ್ಗೆ ಮಾಹಿತಿ ನೀಡಿಲ್ಲ.

'ನನ್ನನ್ನು ಕೊಲ್ಲುವ ಯೋಚನೆ ಇದೆಯೇ?'

ನಾನು ಬ್ಯಾಂಡೇಜ್ ಸುತ್ತಿಕೊಂಡು ಓಡಾಡುತ್ತೇನೆ ಎಂದು ಅವರು (ಬಿಜೆಪಿ) ಹೇಳುತ್ತಾರೆ. ಸಾವಿನ ಅಂಚಿನಿಂದ ಬದುಕಿ ಬಂದಿದ್ದೇನೆ. ಬೇಕಿದ್ದರೆ ವೈದ್ಯರ ತಪಾಸಣಾ ವರದಿಗಳನ್ನು ನೋಡಲಿ. 2021ರ ಚುನಾವಣೆ ವೇಳೆ ನೀವೇ (ಬಿಜೆಪಿ) ಬೇಕು ಅಂತಲೇ ನನ್ನ ಕಾಲಿಗೆ ಪೆಟ್ಟು ಮಾಡಿದಿರೇ? ನಾನು ಗಾಲಿ ಕುರ್ಚಿಯಲ್ಲೇ ಇಡೀ ಪ್ರಚಾರ ನಡೆಸಿದ್ದೇನೆ. ನನ್ನನ್ನು ಕೊಲ್ಲಲು ಯೋಜನೆ ರೂಪಿಸಿದ್ದೀರಾ?

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಕೇರಂ: ಸಿಎಪಿಎಫ್‌ನ 3 ಸಿಬ್ಬಂದಿ ಅಮಾನತು

ಸಿರಿಗುಡಿಯಲ್ಲಿನ ಟಿಎಂಸಿ ಕಚೇರಿಯಲ್ಲಿ ಮೂವರು ಟಿಎಂಸಿ ಯುವಕರೊಂದಿಗೆ ಕೇರಂ ಆಟ ಆಡಿದ ಮೂವರು ಸಿಎಪಿಎಫ್ ಸಿಬ್ಬಂದಿಯನ್ನು ಚುನಾವಣಾ ಆಯೋಗ ಅಮಾನತು ಮಾಡಿದೆ. ಆಟ ಆಡುತ್ತಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ಈ ಬಗ್ಗೆ ಇಲಾಖಾ ವಿಚಾರಣೆಯನ್ನೂ ನಡೆಸಲಾಗಿತ್ತು.

ಚುನಾವಣಾ ಅಧಿಕಾರಿಗಳ ವರ್ಗಾವಣೆ

ಚುನಾವಣೆಗೂ ಹೊಸ್ತಿನಲ್ಲಿ 83 ಬ್ಲಾಕ್ ಅಧಕಾರಿಗಳನ್ನು ಹಾಗೂ ಸಹಾಯಕ ಚುನಾವಣಾ ಅಧಿಕಾರಿಗಳನ್ನು ಚುನಾವಣಾ ಆಯೋಗವು ಭಾನುವಾರ ವರ್ಗಾವಣೆ ಮಾಡಿದೆ. 'ವರ್ಗಾವಣೆ ಪಟ್ಟಿಯ ಕುರಿತ ನಿರ್ದೇಶನವು ದೆಹಲಿಯ ಆಯೋಗದ ಕಚೇರಿಯಿಂದಲೇ ಬಂದಿದೆ' ಎಂದು ಹಿರಿಯ ಅಧಿಕಾರಿಗಳು ತಿಳಿಸಿದರು.

'ಚುನಾವಣಾ ಪ್ರಕ್ರಿಯೆಯಲ್ಲಿ ತಟಸ್ಥ ನಿಲುವು ಇರುವವರು ಇರಬೇಕು ಎನ್ನುವುದಕ್ಕಾಗಿ ವರ್ಗಾವಣೆ ಮಾಡಲಾಗಿದೆ. ಇದು ಆಯೋಗದ ಶಿಷ್ಟಾಚಾರದ ಭಾಗ. ಚುನಾವಣೆಯಲ್ಲಿ ಸ್ಥಳೀಯರ ಪ್ರಭಾವ ಇರಬಾರದು ಎನ್ನುವುದು ಮುಖ್ಯ ಉದ್ದೇಶ' ಎಂದರು.

ಮೊದಲ ಪಟ್ಟಿ ಬಿಡುಗಡೆ ಮಾಡಿದ ಕಾಂಗ್ರೆಸ್

ಪಶ್ಚಿಮ ಬಂಗಾಳದ 284 ಕ್ಷೇತ್ರಗಳಿಗೆ ಕಾಂಗ್ರೆಸ್ ತನ್ನ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಭಾನುವಾರ ಬಿಡುಗಡೆ ಮಾಡಿದೆ. ಪಕ್ಷದ ಸಿಇಸಿ ಸಭೆಯ ಬಳಿಕ ಪಟ್ಟಿ ಬಿಡುಗಡೆ ಮಾಡಲಾಗಿದೆ.

ನಕ್ಸಲ್ ಸಮಸ್ಯೆ ಲೋಕಸಭೆಯಲ್ಲಿ ಚರ್ಚೆ ಇಂದು

ನವದೆಹಲಿ (ಪಿಟಿಐ): ಎಡಪಂಥೀಯ ಉಗ್ರವಾದದಿಂದ ದೇಶವನ್ನು ಸಂಪೂರ್ಣವಾಗಿ ಮುಕ್ತಗೊಳಿಸುವ ಪ್ರಯತ್ನಗಳ ಕುರಿತು ಲೋಕಸಭೆಯಲ್ಲಿ ಸೋಮವಾರ ಚರ್ಚೆ ನಡೆಯಲಿದೆ. ಲೋಕಸಭೆ ಸಚಿವಾಲಯವು ಈ ವಿಷಯವನ್ನು ಚರ್ಚೆಗೆ ಪಟ್ಟಿ ಮಾಡಿದೆ.

ಭಾರತವನ್ನು ನಕ್ಸಲ್ ಮುಕ್ತ ರಾಷ್ಟ್ರವನ್ನಾಗಿ ಮಾಡಲು ಸರ್ಕಾರವು ನೀಡಿದ್ದ ಗಡುವು ಮಾರ್ಚ್ 31ರಂದು ಮುಗಿಯಲಿದೆ. ಮಾರ್ಚ್ 31ರ ವೇಳೆಗೆ ನಕ್ಸಲ್ ಮುಕ್ತಗೊಳಿಸುವುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದರು.

ಟಿಡಿಪಿ ಸಂಸದ ಬೈರೆಡ್ಡಿ ಶಬರಿ ಹಾಗೂ ಶಿವಸೇನಾ ಸಂಸದ ಶ್ರೀಕಾಂತ ಶಿಂದೆ ಅವರು ಚರ್ಚೆಯನ್ನು ಪ್ರಾರಂಭಿಸಲಿದ್ದಾರೆ.

ಎಡಪಂಥೀಯ ಉಗ್ರವಾದವಿರುವ ದೇಶದ ಜಿಲ್ಲೆಗಳ ಸಂಖ್ಯೆಯು ಎಂಟರಿಂದ ಏಳಕ್ಕೆ ಇಳಿಕೆಯಾಗಿದೆ.

2004ರಿಂದ ಈ ವರ್ಷ ಮಾರ್ಚ್ 26ರವರೆಗೆ ದೇಶದಲ್ಲಿ ಒಟ್ಟು 16,496 ನಕ್ಸಲರು ಶರಣಾಗಿದ್ದಾರೆ. ಕಳೆದ ವರ್ಷ ಗರಿಷ್ಠ 2,337 ನಕ್ಸಲರು ಶರಣಾಗಿದ್ದಾರೆ.

ರಾಜಕೀಯಕರಣದ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಎಚ್ಚರಿಕೆ

ಪಶ್ಚಿಮ ಏಷ್ಯಾ ಯುದ್ಧ: ಸವಾಲಿನ ಸಮಯ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ 'ಭೀಕರ ಯುದ್ಧ'ದಿಂದಾಗಿ ಉದ್ಭವಿಸಿರುವ ಸವಾಲನ್ನು ನಿಭಾಯಿಸಲು ನಾಗರಿಕರು ಕೈಜೋಡಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಮನವಿ ಮಾಡಿದರು.

ಪ್ರಸ್ತುತ ಬಿಕ್ಕಟ್ಟನ್ನು ರಾಜಕೀಯಗೊಳಿಸುತ್ತಿರುವವರಿಗೆ 'ಮನದ ಮಾತು' ಬಾನುಲಿ ಕಾರ್ಯಕ್ರಮದಲ್ಲಿ ಎಚ್ಚರಿಕೆಯನ್ನು ನೀಡಿದ ಪ್ರಧಾನಿ, ದೇಶದ 140 ಕೋಟಿ ಜನರ ಹಿತಾಸಕ್ತಿಗೆ ಸಂಬಂಧಿಸಿದ ವಿಷಯ ಇದಾಗಿರುವುದರಿಂದ, ಸ್ವಾರ್ಥ ರಾಜಕಾರಣಕ್ಕೆ ಅವಕಾಶವಿಲ್ಲ ಎಂದರು.

'ವದಂತಿ ಹರಡುತ್ತಿರುವವರು ದೇಶಕ್ಕೆ ದೊಡ್ಡ ಹಾನಿ ಉಂಟು ಮಾಡುತ್ತಿದ್ದಾರೆ. ಜನರು ಜಾಗರೂಕರಾಗಿರಬೇಕು. ಸರ್ಕಾರದ ಮಾಹಿತಿಯನ್ನು ಮಾತ್ರ ನಂಬಬೇಕು. ಒಗ್ಗಟ್ಟಿನ ಬಲದಿಂದ ಈ ಹಿಂದೆ ಎದುರಾದ ಬಿಕ್ಕಟ್ಟುಗಳನ್ನು ಜಯಿಸಿದಂತೆಯೇ ಇದನ್ನೂ ಎದುರಿಸೋಣ' ಎಂದರು.

'ಪಶ್ಚಿಮ ಏಷ್ಯಾವು ಭಾರತದ ಇಂಧನ ಅಗತ್ಯಗಳ ಪ್ರಮುಖ ಕೇಂದ್ರ. ಇದೀಗ ಇಂಧನಕ್ಕೆ ಸಂಬಂಧಿಸಿದಂತೆ ಜಗತ್ತಿನಾದ್ಯಂತ ಬಿಕ್ಕಟ್ಟು ಉದ್ಭವಿಸಿದೆ. ನಮ್ಮ ಜಾಗತಿಕ ಬಾಂಧವ್ಯ, ಕಳೆದ ದಶಕದ ಅವಧಿಯಲ್ಲಿ ನಾವೇ ನಿರ್ಮಿಸಿಕೊಂಡ ಸ್ವಸಾಮರ್ಥ್ಯವು ಈಗಿನ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಲು ಭಾರತಕ್ಕೆ ಅನುವು ಮಾಡಿಕೊಟ್ಟಿದೆ' ಎಂದಿದ್ದಾರೆ.

50 ಲಕ್ಷ ಘಟಕ: 'ಜಲ ಸಂಚಯ ಅಭಿಯಾನ'ದ ಅಡಿಯಲ್ಲಿ ದೇಶದಾದ್ಯಂತ ಸುಮಾರು 50 ಲಕ್ಷ ಮಳೆ ನೀರು ಸಂಗ್ರಹ ಘಟಕಗಳನ್ನು ಸ್ಥಾಪಿಸಲಾಗಿದೆ ಎಂದು ಪ್ರಧಾನಿ ಹೇಳಿದರು.

ಮನದ ಮಾತು

ಬೋಡಕ್ಯಾನಟ್ಟಿ ರೈತನ ಸಾಧನೆ ಪ್ರಸ್ತಾಪ

ಶಿವಲಿಂಗಪ್ಪ

ಬೆಳಗಾವಿ: ಮೀನು ಸಾಕಾಣಿಕೆಯಲ್ಲಿ ಸಾಧನೆ ಮಾಡಿರುವ ತಾಲ್ಲೂಕಿನ ಬೋಡಕ್ಯಾನಟ್ಟಿಯ ರೈತ ಶಿವಲಿಂಗಪ್ಪ ಸಾತಪ್ಪ ಹುದ್ದಾರ ಅವರ ಬಗ್ಗೆ ಪ್ರಧಾನಿ ಮೋದಿ ಅವರು 'ಮನದ ಮಾತು'ವಿನಲ್ಲಿ ಪ್ರಸ್ತಾಪಿಸಿದ್ದಾರೆ.

ಒಂದು ಎಕರೆಯಲ್ಲಿ ವೈಜ್ಞಾನಿಕ ಪದ್ಧತಿಯಲ್ಲಿ ನಾಲ್ಕು ಕೃಷಿಹೊಂಡ ನಿರ್ಮಿಸಿದ್ದಾರೆ. ಅದರಲ್ಲಿ ಮುರೆಲ್ (ಕುಚ್ಚು) ತಳಿಯ ಮೀನಿನ ಮರಿ ಸಾಕಿ, ಲಕ್ಷಾಂತರ ರೂಪಾಯಿ ಆದಾಯ ಗಳಿಸುತ್ತಿದ್ದಾರೆ. ಈಗ ಶಿವಲಿಂಗಪ್ಪ ಪುತ್ರ ರಾಜು ಹುದ್ದಾರ ಅವರು, ಮೀನು ಸಾಕಾಣಿಕೆ ಕಾಯಕ ಮುನ್ನಡೆಸುತ್ತಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರು, 'ಮನದ ಮಾತು'ವಿನಲ್ಲಿ ನಮ್ಮ ಯಶಸ್ಸಿನ ಬಗ್ಗೆ ಮಾತನಾಡಿರುವುದು ಖುಷಿ ತಂದಿದೆ. ದೆಹಲಿಯವರೆಗೂ ನಮ್ಮ ಸಾಧನೆ ತಲುಪಿರುವುದು ಸಂತಸ ಇಮ್ಮಡಿಗೊಳಿಸಿದೆ' ಎಂದು ರಾಜು ಹುದ್ದಾರ ಹೇಳಿದರು.

'ನನಗೆ ಸೇನೆ ಸೇರುವ ಆಸೆ ಇತ್ತು. ಆದರೆ, ಅದು ಕೈಗೂಡಲಿಲ್ಲ. ಹಾಗಾಗಿ ಕೃಷಿ ಆರಂಭಿಸಿದೆ. ಸಾಂಪ್ರದಾಯಿಕ ಕೃಷಿಯಿಂದ ಹೊರಬಂದು, ಬಯೋಪ್ಲಾಕ್ ತಂತ್ರಜ್ಞಾನ ಬಳಸಿ ಮೂರು ವರ್ಷಗಳಿಂದ ಮೀನು ಸಾಕಾಣಿಕೆ ಮಾಡುತ್ತಿದ್ದೇವೆ. ಆಂಧ್ರದ ವಿಜಯವಾಡದಿಂದ ಮೀನಿನ ಮರಿ ತಂದು ಸಾಕುತ್ತಿದ್ದೇವೆ. ಇಲ್ಲಿಂದ ಹೈದರಾಬಾದ್ ಮಾರುಕಟ್ಟೆಗೆ ಕಳುಹಿಸುತ್ತಿದ್ದೇವೆ. ಉತ್ತಮ ಆದಾಯ ಬರುತ್ತಿದೆ' ಎಂದು ಹರ್ಷ ವ್ಯಕ್ತಪಡಿಸಿದರು.

'ಪ್ರಯೋಗ' ಪ್ರಯತ್ನಕ್ಕೆ ಶ್ಲಾಘನೆ

ಶಾಲಾ ಹಂತದಲ್ಲಿ ವಿಜ್ಞಾನ ಶಿಕ್ಷಣವನ್ನು ಜನಪ್ರಿಯಗೊಳಿಸುವಲ್ಲಿ ಬೆಂಗಳೂರಿನ ಸ್ವಯಂಸೇವಾ ಸಂಸ್ಥೆ (ಎನ್‌ಜಿಒ) 'ಪ್ರಯೋಗ' ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ರಿಸರ್ಚ್‌ನ ಪ್ರಯತ್ನಗಳನ್ನು ಮೋದಿ ಶ್ಲಾಘಿಸಿದ್ದಾರೆ.

ಸಂಶೋಧನಾ ಯೋಜನೆಗಳ ಮೇಲೆ ವಿಶೇಷ ಗಮನ ಹರಿಸಿರುವ 'ಪ್ರಯೋಗ', ಶಾಲಾ ಹಂತದಲ್ಲೇ ವಿಜ್ಞಾನ ಶಿಕ್ಷಣವನ್ನು ಜನಪ್ರಿಯಗೊಳಿಸುವಲ್ಲಿ ತೊಡಗಿಸಿಕೊಂಡಿದೆ. ಇದಕ್ಕಾಗಿಯೇ ಅನ್ವೇಷಣ್ ಎಂಬ ಯೋಜನೆಯನ್ನು ಆರಂಭಿಸಿದೆ ಎಂದಿದ್ದಾರೆ.

ಬೆಂಗಳೂರು ದಕ್ಷಿಣದ ಕನಕಪುರ ರಸ್ತೆಯ ರಾವುಗೋಡ್ಲುವಿನಲ್ಲಿರುವ ಪ್ರಯೋಗ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ರಿಸರ್ಚ್ ಲಾಭರಹಿತ ಸಂಸ್ಥೆ. ಭೌತವಿಜ್ಞಾನ ಶಿಕ್ಷಣತಜ್ಞ ಎಚ್.ಎಸ್. ನಾಗರಾಜ ಸ್ಥಾಪಿಸಿದ್ದಾರೆ.

ನಿತಿನ್ ರಾಜೀನಾಮೆ: ಕಚೇರಿಯಲ್ಲೇ ಕಾದಿದ್ದ ಸ್ಪೀಕರ್

ನಿತಿನ್ ನವೀನ್

ಪಟ್ನಾ (ಪಿಟಿಐ): ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ರಾಜೀನಾಮೆ ಸ್ವೀಕರಿಸಲು ಬಿಹಾರದ ಸ್ಪೀಕರ್ ಪ್ರೇಮ್ ಕುಮಾರ್ ಅವರು ಭಾನುವಾರ ಇಡೀ ದಿನ ತಮ್ಮ ಕಚೇರಿಯಲ್ಲಿ ಕಾದಿದ್ದರು. ಆದರೆ ನಿತಿನ್ ನವೀನ್ ಅವರು ಬರಲೇ ಇಲ್ಲ.

ಕಾರ್ಯಕ್ರಮ ನಿಮಿತ್ತ ದೆಹಲಿಯಲ್ಲಿದ್ದ ಪ್ರೇಮ್ ಕುಮಾರ್ ಅವರಿಗೆ ಮಾರ್ಚ್ 29ರಂದು ನಿತಿನ್ ನವೀನ್ ಅವರು ರಾಜೀನಾಮೆ ಸಲ್ಲಿಸಲಿದ್ದಾರೆ ಎಂಬ ಸಂದೇಶ ಹೋಗಿತ್ತು. 'ತುರ್ತಾಗಿ ವಾಪಸ್ ಬನ್ನಿ' ಎಂದು ಬಿಹಾರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸಂಜಯ್ ಸರೋಗಿ ದೂರವಾಣಿಯಲ್ಲಿ ತಿಳಿಸಿದ್ದರು. ಹೀಗಾಗಿ ಶನಿವಾರ ರಾತ್ರಿಯೇ ಅವರು ವಿಮಾನದ ಮೂಲಕ ಪಟ್ನಾಕ್ಕೆ ವಾಪಸಾಗಿದ್ದರು.

ಬಂಕಿಪುರ ಕ್ಷೇತ್ರದ ಶಾಸಕರಾಗಿದ್ದ ನಿತಿನ್ ನವೀನ್ ಹಾಗೂ ಮುಖ್ಯಮಂತ್ರಿ ನಿತೀಶ್ ಕುಮಾರ್ ಎರಡು ವಾರದ ಹಿಂದೆ ರಾಜ್ಯಸಭೆಗೆ ಆಯ್ಕೆಯಾಗಿದ್ದರು.

'ರಾಜ್ಯಸಭೆಗೆ ಆಯ್ಕೆಯಾದ 14 ದಿನಗಳಲ್ಲಿ ಶಾಸಕ ಸ್ಥಾನ ತೆರವು ಮಾಡಬೇಕು. ಸೋಮವಾರದವರೆಗೂ ಸಮಯವಿದೆ' ಎಂದು ಸ್ಪೀಕರ್ ಪ್ರೇಮ್ ಕುಮಾರ್ ತಿಳಿಸಿದರು. 'ವರ್ಚುವಲ್' ಆಗಿ ರಾಜೀನಾಮೆ ಸಲ್ಲಿಸಬಹುದೇ ಎಂಬ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿ, 'ನಿಯಮಗಳ ಪ್ರಕಾರ ಶಾಸಕರು ವೈಯಕ್ತಿಕವಾಗಿ ಹಾಜರಿರಬೇಕು' ಎಂದರು.

ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರೂ ಸೋಮವಾರವೇ ಪರಿಷತ್ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವರೆ ಎಂಬ ಪ್ರಶ್ನೆಗೆ, 'ಅವರು (ನಿತೀಶ್) ಪರಿಷತ್ ಸದಸ್ಯ, ನನ್ನ ವ್ಯಾಪ್ತಿಗೆ ಬರುವುದಿಲ್ಲ' ಎಂದು ಪ್ರೇಮ್‌ಕುಮಾರ್ ತಿಳಿಸಿದರು.

ಮುಖ್ಯಾಂಶಗಳು

- ಅಸ್ಸಾಂನಲ್ಲಿ ಪ್ರಚಾರಕ್ಕೆ ತೆರಳಿರುವ ನಿತಿನ್ ಸೋಮವಾರ ವಾಪಸ್
- ರಾಜೀನಾಮೆ: ಖುದ್ದು ಹಾಜರಿ ಕಡ್ಡಾಯ

ಮುಂಬೈ ಇಂಡಿಯನ್ಸ್ ಶುಭಾರಂಭ

13 ಆವೃತ್ತಿಗಳ ನಂತರ ಮೊದಲ ಪಂದ್ಯದಲ್ಲಿ ಮುಂಬೈ ಗೆಲುವು

● ರೋಹಿತ್ ಶರ್ಮಾ, ರಿಯಾನ್ ರಿಕೆಲ್ಟನ್ ಬೀಸಾಟ

ಮುಂಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಮುಂಬೈ ಇಂಡಿಯನ್ಸ್ ತಂಡವು ಕಳೆದ 13 ಆವೃತ್ತಿಗಳಲ್ಲಿ ಮೊದಲ ಪಂದ್ಯವನ್ನು ಸೋಲುತ್ತಿತ್ತು. ಆದರೆ ಈ ಬಾರಿ ದಾಖಲೆಯ ಜಯಸಾಧಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಭಾನುವಾರ ಟಾಸ್ ಗೆದ್ದ ಮುಂಬೈ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕೋಲ್ಕತ್ತ ನೈಟ್ ರೈಡರ್ಸ್ ತಂಡವು 221 ರನ್‌ಗಳ ಜಯದ ಗುರಿಯೊಡ್ಡಿತು. 'ಮುಂಬೈಕರ್' ರೋಹಿತ್ ಶರ್ಮಾ (78; 38ಎ, 4x6, 6x6) ಮತ್ತು ರಿಯಾನ್ ರಿಕೆಲ್ಟನ್ (81; 43ಎ, 4x4, 6x8) ಮೊದಲ ವಿಕೆಟ್ ಜೊತೆಯಾಟದಲ್ಲಿ 148 ರನ್ ಸೇರಿಸಿದರು. ಇದರಿಂದಾಗಿ ಮುಂಬೈ ತಂಡವು 19.1 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 224 ರನ್ ಗಳಿಸಿ 6 ವಿಕೆಟ್‌ಗಳಿಂದ ಗೆದ್ದಿತು. ಕೋಲ್ಕತ್ತದ ಬೌಲಿಂಗ್ ವಿಭಾಗದ ದೌರ್ಬಲ್ಯ ಅನಾವರಣಗೊಂಡಿತು. ಸ್ಪಿನ್ನರ್ ವರುಣ್ ಚಕ್ರವರ್ತಿ ಅವರಿಗೆ ವಿಕೆಟ್ ಒಲಿಯಲಿಲ್ಲ. ಸುನಿಲ್ ನಾರಾಯಣ್, ವೈಭವ್ ಅರೋರಾ ಮತ್ತು ಕಾರ್ತಿಕ್ ತ್ಯಾಗಿ ತಲಾ ಒಂದು ವಿಕೆಟ್ ಪಡೆದರು.

ಆದರೆ 12ನೇ ಓವರ್‌ನವರೆಗೂ ರೋಹಿತ್ ಮತ್ತು ರಿಯಾನ್ ಜೊತೆಯಾಟಕ್ಕೆ ಕಡಿವಾಣ ಹಾಕುವಲ್ಲಿ ಬೌಲರ್‌ಗಳೂ ವಿಫಲರಾದರು. ಅಂತರ ರಾಷ್ಟ್ರೀಯ ಟಿ20 ಮತ್ತು ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾಗಿರುವ ರೋಹಿತ್ ಅವರು ಚುಟುಕು ಮಾದರಿಯಲ್ಲಿ ತಮ್ಮ ಲಯ ಕಳೆದುಕೊಂಡಿಲ್ಲ. 205.26 ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.



ರಿಯಾನ್ ರಿಕೆಲ್ಟನ್

ಶಾರ್ದೂಲ್ ಠಾಕೂರ್

ಅಜಿಂಕ್ಯ, ರಘುವಂಶಿ ಬೀಸಾಟ: ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತ ತಂಡಕ್ಕೆ ನಾಯಕ ಅಜಿಂಕ್ಯ (67; 40ಎ, 4x4, 6x5) ಮತ್ತು ಫಿನ್ ಅಲೆನ್ (37; 17ಎ, 4x6, 6x2) ಅವರು ಉತ್ತಮ ಆರಂಭ ನೀಡಿದರು. 5.2 ಓವರ್‌ಗಳಲ್ಲಿ 69 ರನ್ ಸೇರಿಸಿದರು. ಈ ಅಡಿಪಾಯದ ಮೇಲೆ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 220 ರನ್ ಗಳಿಸಿತು. ನಾಲ್ಕನೇ ಕ್ರಮಾಂಕದ ಬ್ಯಾಟರ್ ರಘುವಂಶಿ (51; 29ಎ, 4x6, 6x2) ಅವರು ಅರ್ಧಶತಕದ ಕಾಣಿಕೆ ನೀಡಿದರು. ಕೊನೆಯ ಹಂತದ ಓವರ್‌ಗಳಲ್ಲಿ ರಿಂಕು ಸಿಂಗ್ (ಅಜೇಯ 33; 21ಎ, 4x4) ಕೂಡ ತಂಡದ ಮೊತ್ತವು ಬೃಹತ್ ಆಗಿ ಬೆಳೆಯಲು ಕಾರಣರಾದರು.

ಮುಂಬೈ ಮಧ್ಯಮವೇಗಿ ಶಾರ್ದೂಲ್ ಠಾಕೂರ್ (39ಕ್ಕೆ3) ಅವರು ಅಜಿಂಕ್ಯ, ಫಿನ್ ಮತ್ತು ಕ್ಯಾಮರಾನ್ ಗ್ರೀನ್ (18; 10ಎ) ಅವರ ಇನಿಂಗ್ಸ್‌ಗಳಿಗೆ ತಡೆಯೊಡ್ಡಿದರು. ಆದರೆ ಉಳಿದ ಬೌಲರ್‌ಗಳು ಇದರ ಪ್ರಯೋಜನ ಪಡೆಯುವಲ್ಲಿ ಯಶಸ್ವಿ ಆಗಲಿಲ್ಲ. ನಾಯಕ ಹಾರ್ದಿಕ್ ಪಾಂಡ್ಯ (39ಕ್ಕೆ1) ವಿಕೆಟ್ ಪಡೆದರು. ಉಳಿದಂತೆ ಟ್ರೆಂಟ್ ಬೌಲ್ಟ್, ಜಸ್‌ಪ್ರೀತ್ ಬೂಮ್ರಾ, ಅಲ್ಲಾಹ ಘಜನಫರ್ ಹಾಗೂ ಮಯಂಕ್ ಮಾರ್ಕಂಡೆ ಅವರು ವಿಕೆಟ್ ಗಳಿಸಲಿಲ್ಲ.

ಆದರೆ ಟ್ರೆಂಟ್ ಮತ್ತು ಬೂಮ್ರಾ ಅವರು ಕ್ರಮವಾಗಿ 18 ಮತ್ತು 20ನೇ ಓವರ್‌ಗಳಲ್ಲಿ ರನ್‌ಗಳಿಗೆ ಕಡಿವಾಣ ಹಾಕಿದ್ದರಿಂದ ಕೋಲ್ಕತ್ತ ತಂಡವು 250 ರನ್ ಮುಟ್ಟಲಿಲ್ಲ. ರಹಾನೆ ಅವರು ತಮ್ಮ ತವರು ಕ್ರೀಡಾಂಗಣದಲ್ಲಿ ತಂಡಕ್ಕೆ ಉತ್ತಮ ಆರಂಭ ನೀಡಿದರು. ಅಜಿಂಕ್ಯ ಅವರು ಟ್ರೆಂಟ್ ಬೌಲ್ಟ್ ಹಾಕಿದ ಮೊದಲ ಓವರ್‌ನಲ್ಲಿ ಫ್ಲಿಕ್ ಮಾಡುವ ಮೂಲಕ ಸಿಕ್ಸರ್‌ಗೆತ್ತಿ ತಮ್ಮ ಖಾತೆ ತೆರೆದರು.

ರೋಹಿತ್ ಶರ್ಮಾ ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 220

ರಹಾನೆ ಸಿ ಹಾರ್ದಿಕ್ ಬಿ ಶಾರ್ದೂಲ್ 67 (40ಎ, 4x3, 6x5)
ಅಲೆನ್ ಸಿ ತಿಲಕ್ ಬಿ ಶಾರ್ದೂಲ್ 37 (17ಎ, 4x6, 6x2)
ಗ್ರೀನ್ ಸಿ ರುದರ್‌ಫೋರ್ಡ್ ಬಿ ಶಾರ್ದೂಲ್ 18 (10ಎ, 4x1, 6x1)
ರಘುವಂಶಿ ಸಿ ತಿಲಕ್ ಬಿ ಹಾರ್ದಿಕ್ 51 (29ಎ, 4x6, 6x2)
ರಿಂಕು ಔಟಾಗದೇ 33 (21ಎ, 4x4)
ರಮಣ್‌ದೀಪ್ ಔಟಾಗದೇ 4 (4ಎ)
ಇತರೆ: 10 (ಲೆಗ್‌ಬೈ 2, ನೋಬಾಲ್ 1, ವೈಡ್ 7)
ವಿಕೆಟ್ ಪತನ: 1–69 (ಫಿನ್ ಅಲೆನ್, 5.2), 2–109 (ಕ್ಯಾಮರೂನ್ ಗ್ರೀನ್, 8.5), 3–145 (ಅಜಿಂಕ್ಯ ರಹಾನೆ, 13.3), 4–205 (ಅಂಗಕ್ರಿಷ್ ರಘುವಂಶಿ, 18.3).
ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–38–0; ಹಾರ್ದಿಕ್ ಪಾಂಡ್ಯ 3-0-39-1; ಫಜನ್‌ಫರ್ 4-0-51-0; ಜಸ್‌ಪ್ರೀತ್ ಬೂಮ್ರಾ 4–0–35–0; ಶಾರ್ದೂಲ್ ಠಾಕೂರ್ 4–0–39–3; ಮಯಂಕ್ ಮಾರ್ಕಂಡೆ 1–0–16–0.

ಮುಂಬೈ ಇಂಡಿಯನ್ಸ್: 19.1 ಓವರ್‌ಗಳಲ್ಲಿ 4 ವಿಕೆಟ್‌ಗೆ 224

ರಿಕೆಲ್ಟನ್ ರನೌಟ್/ಅನುಕೂಲ್ 81 (43ಎ, 4x4, 6x8)
ರೋಹಿತ್ ಸಿ ಅನುಕೂಲ್ ಬಿ ವೈಭವ್ 78 (38ಎ, 4x6, 6x6)
ಸೂರ್ಯಕುಮಾರ್ ಸಿ ರಿಂಕು ಬಿ ತ್ಯಾಗಿ 16 (8ಎ, 4x3)
ತಿಲಕ್ ಸಿ ಮನೀಷ್ (ಸಬ್) ಬಿ ಸುನಿಲ್ 20 (14ಎ, 4x4)
ಹಾರ್ದಿಕ್ ಔಟಾಗದೇ 18 (11ಎ, 4x3)
ನಮನ್ ಔಟಾಗದೇ 5 (2ಎ, 4x1)
ಇತರೆ: 6 (ಲೆಗ್‌ಬೈ 2, ನೋಬಾಲ್ 1, ವೈಡ್ 3)
ವಿಕೆಟ್ ಪತನ: 1–148 (ರೋಹಿತ್ ಶರ್ಮಾ, 11.5), 2–179 (ಸೂರ್ಯಕುಮಾರ್ ಯಾದವ್, 14.2), 3–184 (ರಿಯಾನ್ ರಿಕೆಲ್ಟನ್, 15.2), 4–215 (ತಿಲಕ್ ವರ್ಮಾ, 18.4).
ಬೌಲಿಂಗ್: ವೈಭವ್ ಅರೋರಾ 4–0–52–1; ಬ್ಲೆಸಿಂಗ್ ಮುಝರಬಾನಿ 3–0–34–0; ವರುಣ್ ಚಕ್ರವರ್ತಿ 4–0–48–0; ಕಾರ್ತಿಕ್ ತ್ಯಾಗಿ 4–0–43–1; ಸುನಿಲ್ ನಾರಾಯಣ್ 3–0–30–1; ಅನುಕೂಲ್ ರಾಯ್ 1.1–0–15–0.
ಪಂದ್ಯದ ಆಟಗಾರ: ಶಾರ್ದೂಲ್ ಠಾಕೂರ್

ಫಲಿತಾಂಶ: ಮುಂಬೈಗೆ 6 ವಿಕೆಟ್ ಜಯ

ಹಾರ್ದಿಕ್ ಬೌಲಿಂಗ್‌ನಲ್ಲಿ ಲೈನ್ ಮತ್ತು ಲೆಂಗ್ತ್ ನಿರ್ವಹಣೆ ಸರಿಯಿರಲಿಲ್ಲ. ಇದರಿಂದಾಗಿ ನಾಲ್ಕನೇ ಓವರ್‌ನಲ್ಲಿ 26 ರನ್ ಬಿಟ್ಟುಕೊಟ್ಟರು. ಪದಾರ್ಪಣೆ ಮಾಡಿದ ಬೌಲರ್ ಅಲ್ಲಾಹ ಘಜನಫರ್ ಅವರು ಹಾಕಿದ ಮೂರನೇ ಓವರ್‌ನಲ್ಲಿ 2 ಸಿಕ್ಸರ್ ಮತ್ತು 1 ಬೌಂಡರಿಯನ್ನು ಅಲೆನ್ ಸಿಡಿಸಿದರು.

ರಾಜಸ್ಥಾನ ರಾಯಲ್ಸ್ –ಸಿಎಸ್‌ಕೆ ಮುಖಾಮುಖಿ ಇಂದು

ಸಂಜು–ಜಡೇಜ ಪೋಷಾಕು 'ಅದಲು–ಬದಲು'

ಗುವಾಹಟಿ (ಪಿಟಿಐ): ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಮತ್ತು ಆಲ್‌ರೌಂಡರ್ ರವೀಂದ್ರ ಜಡೇಜ ಅವರ ಪೋಷಾಕುಗಳ ಬಣ್ಣಗಳು ಬದಲಾಗಿವೆ.

ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಇದೇ ಮೊದಲ ಸಲ ಸಂಜು ಚೆನ್ನೈ ಸೂಪರ್ ಕಿಂಗ್ಸ್ ತಂಡದ ಹಳದಿ ಹಾಗೂ ಜಡೇಜ ಅವರು ರಾಜಸ್ಥಾನ ರಾಯಲ್ಸ್ ತಂಡದ ಗುಲಾಬಿ ವರ್ಣದ ಪೋಷಾಕುಗಳಲ್ಲಿ ಕಣಕ್ಕಿಳಿಯಲಿದ್ದಾರೆ.

ಸೋಮವಾರ ಬರ್ಸಾಪರದ ಎಸಿಎ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಅವರು ಮುಖಾಮುಖಿಯಾಗುವರು. ಅಲ್ಲದೇ ತಮ್ಮ ನಿಕಟಪೂರ್ವ ಫ್ರ್ಯಾಂಚೈಸಿಗಳ ಎದುರು ಆಡುವರು. ರಾಜಸ್ಥಾನ ತಂಡದ ಪರ ಅತಿ ಹೆಚ್ಚು ರನ್ ಗಳಿಸಿರುವ ಬ್ಯಾಟರ್ ಸಂಜು ಅವರಾಗಿದ್ದಾರೆ. 2022ರಲ್ಲಿ ರಾಯಲ್ಸ್ ತಂಡವು ಫೈನಲ್ ಪ್ರವೇಶಿಸುವಲ್ಲಿ ಸಂಜು ಪಾತ್ರ ಮಹತ್ವದ್ದಾಗಿತ್ತು. ಈಚೆಗೆ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಮಿಂಚಿದ್ದ ಸಂಜು ಚೆನ್ನೈ ತಂಡದಲ್ಲಿ ಆಡಲಿದ್ದಾರೆ. ನಾಯಕ ಋತುರಾಜ್ ಗಾಯಕವಾಡ ಅವರೊಂದಿಗೆ ಸಂಜು ಅವರು ಬ್ಯಾಟಿಂಗ್ ಆರಂಭಿಸುವ ನಿರೀಕ್ಷೆ ಇದೆ. ಧೋನಿ ಅವರು ಮೀನಖಂಡದ ಸ್ನಾಯುಸೆಳೆತದಿಂದ ಅವರು ಟೂರ್ನಿಯ ಆರಂಭಿಕ ಹಂತದ ಕೆಲವು ಪಂದ್ಯಗಳಲ್ಲಿ ಆಡುವುದಿಲ್ಲ. ಆದ್ದರಿಂದ ಅನುಭವಿ ಸಂಜು ಅವರು ಕೀಪಿಂಗ್ ಹೊಣೆ ನಿಭಾಯಿಸಬೇಕಿದೆ. ಧೋನಿ ಅವರು ಗುವಾಹಟಿಗೆ ತಂಡದೊಂದಿಗೆ ಬಂದಿಲ್ಲ.

20 ವರ್ಷದ ಎಡಗೈ ಸ್ಪಿನ್–ಆಲ್‌ರೌಂಡರ್ ಪ್ರಶಾಂತ್ ವೀರ್ ಅವರಿಗೆ ಕಣಕ್ಕಿಳಿಯುವ ಅವಕಾಶ ಒಲಿಯಬಹುದು. ಈಚೆಗೆ ಮಿನಿ ಹರಾಜಿನಲ್ಲಿ ಅವರಿಗೆ ₹14.2 ಕೋಟಿ ನೀಡಿ ಚೆನ್ನೈ ಫ್ರ್ಯಾಂಚೈಸಿಯು ಖರೀದಿಸಿತ್ತು. ಅಬ್ಬರದ ಬ್ಯಾಟರ್ ಕಾರ್ತಿಕ್ ಶರ್ಮಾ, ಶಿವಂ ದುಬೆ ಹಾಗೂ ಯುವಪ್ರತಿಭೆ ಆಯುಷ್ ಮ್ಹಾತ್ರೆ ಮಧ್ಯಮ ಕ್ರಮಾಂಕದ ಶಕ್ತಿಯಾಗಿದ್ದಾರೆ. ಬೌಲಿಂಗ್ ವಿಭಾಗದ ಹೊಣೆಯು ನೂರ್ ಅಹಮದ್, ಅಕೀಲ್ ಹುಸೇನ್, ಮ್ಯಾಟ್ ಹೆನ್ರಿ ಮತ್ತು ಖಲೀಲ್ ಅಹಮದ್ ಅವರ ಮೇಲೆ ಇದೆ. ಡಿವಾಲ್ಡ್ ಬ್ರೆವಿಸ್ ಅವರು ಗಾಯದಿಂದಾಗಿ ಆರಂಭಿಕ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ.

ರಾಜಸ್ಥಾನ ರಾಯಲ್ಸ್ ತಂಡವು ರಿಯಾನ್ ಪರಾಗ್ ಅವರ ನಾಯಕತ್ವದಲ್ಲಿ ಕಣಕ್ಕಿಳಿಯಲಿದೆ. ತಮ್ಮ ತವರೂರಿನ ಅಂಗಳದಲ್ಲಿ ಅವರು ನಾಯಕರಾಗಿ ಕಾಣಿಸಿಕೊಳ್ಳಲಿದ್ದಾರೆ. ಅನುಭವಿ ಎಡಗೈ ಆಲ್‌ರೌಂಡರ್ ಜಡೇಜ ಅವರ ನೆರವು ರಿಯಾನ್‌ಗೆ ಸಿಗಲಿದೆ.

ಯಶಸ್ವಿ ಜೈಸ್ವಾಲ್, 14ರ ಪೋರ ವೈಭವ್ ಸೂರ್ಯವಂಶಿ, ವಿಂಡೀಸ್ ಬ್ಯಾಟರ್ ಶಿಮ್ರಾನ್ ಹೆಟ್ಮೆಯರ್ ಅವರು ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ವೇಗಿ ಜೋಫ್ರಾ ಆರ್ಚರ್ ನೇತೃತ್ವದ ಬೌಲಿಂಗ್ ವಿಭಾಗದಲ್ಲಿ ಸ್ಪಿನ್ ಜೋಡಿ ಜಡೇಜ ಮತ್ತು ರವಿ ಬಿಷ್ಣೋಯಿ ಅವರಿದ್ದಾರೆ.

ರಾಜಸ್ಥಾನ ರಾಯಲ್ಸ್ ಪೋಷಾಕಿನಲ್ಲಿ ರವೀಂದ್ರ ಜಡೇಜ ಚಿತ್ರ: ಆರ್‌ಆರ್ 'ಎಕ್ಸ್' ಖಾತೆ

ಇಂದಿನ ಪಂದ್ಯ

ರಾಜಸ್ಥಾನ ರಾಯಲ್ಸ್ V/s ಚೆನ್ನೈ ಸೂಪರ್ ಕಿಂಗ್ಸ್
ತಾಣ: ಗುವಾಹಟಿ, ಆರಂಭ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಮಳೆ ಸಾಧ್ಯತೆ

ಗುವಾಹಟಿಯಲ್ಲಿ ಭಾನುವಾರ ಮಳೆ ಬಂದಿತು. ಇದರಿಂದಾಗಿ ಪಿಚ್‌ಗಳಿಗೆ ಹೊದಿಕೆ ಹಾಕಿ ರಕ್ಷಿಸಲಾಯಿತು. ಸೋಮವಾರವೂ ಮಳೆ ಬರುವ ಸಾಧ್ಯತೆ ಇದೆ. ಅದೂ ಪಂದ್ಯ ನಡೆಯುವ ಅವಧಿಯಲ್ಲಿ ಮಳೆಯಾಗುವ ಸಾಧ್ಯತೆ ಹೆಚ್ಚಿದೆ.



ಚೆನ್ನೈ ಸೂಪರ್ ಕಿಂಗ್ಸ್ ತಂಡದಲ್ಲಿ ಆಡಲಿರುವ ಸಂಜು ಸ್ಯಾಮ್ಸನ್ ಚಿತ್ರ: ಸಿಎಸ್‌ಕೆ 'ಎಕ್ಸ್' ಖಾತೆ

ಸಂಕ್ಷಿಪ್ತ ಸುದ್ದಿ

ವಿಶ್ವ ವುಶು ಚಾಂಪಿಯನ್‌ಷಿಪ್: ಭಾರತಕ್ಕೆ 2 ಕಂಚು

ಟಿಯಾಂಜಿನ್ (ಚೀನಾ, ಪಿಟಿಐ): ಭಾರತದ ಗೌತಮ್ ಮಂಕಾಸ್ ಹಾಗೂ ಅನು ಅವರು ಇಲ್ಲಿ ನಡೆಯುತ್ತಿರುವ 10ನೇ ವಿಶ್ವ ವುಶು ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಭಾನುವಾರ ಕಂಚಿನ ಪದಕ ಗೆದ್ದುಕೊಂಡರು. ಉಪೇಂದ್ರೊ ತೌಗಮ್, ಪಮಾ ಹೀಬಾ ಸಿಂಗ್, ಯುವರಾಜ್ ಹಾಗೂ ವಿಕ್ಟರ್ ಅವರು ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಸುತ್ತು ಪ್ರವೇಶಿಸಿದರು.

ಗೌತಮ್ ಅವರು ಬಾಲಕರ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ ಪರಾಭವಗೊಂಡರು. ಅನು ಅವರು ನಾಲ್ಕರ ಘಟ್ಟದಲ್ಲಿ ಚೀನಾದ ಝೂಂಗ್ ಲಿನಿಂಗ್ ವಿರುದ್ಧ ಸೋತರು.

ಉಪೇಂದ್ರೊ ಅವರು ಸೆಮಿಫೈನಲ್ ಪಂದ್ಯದಲ್ಲಿ ಈಜಿಪ್ಟ್‌ನ ಅಹ್ಮದ್ ಮೊಹಮ್ಮದ್ ಅವರನ್ನು ಸೋಲಿಸಿದರು. ಪಮಾ ಅವರು ಸೆನೆಗಲ್‌ನ ಅಲಿಮೂಸಿ ಅವರನ್ನು ಮಣಿಸಿ, ಫೈನಲ್ ಪ್ರವೇಶಿಸಿದರು. ಯುವರಾಜ್ ಹಾಗೂ ವಿಕ್ಟರ್ ಅವರು ಸೆಮಿಫೈನಲ್ ಪಂದ್ಯಗಳಲ್ಲಿ ಕ್ರಮವಾಗಿ ಫಿಲಿಪ್ಪೀನ್ಸ್‌ನ ಷಿವೀಲ್ ಬಂಟಾಲಿ ಮತ್ತು ಈಜಿಪ್ಟ್‌ನ ಸಯೀದ್ ಕರೀಂ ಮೊಹಮ್ಮದ್ ವಿರುದ್ಧ ಗೆಲುವು ಸಾಧಿಸಿದರು.

ಬ್ಯಾಸ್ಕೆಟ್‌ಬಾಲ್: ಕೋಲಾರ ತಂಡಕ್ಕೆ ಸುಲಭ ಜಯ

ಬೆಂಗಳೂರು: ಗಗನ್ ಅವರ ಆಟದ ಬಲದಿಂದ ಕೋಲಾರ ಜಿಲ್ಲಾ ತಂಡವು ಡಿ.ಎನ್.ರಾಜಣ್ಣ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಜೂನಿಯರ್ ಬಾಲಕ ಮತ್ತು ಬಾಲಕಿಯರ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ 76–26ರಿಂದ ಬಾಗಲಕೋಟೆ ಜಿಲ್ಲಾ ತಂಡವನ್ನು ನಿರಾಯಾಸವಾಗಿ ಸೋಲಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಅಂಕಣದಲ್ಲಿ ನಡೆದ ಲೀಗ್ ಹಂತದ ಇತರ ಪಂದ್ಯಗಳಲ್ಲಿ ಹಾಸನ ಜಿಲ್ಲಾ ತಂಡವು 42–33ರಿಂದ ಬೆಂಗಳೂರು ದಕ್ಷಿಣ ಜಿಲ್ಲೆ ವಿರುದ್ಧ; ದಾವಣಗೆರೆ ಜಿಲ್ಲಾ ತಂಡವು 49–44ರಿಂದ ಬಳ್ಳಾರಿ ತಂಡದ ವಿರುದ್ಧ; ಮೈಸೂರು ಜಿಲ್ಲೆ ಬಿ ತಂಡವು 75–56ರಿಂದ ಹಾಸನ ತಂಡದ ವಿರುದ್ಧ ಹಾಗೂ ಧಾರವಾಡ ಜಿಲ್ಲೆ ಎ ತಂಡವು 94–08ರಿಂದ ಬಳ್ಳಾರಿ ತಂಡದ ವಿರುದ್ಧ ಗೆಲುವು ಸಾಧಿಸಿದವು.

ಬಾಲಕಿಯರ ವಿಭಾಗದ ಲೀಗ್ ಪಂದ್ಯದಲ್ಲಿ ವಿಜಯಪುರ ಜಿಲ್ಲಾ ತಂಡವು 56–04ರಿಂದ ಬೆಂಗಳೂರು ದಕ್ಷಿಣ ಜಿಲ್ಲಾ ತಂಡದ ವಿರುದ್ಧ ಏಕಪಕ್ಷೀಯ ಗೆಲುವು ದಾಖಲಿಸಿತು.

ಇತರ ಪಂದ್ಯಗಳಲ್ಲಿ ಧಾರವಾಡ ಜಿಲ್ಲೆ ಬಿ ತಂಡವು 36–18ರಿಂದ ಕೋಲಾರ ಜಿಲ್ಲಾ ತಂಡದ ವಿರುದ್ಧ ಹಾಗೂ ಧಾರವಾಡ ಜಿಲ್ಲೆ ಎ ತಂಡವು 35–06ರಿಂದ ಬೆಂಗಳೂರು ದಕ್ಷಿಣ ಜಿಲ್ಲಾ ತಂಡದ ವಿರುದ್ಧ ಸುಲಭ ಜಯ ಸಾಧಿಸಿದವು.

ಚೆಸ್: ಪ್ರಜ್ಞಾನಂದ ಶುಭಾರಂಭ

ಪಫೋಸ್ (ಸೈಪ್ರಸ್): ಭಾರತದ ಯುವ ಚೆಸ್ ತಾರೆ ಆರ್.ಪ್ರಜ್ಞಾನಂದ ಅವರು ಭಾನುವಾರ ಆರಂಭವಾದ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಮೊದಲ ಸುತ್ತಿನ ಆಟದಲ್ಲಿ ನೆದರ್ಲೆಂಡ್ಸ್‌ನ ಅನಿಶ್ ಗಿರಿ ಅವರನ್ನು ಸೋಲಿಸಿ ಶುಭಾರಂಭ ಮಾಡಿದರು.

ಓಪನ್ ವಿಭಾಗದಲ್ಲಿ ಕಣದಲ್ಲಿರುವ ಎಂಟು ಮಂದಿಯಲ್ಲಿ ಭಾರತದ ಏಕೈಕ ಆಟಗಾರನಾಗಿರುವ ಪ್ರಜ್ಞಾನಂದ ಅವರಿಗೆ 51ನೇ ನಡೆಯಲ್ಲಿ ಜಯ ಒಲಿಯಿತು. ಕಪ್ಪು ಕಾಯಿಗಳಲ್ಲಿ ಆಡುತ್ತಿದ್ದ ಡಚ್ ಗ್ರ್ಯಾಂಡ್‌ಮಾಸ್ಟರ್ ಆಟದ ಹೆಚ್ಚಿನ ಅವಧಿಯಲ್ಲಿ ಒಂದು ಕಡಿಮೆ ಕಾಲಾಳು (ಪಾನ್) ಹೊಂದಿದ್ದು, ಸಮಯದ ಒತ್ತಡಕ್ಕೂ ಸಿಲುಕಿದ್ದರು. ಸೋಮವಾರ ಎರಡನೇ ಸುತ್ತಿನಲ್ಲಿ ಚೆನ್ನೈನ ಆಟಗಾರ, ಚೀನಾದ ವೀ ಯಿ ಅವರನ್ನು ಎದುರಿಸಲಿದ್ದಾರೆ.

ವಿಶ್ವಕಪ್ ವಿಜೇತ, ಉಜ್ಬೇಕಿಸ್ತಾನದ ಆಟಗಾರ ಜಾವೊಕಿರ್ ಸಿಂದರೋವ್ ಅವರು ರಷ್ಯಾದ ಆ್ಯಂಡ್ರಿ ಇಸಿಪೆಂಕೊ ಅವರನ್ನು ಸೋಲಿಸಿದರು. ಜರ್ಮನಿಯ ಮಥಾಯಸ್ ಬ್ಲೂಬಮ್ ಮತ್ತು ವೀ ಯಿ ನಡುವಣ ಪಂದ್ಯ ಡ್ರಾ ಆಯಿತು.

ಮಹಿಳೆಯರ ವಿಭಾಗದ ಎಲ್ಲ ನಾಲ್ಕೂ ಆಟಗಳು ಡ್ರಾ ಆದವು. ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್ ಮತ್ತು ಅನ್ನಾ ಮುಝಿಚುಕ್ ಪಾಯಿಂಟ್ ಹಂಚಿಕೊಂಡರು. ಭಾರತದ ವೈಶಾಲಿ ಆರ್. ಮತ್ತು ಬಿಬಿಸಾರ ಅಸುನ್ಬಯೇವಾ (ಕಜಾಕಸ್ತಾನ) ನಡುವಣ, ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ (ರಷ್ಯಾ) ಮತ್ತು ಕ್ಯಾತರಿನಾ ಲಾಗ್ನೊ (ರಷ್ಯಾ) ನಡುವಣ, ಝು ಜಿನೆರ್ (ಚೀನಾ) ಮತ್ತು ತಾನ್ ಝೊಂಗ್‌ಇ (ಚೀನಾ) ನಡುವಣ ಆಟಗಳೂ ಡ್ರಾದಲ್ಲಿ ಅಂತ್ಯಗೊಂಡವು.

ವೈಶಾಲಿ ಎರಡನೇ ಸುತ್ತಿನಲ್ಲಿ ಸ್ವದೇಶದ ದಿವ್ಯಾ ಅವರನ್ನು ಎದುರಿಸಲಿದ್ದಾರೆ.

ಕೊಕ್ಕೊ: ದಾವಣಗೆರೆ ವಿ.ವಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ದಾವಣಗೆರೆ: ಲೀಗ್ ಹಂತದ ಮೂರು ಪಂದ್ಯಗಳಲ್ಲೂ ಗೆದ್ದು ಬೀಗಿದ ಆತಿಥೇಯ ದಾವಣಗೆರೆ ವಿಶ್ವವಿದ್ಯಾಲಯದ ಪುರುಷರ ತಂಡ ಇಲ್ಲಿ ನಡೆಯುತ್ತಿರುವ ದಕ್ಷಿಣ ವಲಯ ಅಂತರ ವಿಶ್ವವಿದ್ಯಾಲಯಗಳ ಕೊಕ್ಕೊ ಟೂರ್ನಿಯಲ್ಲಿ ಚಾಂಪಿಯನ್ ಆಯಿತು.

ವಿ.ವಿ. ಆವರಣದ ಅಂಕಣಗಳಲ್ಲಿ ಭಾನುವಾರ ದಾವಣಗೆರೆ ತಂಡದ ಆಟಗಾರರು ಮಿಂಚಿದರು. ಹಾಲಿ ಚಾಂಪಿಯನ್ ಮಂಗಳೂರು ವಿ.ವಿ (17–15), ಬೆಂಗಳೂರು ಉತ್ತರ ವಿ.ವಿ (10–8) ಹಾಗೂ ಕ್ಯಾಲಿಕಟ್ ವಿ.ವಿ (13–12) ತಂಡಗಳನ್ನು ಸೋಲಿಸಿ ಮೊದಲ ಬಾರಿಗೆ ಟ್ರೋಫಿ ಎತ್ತಿ ಹಿಡಿದರು. ಆತಿಥೇಯ ತಂಡದ ಟಿ.ಹುಲಗಪ್ಪ, ಶರತ್, ಆಕಾಶ್, ಆಸೀಫ್ ಹಾಗೂ ವೇಣುಗೋಪಾಲ್ ಅತ್ಯುತ್ತಮವಾಗಿ ಆಡಿದರು.

ಮಂಗಳೂರು ವಿ.ವಿ ವಿರುದ್ಧದ ನಿರ್ಣಾಯಕ ಪಂದ್ಯದ ಮೊದಲಾರ್ಧದಲ್ಲಿ ದಾವಣಗೆರೆ ತಂಡ 8–9ರಿಂದ ಹಿಂದಿತ್ತು. ಆದರೆ ದ್ವಿತೀಯಾರ್ಧದಲ್ಲಿ ಪುಟಿದೆದ್ದು ಗೆಲುವು ಒಲಿಸಿಕೊಂಡಿತು.

ಆಡಿದ ಮೂರರಲ್ಲಿ ಎರಡು ಪಂದ್ಯಗಳನ್ನು ಗೆದ್ದು ಒಟ್ಟು 6 ಪಾಯಿಂಟ್ಸ್ ಕಲೆಹಾಕಿದ ಮಂಗಳೂರು ವಿ.ವಿ ರನ್ನರ್ಸ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟಿತು. ಬೆಂಗಳೂರು ಉತ್ತರ ವಿ.ವಿ ಹಾಗೂ ಕ್ಯಾಲಿಕಟ್ ವಿ.ವಿ ತಂಡಗಳು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ಪಡೆದವು.

ಮಂಗಳೂರು ತಂಡದ ಸಂಗೀತ್ ಗೌಡ ಅತ್ಯುತ್ತಮ ರಕ್ಷಣಾ ಆಟಗಾರ, ಬೆಂಗಳೂರು ಉತ್ತರ ತಂಡದ ಜಸ್ವಂತ್ ಉತ್ತಮ 'ಅಟ್ಯಾಕರ್', ದಾವಣಗೆರೆಯ ಟಿ.ಹುಲಗಪ್ಪ ಅತ್ಯುತ್ತಮ ಆಲ್‌ರೌಂಡರ್ ಹಾಗೂ ಕ್ಯಾಲಿಕಟ್ ತಂಡದ ಗೋಕುಲ್ ದಾಸ್ ಉದಯೋನ್ಮುಖ ಆಟಗಾರ ಪ್ರಶಸ್ತಿ ಪಡೆದರು.

ಸಬಲೆಂಕಾಗೆ ಕಿರೀಟ

ಎಎಫ್‌ಪಿ ಚಿತ್ರ

ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ (ಬೆಲರೂಸ್) ಅವರು ಭಾನುವಾರ ನಡೆದ ಫೈನಲ್‌ನಲ್ಲಿ 6–2, 4–6, 6–3ರಿಂದ ಅಮೆರಿಕದ ಕೊಕೊ ಗಾಫ್ ಅವರನ್ನು ಮಣಿಸಿ ಮಯಾಮಿ ಓಪನ್ ಟೆನಿಸ್ ಟೂರ್ನಿಯ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು

ಆದಿವಾಸಿ ಕೂಟ: ಕುಸ್ತಿಯಲ್ಲಿ ಜಾರ್ಖಂಡ್‌ಗೆ ಚಿನ್ನ 'ಡಬಲ್'

ರಾಯಪುರ (ಪಿಟಿಐ): ಜಾರ್ಖಂಡ್ ಮತ್ತು ಹಿಮಾಚಲ ಪ್ರದೇಶದ ಪೈಲ್ವಾನರು ಖೇಲೊ ಇಂಡಿಯಾ ಆದಿವಾಸಿ ಕ್ರೀಡಾಕೂಟದ ಐದನೇ ದಿನವಾದ ಭಾನುವಾರ ತಲಾ ಎರಡು ಚಿನ್ನದ ಪದಕಗಳನ್ನು ಗೆದ್ದರು. ವೇಟ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಮಿಜೋರಾಂನ ಸ್ಪರ್ಧಿಗಳು ಪಾರಮ್ಯ ಮೆರೆದರು.

ಕುಸ್ತಿ ಸ್ಪರ್ಧೆಯ ಮಹಿಳೆಯರ 50 ಕೆ.ಜಿ. ವಿಭಾಗದಲ್ಲಿ ಪೂನಮ್ ಓರಾನ್ ಪ್ರಶಸ್ತಿ ಗೆದ್ದು, ಜಾರ್ಖಂಡ್‌ನ ಚಿನ್ನದ ಪದಕದ ಖಾತೆ ತೆರೆದರು. ಅವರು ಫೈನಲ್‌ನಲ್ಲಿ 6–3 ಅಂತರದಿಂದ ತೆಲಂಗಾಣದ ಗೀತಾ ಕೆ. ಅವರನ್ನು ಮಣಿಸಿದರು.

ಪುರುಷರ 67 ಕೆ.ಜಿ. ಗ್ರೀಕೊ ರೋಮನ್ ಫೈನಲ್‌ನಲ್ಲಿ ಜಾರ್ಖಂಡ್‌ನ ಅಂಜಿತ್ ಕುಮಾರ್ ಮುಂಡಾ ಅವರು ಗುಜರಾತ್‌ನ ಮುಕೇಶ್ ವಾಸ್ವಾ ಅವರನ್ನು ತಾಂತ್ರಿಕ ಶ್ರೇಷ್ಠತೆ ಆಧಾರದಲ್ಲಿ ಸೋಲಿಸಿ ಸ್ವರ್ಣಕ್ಕೆ ಕೊರಳೊಡ್ಡಿದರು.

ನವೀಶ್ ಕುಮಾರ್ (97 ಕೆ.ಜಿ. ಗ್ರೀಕೊ ರೋಮನ್) ಮತ್ತು ಪ್ರಿಯಾಂಕಾ ಚೌಧರಿ (ಮಹಿಳೆಯರ 62 ಕೆ.ಜಿ.) ಅವರ ಮೂಲಕ ಹಿಮಾಚಲ ಪ್ರದೇಶಕ್ಕೆ ಎರಡು ಚಿನ್ನದ ಪದಕಗಳು ಲಭಿಸಿದವು. ಮಿಜೋರಾಂನ ಜೊಸಾಂಗ್ ಜುವಾಲಿ (ಮಹಿಳೆಯರ 86+ ಕೆಜಿ) ಮತ್ತು ಡೇವಿಡ್ ಜೊಹ್ಮಿಂಗ್ಮಾವಿಯಾ (ಪುರುಷರ 110+ ಕೆಜಿ) ಅಮೋಘ ಸಾಧನೆಯೊಂದಿಗೆ ಚಿನ್ನ ಗೆದ್ದರು. ಇದರೊಂದಿಗೆ ಮಿಜೋರಾಂನ ಪದಕ ಪಟ್ಟಿಯಲ್ಲಿ ಐದನೇ ಸ್ಥಾನಕ್ಕೆ ಏರಿತು.

15 ಚಿನ್ನ, 6 ಬೆಳ್ಳಿ ಮತ್ತು 4 ಕಂಚು ಗೆದ್ದ ಕರ್ನಾಟಕವು ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ದಲ್ಲಿ ಮುಂದುವರಿದಿದೆ. ಒಡಿಶಾ (9 ಚಿನ್ನ, 4 ಬೆಳ್ಳಿ, 10 ಕಂಚು) ಎರಡನೇ ಸ್ಥಾನದಲ್ಲಿದೆ.

ವೇಟ್‌ಲಿಫ್ಟರ್ ಸ್ಯಾಂಬೊ ಲಪುಂಗ್ ಅವರು ಅರುಣಾಚಲ ಪ್ರದೇಶವನ್ನು (5 ಚಿನ್ನ, 1 ಬೆಳ್ಳಿ, 2 ಕಂಚು) ಮೂರನೇ ಸ್ಥಾನಕ್ಕೆ ಏರಿಸಲು ನೆರವಾದರು. ಪುರುಷರ 100 ಕೆಜಿ ವಿಭಾಗದಲ್ಲಿ ಸ್ಯಾಂಬೊ ಒಟ್ಟು 299 ಭಾರ ಎತ್ತುವ ಮೂಲಕ ಚಿನ್ನದ ಸಾಧನೆ ಮೆರೆದರು. ಅಸ್ಸಾಂ (4 ಚಿನ್ನ, 9 ಬೆಳ್ಳಿ, 9 ಕಂಚು) ನಾಲ್ಕನೇ ಸ್ಥಾನದಲ್ಲಿದೆ.

ಮಾಡಿಫೈಡ್ ಡೀಸೆಲ್ ವಿಭಾಗದಲ್ಲಿ ವಾಹನವೊಂದು ಸಾಗಿದ ಪರಿ

ಬೋಪಯ್ಯ–ಬೋಪಣ್ಣ ಜೋಡಿಗೆ ಪ್ರಶಸ್ತಿ

ಮಂಗಳೂರು: ಕೊಂಗೇಟಿರ ಬೋಪಯ್ಯ–ಬೋಪಣ್ಣ ಎಂ.ಪಿ ಮತ್ತು ರಾಹುಲ್–ಪ್ರಮೋದ್ ಜೋಡಿ ಮಂಗಳೂರು ತಾಲ್ಲೂಕಿನ ಗಂಜಿಮಠ ಸಮೀಪದ ಒಡ್ಡೂರು ಫಾರ್ಮ್ಸ್‌ನಲ್ಲಿ ನಡೆದ ಐಎಂಎಸ್‌ಸಿ ಆಫ್ ರೋಡ್ ಟ್ರೋಫಿ ಮೋಟಾರ್ ಸ್ಪೋರ್ಟ್ಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಮಾಡಿಫೈಡ್ ಡೀಸೆಲ್ ಮತ್ತು ಮಾಡಿಫೈಡ್ ಪೆಟ್ರೋಲ್ ವಾಹನ ವಿಭಾಗದ ಪ್ರಶಸ್ತಿ ಗೆದ್ದುಕೊಂಡರು.

ಭಾನುವಾರ ಮುಕ್ತಾಯಗೊಂಡ ಚಾಂಪಿಯನ್‌ಷಿಪ್‌ನ ಮಾಡಿಫೈಡ್ ಡೀಸೆಲ್ ವಿಭಾಗದಲ್ಲಿ ಅಜಿತ್ ಮತ್ತು ವಿಪಿನ್ ಎಂ.ಎಸ್, ಮಾಡಿಫೈಡ್ ಪೆಟ್ರೋಲ್ ವಿಭಾಗದಲ್ಲಿ ವಿಷ್ಣು–ಜಾರ್ಜ್ ರನ್ನರ್ ಅಪ್ ಆದರು.

ಬಾಲ್ ಬ್ಯಾಡ್ಮಿಂಟನ್: ರಾಜ್ಯ ರನ್ನರ್ ಅಪ್

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ಮಹಿಳೆಯರ ತಂಡ ತಮಿಳುನಾಡಿನ ತೆಂಗಾಸಿಯಲ್ಲಿ ಭಾನುವಾರ ಮುಕ್ತಾಯಗೊಂಡ ದಕ್ಷಿಣ ವಲಯ ಬಾಲ್‌ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ರನ್ನರ್ ಅಪ್ ಆಯಿತು. ಪುರುಷರ ವಿಭಾಗದಲ್ಲಿ ಕರ್ನಾಟಕ ಮೂರನೇ ಸ್ಥಾನ ಗಳಿಸಿತು.

ರೌಂಡ್ ರಾಬಿನ್ ಲೀಗ್ ಮಾದರಿಯಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ಮಹಿಳೆಯರು ಪುದುಚೇರಿ, ತೆಲಂಗಾಣ, ಕೇರಳ ಹಾಗೂ ಆಂಧ್ರಪ್ರದೇಶ ತಂಡಗಳನ್ನು ನೇರ ಸೆಟ್‌ಗಳಿಂದ ಸೋಲಿಸಿದರು. ಕೊನೆಯ ಪಂದ್ಯದಲ್ಲಿ ತಮಿಳುನಾಡು ವಿರುದ್ಧ 27-35, 29-35 ಪಾಯಿಂಟ್‌ಗಳಿಂದ ಸೋತಿತು.

ಪುರುಷರ ತಂಡ ಲೀಗ್ ಹಂತದಲ್ಲಿ ತೆಲಂಗಾಣ, ಪುದುಚೇರಿ ಹಾಗೂ ಕೇರಳ ತಂಡಗಳನ್ನು ನೇರ ಸೆಟ್‌ಗಳಿಂದ ಸೋಲಿಸಿತ್ತು. ಆದರೆ ಆಂಧ್ರಪ್ರದೇಶ ಹಾಗೂ ತಮಿಳುನಾಡು ವಿರುದ್ಧ ಸೋತು ಮೂರನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಳ್ಳಬೇಕಾಯಿತು ಎಂದು ಕರ್ನಾಟಕ ಬಾಲ್ ಬ್ಯಾಡ್ಮಿಂಟನ್ ಸಂಸ್ಥೆ ತಿಳಿಸಿದೆ.

ಮಾನುಷ್-ದಿಯಾ ಜೋಡಿ ರನ್ನರ್ಸ್

ನವದೆಹಲಿ (ಪಿಟಿಐ): ಭಾರತದ ಮಾನವ್ ಶಾ ಹಾಗೂ ದಿಯಾ ಚಿತಳೆ ಅವರು ಟ್ಯುನಿಸ್‌ನಲ್ಲಿ ನಡೆಯುತ್ತಿರುವ ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯ ಮಿಶ್ರ ಡಬಲ್ಸ್‌ನಲ್ಲಿ ರನ್ನರ್ಸ್‌ಅಪ್ ಆದರು.

ಅಗ್ರ ಶ್ರೇಯಾಂಕ ಪಡೆದಿದ್ದ ಭಾರತದ ಜೋಡಿಯು ಶನಿವಾರ ತಡರಾತ್ರಿ ನಡೆದ ಫೈನಲ್‌ನಲ್ಲಿ 1-3ರಿಂದ (9-11, 13-11, 10–12, 5–11) ಸ್ಪೇನ್‌ನ ಅಲ್ವರೊ ರಾಬೆಲ್ಸ್ ಹಾಗೂ ಮರಿಯಾ ಶಿಯಾವೊ ವಿರುದ್ಧ ಪರಾಭವಗೊಂಡಿತು.

ಮಾನುಷ್- ಹರ್ಮೀತ್ ದೇಸಾಯಿ ಅವರು ಪುರುಷರ ಡಬಲ್ಸ್‌ನಲ್ಲಿ ಪ್ರಶಸ್ತಿ ಸುತ್ತು ಪ್ರವೇಶಿಸಿದರು. ಈ ಜೋಡಿಯು ನಾಲ್ಕರ ಘಟ್ಟದಲ್ಲಿ 3-2ರಿಂದ (9–11, 5–11, 11–7, 11–5, 11–8) ಸ್ವದೇಶದ ಸ್ನೇಹಿತ್ ಸುರವಜ್ಜುಲ ಹಾಗೂ ಆಕಾಶ್ ಪಾಲ್ ವಿರುದ್ಧ ರೋಚಕ ಜಯ ಸಾಧಿಸಿತು.

ಮಾನುಷ್- ಹರ್ಮೀತ್ ಜೋಡಿಯು ಫೈನಲ್‌ನಲ್ಲಿ ಅಗ್ರ ಶ್ರೇಯಾಂಕ ಪಡೆದಿರುವ ಫ್ರಾನ್ಸ್‌ನ ಫ್ಲಾರಿಯನ್ ಬುರಾಸಾದ್ ಹಾಗೂ ಈಸ್ಟಬನ್ ಡಾರ್ ಅವರನ್ನು ಎದುರಿಸಲಿದ್ದಾರೆ.

ಆದರೆ, ಮಹಿಳೆಯರ ಡಬಲ್ಸ್‌ನಲ್ಲಿ ಕಣಕ್ಕಿಳಿದಿದ್ದ ದಿಯಾ- ಯಶಸ್ವಿನಿ ಘೋರ್ಪಡೆ ಹಾಗೂ ಸಿಂಡ್ರೆಲಾ ದಾಸ್- ಸುಕೃತಾ ಮುಖರ್ಜಿ ಜೋಡಿಯ ಹೋರಾಟ ಸೆಮಿಫೈನಲ್‌ನಲ್ಲಿ ಅಂತ್ಯಗೊಂಡಿತು.

ಪ್ರಶಸ್ತಿಯೊಂದಿಗೆ ಭಾರತದ ಮಾನುಷ್ ಶಾ ಹಾಗೂ ದಿಯಾ ಚಿತಳೆ ಚಿತ್ರ: ಎಸ್‌ಎಐ 'ಎಕ್ಸ್' ಖಾತೆ

AVA
MEDIMIX®
Trusted Since 1969

ನಿಮ್ಮನ್ನು ಅಂದು ಇಂದು ಎಂದೆಂದಿಗೂ ಸುರಕ್ಷಿತವಾಗಿರಿಸುವ ಮೆಡಿಮಿಕ್ಸ್

ಕಳೆದ 50 ಸಂವತ್ಸರಗಳಿಗೂ ಹೆಚ್ಚಿನ ಕಾಲದಿಂದ ಮೆಡಿಮಿಕ್ಸ್ ಕ್ಲಾಸಿಕ್, ತನ್ನ ಆಯುರ್ವೇದದ ವಿಶ್ವಸನೀಯ ಜಾಣ್ಮೆಯೊಂದಿಗೆ ನಿಮ್ಮ ತ್ವಚೆಗೆ ಕಾಳಜಿ ಮತ್ತು ಸಂರಕ್ಷಣೆಯನ್ನು ಒದಗಿಸುತ್ತ ಬಂದಿದೆ. 18 ಆಯುರ್ವೇದಿಕ್ ಗಿಡಮೂಲಿಕೆಗಳ ಶಕ್ತಿಯನ್ನು ಹೊಂದಿರುವ ಇದು, ತನ್ನ ಕೋಮಲ ಮತ್ತು ನೈಸರ್ಗಿಕ ಆರೈಕೆಯೊಂದಿಗೆ ಹಲವು ಪೀಳಿಗೆಗಳನ್ನು ಸಂರಕ್ಷಿಸಿದೆ.

ಪ್ರಕೃತಿಯು ನಮ್ಮನ್ನು ಪೋಷಿಸುತ್ತಿರುವವರೆಗೂ, ಮೆಡಿಮಿಕ್ಸ್ ಇಂದಿಗೂ, ಎಂದಿಗೂ ನಿಮ್ಮ ತ್ವಚೆಯ ಸೌಂದರ್ಯದ ಕಾಳಜಿ ವಹಿಸುತ್ತಲೇ ಇರುತ್ತದೆ.



Powered by 18 Ayurvedic Herbs
Protects skin. Everyday.
Supports healthy, clear skin naturally
Gentle enough for daily use, trusted for generations